ಶುಕ್ರವಾರ, ಜೂನ್ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 167 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ನಟನೆಯೇ ತಮ್ಮಿಷ್ಟದ ಬದುಕು ಎಂದು ಖುಷಿಯಾಗಿದ್ದಾರೆ ನಾಗಭೂಷಣ್

ಆಳ-ಅಗಲ — 5ಜಿ ಹೊಸ್ತಿಲಲ್ಲಿ...

ಕೋವಿಡ್: ಹೊಸ ತಳಿ ಪತ್ತೆಗಾಗಿ ಪರೀಕ್ಷೆ 8

ಗೊಬ್ಬರ ಕೇಳಿದ್ದಕ್ಕೆ ಕೇಂದ್ರ ಸಚಿವ ಖೂಬಾ ತರಾಟೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
51,495 ▼	15,360 ▼	₹52,630 (ಬೆಂಗಳೂರು) ▲	₹62,800 (ಬೆಂಗಳೂರು) ▲	78.10 ▲

ಬಿಹಾರ, ಉತ್ತರ ಪ್ರದೇಶ, ರಾಜಸ್ಥಾನ, ಹರಿಯಾಣದಲ್ಲಿ ಪ್ರತಿಭಟನೆ, ರೈಲು ಬೋಗಿಗಳಿಗೆ ಬೆಂಕಿ

ಅಗ್ನಿಪಥ ವಿರುದ್ಧ ಆಕ್ರೋಶ ತೀವ್ರ

ಪಟ್ನಾ/ಆಗ್ರಾ/ಜೈಪುರ/ಗುರುಗ್ರಾಮ (ಪಿಟಿಐ): ಕೇಂದ್ರ ಸರ್ಕಾರವು ಪ್ರಕಟಿಸಿರುವ ಸೈನಿಕರ ನೇಮಕಾತಿಯ ಹೊಸ ನೀತಿ 'ಅಗ್ನಿಪಥ ಯೋಜನೆ' ವಿರುದ್ಧ ಉತ್ತರ ಭಾರತದ ವಿವಿಧೆಡೆ ಗುರುವಾರವೂ ಭಾರಿ ಪ್ರತಿಭಟನೆ ನಡೆದಿದೆ. ರಾಜಕೀಯ ಪಕ್ಷಗಳು ಈ ಯೋಜನೆಯ ಪರ ಮತ್ತು ವಿರುದ್ಧದ ನಿಲುವು ತಳೆದಿವೆ.

ಬಿಹಾರದಲ್ಲಿ ಆಕ್ರೋಶ ಉಗ್ರರೂಪ ಪಡೆದಿದೆ. ರೈಲು ಬೋಗಿಗಳಿಗೆ ಬೆಂಕಿ ಹಚ್ಚಲಾಗಿದೆ, ಬಸ್‌ಗಳಿಗೆ ಕಲ್ಲು ತೂರಲಾಗಿದೆ. ರಸ್ತೆಯಲ್ಲಿ ಟೈರ್ ಸುಡಲಾಗಿದೆ. ಶಾಸಕಿ ಅರುಣಾ ದೇವಿ ಸೇರಿದಂತೆ ಕಲ್ಲು ತೂರಾಟದಲ್ಲಿ ಹಲವರು ಗಾಯಗೊಂಡಿದ್ದಾರೆ. ಪ್ರತಿಭಟನಕಾರರು ಬೀದಿಗಳಲ್ಲಿ ಕವಾಯತು ನಡೆಸಿ ಕೂಡ ಪ್ರತಿಭಟಿಸಿದ್ದಾರೆ.

ಪೊಲೀಸರು ಲಾಠಿ ಪ್ರಹಾರ, ಅಶ್ರುವಾಯು ಷೆಲ್ ಸಿಡಿಸಿ ಉದ್ರಿಕ್ತ ಯುವಕರನ್ನು ಚದುರಿಸಲು ಯತ್ನಿಸಿದರು. ಭಭುವಾ ಮತ್ತು ಛಪರ ರೈಲು ನಿಲ್ದಾಣಗಳಲ್ಲಿ ಅತಿ ಹೆಚ್ಚಿನ ನಷ್ಟ ಉಂಟಾಗಿದೆ. ಅಲ್ಲಿ ರೈಲು ಬೋಗಿಗಳಿಗೆ ಬೆಂಕಿ ಹಚ್ಚಲಾಗಿದೆ.

ಹಾಜಿಪುರ ಕೇಂದ್ರವಾಗಿರುವ ರೈಲ್ವೆ ವಲಯದಲ್ಲಿ ಹಲವು ರೈಲುಗಳನ್ನು ರದ್ದು ಮಾಡಲಾಗಿದೆ. ಜೆಹಾನಾಬಾದ್, ಬಕ್ಸಾರ್, ಕತಿಹಾರ್, ಸರಣ್, ಭೋಜ್‌ಪುರ, ಕೈಮೂರ್ ಜಿಲ್ಲೆಗಳಲ್ಲಿ ರಸ್ತೆ ತಡೆ ನಡೆದಿದೆ. ಒಟ್ಟಾರೆ 34 ರೈಲುಗಳ ಸಂಚಾರ ರದ್ದು ಮಾಡಲಾಗಿದೆ. 72 ರೈಲುಗಳು ವಿಳಂಬವಾಗಿ ಸಂಚರಿಸಿವೆ.

ಉತ್ತರ ಪ್ರದೇಶದ ಆಗ್ರಾದಲ್ಲಿ ಸರ್ಕಾರಿ ಕಚೇರಿಯ ಕಟ್ಟಡಗಳಿಗೆ ಕಲ್ಲು ತೂರಲಾಗಿದೆ. ಬುಲಂದ್‌ಶಹರ್ ಮತ್ತು ಬಲಿಯಾದಲ್ಲಿ ಪ್ರತಿಭಟನೆ ನಡೆದಿದೆ. ಆರು ಜಿಲ್ಲೆಗಳಲ್ಲಿ ಪ್ರತಿಭಟನೆ ವ್ಯಾಪಿಸಿದೆ.

ವಾರಾಣಸಿ ವಿಭಾಗದಲ್ಲಿ 21 ರೈಲುಗಳ ಸಂಚಾರ ರದ್ದುಪಡಿಸಲಾಗಿದೆ. ಮುಂಜಾಗ್ರತೆಯಾಗಿ ಬಲಿಯಾ ಮತ್ತು ಆಸುಪಾಸಿನ ಜಿಲ್ಲೆಗಳಲ್ಲಿ ರೈಲುಗಳ ಸಂಚಾರ ಸ್ಥಗಿತಗೊಳಿಸಲಾಯಿತು ಎಂದು ಈಶಾನ್ಯ ರೈಲ್ವೆವಲಯದ ಹೇಳಿಕೆ ತಿಳಿಸಿದೆ.

ರಾಜಸ್ಥಾನದ ಜೋಧಪುರ, ಸೀಕರ್, ಜೈಪುರ, ನಾಗೌರ್, ಅಜ್ಮೀರ್ ಮತ್ತು ಝುಂಝುನೂ ಜಿಲ್ಲೆಗಳಲ್ಲೂ ಪ್ರತಿಭಟನೆ ನಡೆದಿದೆ. ಅಹಿತಕರ ಘಟನೆ ವರದಿಯಾಗಿಲ್ಲ ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಹವಾ ಸಿಂಗ್ ಗುಮಾರಿಯಾ ತಿಳಿಸಿದ್ದಾರೆ.

3ನೇ ಪುಟ ನೋಡಿ

ಬಿಹಾರದ ಸರನ್ ಜಿಲ್ಲೆಯ ಛಪರ ರೈಲು ನಿಲ್ದಾಣದಲ್ಲಿ 'ಅಗ್ನಿಪಥ' ಯೋಜನೆ ವಿರೋಧಿಸಿ ಯುವಕರು ಗುರುವಾರ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ರೈಲು ಬೋಗಿಗಳಿಗೆ ಬೆಂಕಿ ಹಚ್ಚಿದರು – ಪಿಟಿಐ ಚಿತ್ರ

4 ವರ್ಷ ಸೇವೆ ಬಳಿಕ ಅಪಾರ ಅವಕಾಶ: ಸರ್ಕಾರ ಸ್ಪಷ್ಟನೆ

ಪ್ರತಿಭಟನೆಗಳು ತೀವ್ರಗೊಂಡ ಬೆನ್ನಿಗೇ, ಕೇಂದ್ರ ಸರ್ಕಾರವು ಅಗ್ನಿಪಥ ಯೋಜನೆಯ ಬಗ್ಗೆ ಸ್ಪಷ್ಟೀಕರಣ ನೀಡಿದೆ. ಈ ಯೋಜನೆಯು ಸಶಸ್ತ್ರ ಪಡೆಗಳಲ್ಲಿ ಹೊಸ ಸಾಮರ್ಥ್ಯಗಳನ್ನು ತುಂಬಲಿದೆ ಮತ್ತು ಅಗ್ನಿಪಥ ಯೋಜನೆ ಮೂಲಕ ಸೇನೆಗೆ ಸೇರಿದ ಯುವಕರಿಗೆ ಖಾಸಗಿ ಕ್ಷೇತ್ರದಲ್ಲಿ ಅವಕಾಶಗಳನ್ನು ತೆರೆದುಕೊಡಲಿದೆ. ಅದಲ್ಲದೆ, ನಾಲ್ಕು ವರ್ಷಗಳ ಬಳಿಕ ದೊರೆಯುವ ನಿಧಿಯಿಂದಾಗಿ ಅವರು ಉದ್ಯಮಿಗಳಾಗಿ ಬೆಳೆಯುವ ಸಾಧ್ಯತೆಯೂ ಇದೆ ಎಂದು ಸರ್ಕಾರ ಹೇಳಿದೆ.

ಯೋಜನೆಗೆ ಸಂಬಂಧಿಸಿ 'ಸತ್ಯ ಮತ್ತು ಮಿಥ್ಯೆ' ಏನು ಎಂಬುದನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. 'ಅಗ್ನಿಪಥ ಯೋಜನೆ' ಜಾರಿಗೆ ಬಂದ ಬಳಿಕ ಸೇನೆಯ ನೇಮಕಾತಿಯು ಈಗ ಇರುವುದಕ್ಕಿಂತ ಮೂರು ಪಟ್ಟು ಹೆಚ್ಚಾಗಲಿದೆ ಎಂದೂ ಹೇಳಲಾಗಿದೆ.

ನಾಲ್ಕು ವರ್ಷಗಳ ಕರ್ತವ್ಯದ ಬಳಿಕ ಸಮಾಜಕ್ಕೆ ಮರಳುವ 'ಅಗ್ನಿವೀರರು' ಸಮಾಜಕ್ಕೆ ದೊಡ್ಡ ಅಪಾಯವಾಗಿ ಪರಿವರ್ತನೆ ಆಗಬಹುದು ಎಂಬ ಟೀಕೆಯನ್ನು ಅಧಿಕಾರಿಗಳು ಅಲ್ಲಗಳೆದಿದ್ದಾರೆ. 'ಈ ಆರೋಪವು ಭಾರತದ ಸಶಸ್ತ್ರ ಪಡೆಗಳ ನೈತಿಕತೆ ಮತ್ತು ಮೌಲ್ಯಗಳಿಗೆ ಮಾಡಿದ ಅಪಮಾನ. ನಾಲ್ಕು ವರ್ಷ ಸೇನೆಯ ಸಮವಸ್ತ್ರ ತೊಟ್ಟ ಯುವಕರು ಜೀವನವಿಡೀ ದೇಶಕ್ಕೆ ಬದ್ಧರಾಗಿ ಇರುತ್ತಾರೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 7

ವಯೋಮಿತಿ 23 ವರ್ಷಕ್ಕೆ ಹೆಚ್ಚಳ

ನವದೆಹಲಿ (ಪಿಟಿಐ): 'ಅಗ್ನಿಪಥ' ಯೋಜನೆಯಡಿ ನೇಮಕಾತಿಗೆ ಗರಿಷ್ಠ ವಯೋಮಿತಿಯನ್ನು 2022ರ ಸಾಲಿಗೆ ಅನ್ವಯಿಸಿ ಕೇಂದ್ರ ಸರ್ಕಾರವು ಗುರುವಾರ 23 ವರ್ಷಕ್ಕೆ ಹೆಚ್ಚಿಸಿದೆ. ಮೊದಲು ಪ್ರಕಟಿಸಿದ ಪ್ರಕಾರ ಗರಿಷ್ಠ ವಯೋಮಿತಿ 21 ವರ್ಷವಾಗಿತ್ತು.

ಪ್ರಧಾನಿ ಮೋದಿ ಅವರು ನಿರುದ್ಯೋಗಿ ಯುವಜನರ ಮಾತು ಕೇಳಬೇಕು. ಅಗ್ನಿಪಥದಲ್ಲಿ ನಡೆಸಿ ಅವರ ತಾಳ್ಮೆಯನ್ನು ಅಗ್ನಿಪರೀಕ್ಷೆಗೆ ಒಳಪಡಿಸಬಾರದು
ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದ

15 ವರ್ಷ ಕರ್ತವ್ಯದಲ್ಲಿದ್ದು ನಿವೃತ್ತರಾದವರಿಗೆ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ದೊರಕುತ್ತಿಲ್ಲ. ಹೀಗಿರುವಾಗ 4 ವರ್ಷ ಕರ್ತವ್ಯ ಮಾಡಿದವರಿಗೆ ಸಿಗಬಹುದೇ?
ವರುಣ್ ಗಾಂಧಿ, ಬಿಜೆಪಿ ಸಂಸದ

ಅಗ್ನಿಪಥ ಯೋಜನೆಯಿಂದ ಲಕ್ಷಾಂತರ ಯುವಜನರಿಗೆ ಪ್ರಯೋಜನ ಆಗುವುದಷ್ಟೇ ಅಲ್ಲ, ಅವರಲ್ಲಿನ ರಾಷ್ಟ್ರೀಯತೆಯ ಭಾವನೆಗಳು ಬಲಗೊಳ್ಳಲಿವೆ
ಅಶ್ವಿನಿ ಚೌಬೆ, ಕೇಂದ್ರ ಸಚಿವ

'ಸೇಡಿಗಾಗಿ ನೆಲಸಮ ಬೇಡ'

ನವದೆಹಲಿ (ಪಿಟಿಐ): 'ಒತ್ತುವರಿ ತೆರವು ಕಾರ್ಯಾಚರಣೆಗಳು ಕಾನೂನುಬದ್ಧವಾಗಿರಬೇಕು. ಬದಲಿಗೆ ಪ್ರತೀಕಾರ ಕ್ರಮವಾಗಿರಬಾರದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ. 'ಪ್ರಯಾಗರಾಜ್ ಮತ್ತು ಕಾನ್ಪುರದಲ್ಲಿ ಈಚೆಗೆ ನಡೆಸಿದ ಕಟ್ಟಡ ನೆಲಸಮ ಕಾರ್ಯಾಚರಣೆಗಳು ಕಾನೂನುಬಾಹಿರ ಎಂಬ ಆರೋಪದ ಬಗ್ಗೆ ಮೂರು ದಿನಗಳಲ್ಲಿ ಪ್ರತಿಕ್ರಿಯೆ ನೀಡಿ ಎಂದು ಉತ್ತರ ಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಪ್ರಯಾಗರಾಜ್ ಮತ್ತು ಕಾನ್ಪುರದಲ್ಲಿನ ಕಟ್ಟಡ ನೆಲಸಮ ಕಾರ್ಯಾಚರಣೆಗಳು ಕಾನೂನುಬಾಹಿರ. ಅವುಗಳಿಗೆ ತಡೆ ನೀಡಿ ಎಂದು ಜಮೀಯತ್ ಉಲೇಮಾ ಇ ಹಿಂದ್ ಸಂಘಟನೆಯು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ವಿಕ್ರಮನಾಥ್ ಅವರಿದ್ದ ಪೀಠವು ಹೀಗೆ ಹೇಳಿದೆ. ಜತೆಗೆ, 'ನೆಲಸಮ ಕಾರ್ಯಾಚರಣೆಗಳಿಗೆ ತಡೆ ನೀಡಲು ಸಾಧ್ಯವಿಲ್ಲ. ಆದರೆ, ಯಾವುದೇ ಅಹಿತಕರ ಘಟನೆಗಳು ನಡೆಯಬಾರದು' ಎಂದು ಪೀಠವು ಹೇಳಿದೆ.

'ನೋಟಿಸ್ ನೀಡದೇ ಕಟ್ಟಡಗಳನ್ನು ನೆಲಸಮ ಮಾಡಲಾಗಿದೆ. ನೋಟಿಸ್ ನೀಡಿ 15 ದಿನ ಕಾಲಾವಕಾಶ ನೀಡಬೇಕು ಎಂದು ಕಾನೂನು ಹೇಳುತ್ತದೆ. ಆದರೆ ಇದನ್ನು ಸಂಬಂಧಿತ ಪ್ರಾಧಿಕಾರಗಳು ಗಾಳಿಗೆ ತೂರಿವೆ' ಎಂದು ಅರ್ಜಿದಾರರ ಪರ ವಕೀಲರು ಆರೋಪಿಸಿದರು.

ಉತ್ತರ ಪ್ರದೇಶ ಸರ್ಕಾರದ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಹಿರಿಯ ವಕೀಲ ಹರೀಶ್ ಸಾಳ್ವೆ ಅವರು ಹಾಜರಿದ್ದರು.

8ನೇ ಪುಟ ನೋಡಿ

'ಕಷ್ಟದಲ್ಲಿರುವವರಿಗೆ ರಕ್ಷಣೆ ಬೇಕು'

'ನಾವೂ ಸಮಾಜದ ಭಾಗವಾಗಿದ್ದೇವೆ. ಸಮಾಜದಲ್ಲಿ ಏನಾಗುತ್ತಿದೆ ಎಂಬುದನ್ನು ನಾವೂ ನೋಡುತ್ತಿದ್ದೇವೆ. ಎಲ್ಲವೂ ನ್ಯಾಯಸಮ್ಮತವಾಗಿ ಇರಬೇಕು' ಎಂದು ಪೀಠವು ಹೇಳಿದೆ.

'ತೊಂದರೆಗೆ ಒಳಗಾದವರ ಭದ್ರತೆಯನ್ನು ನಾವು ದೃಢಪಡಿಸಬೇಕಲ್ಲವೇ? ಅದು ನಮ್ಮ ಕರ್ತವ್ಯ. ಅವರೂ ನಮ್ಮ ಸಮಾಜದ ಭಾಗ ಎಂಬುದರ ಬಗ್ಗೆ ನಮಗೆ ಸ್ಪಷ್ಟತೆಯಿರಬೇಕು. ಅಂತಿಮವಾಗಿ ಯಾರೋ ತೊಂದರೆಯಲ್ಲಿ ಇದ್ದಾರೆ ಎಂದರೆ, ಅದನ್ನು ಪರಿಹರಿಸಿಕೊಳ್ಳುವ ಅವಕಾಶ ಅವರಿಗೆ ಸಿಗಲೇಬೇಕು. ಈ ನ್ಯಾಯಾಲಯವು ಅವರ ರಕ್ಷಣೆಗೆ ಬರದೇ ಇದ್ದರೆ, ಅದು ಸರಿಯಲ್ಲ' ಎಂದು ಪೀಠವು ಹೇಳಿದೆ.

ವಿಧಾನಪರಿಷತ್ತಿನಲ್ಲಿ ಬಿಜೆಪಿಗೆ ಬಹುಮತ

ದಕ್ಷಿಣ ಪದವೀಧರ ಕ್ಷೇತ್ರ: ಕಾಂಗ್ರೆಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ತಿನ ದಕ್ಷಿಣ ಪದವೀಧರ ಕ್ಷೇತ್ರದ ಫಲಿತಾಂಶ ಗುರುವಾರ ಘೋಷಣೆಯಾಗಿದ್ದು, ಕಾಂಗ್ರೆಸ್‌ನ ಮಧು ಜಿ. ಮಾದೇಗೌಡ ಗೆಲುವು ಸಾಧಿಸಿದ್ದಾರೆ.

ಮಧು ಜಿ.ಮಾದೇಗೌಡ

ಈ ಮೂಲಕ ನಾಲ್ಕು ಸ್ಥಾನಗಳ ಪೈಕಿ ಕಾಂಗ್ರೆಸ್ ಮತ್ತು ಬಿಜೆಪಿ ತಲಾ ಎರಡು ಸ್ಥಾನಗಳನ್ನು ಗೆದ್ದುಕೊಂಡಿವೆ. ಜೆಡಿಎಸ್ ಶೂನ್ಯ ಸಂಪಾದನೆ ಮಾಡಿದೆ.

ಇದರಿಂದಾಗಿ ವಿಧಾನ ಪರಿಷತ್‌ನಲ್ಲಿ ಬಿಜೆಪಿ ಬಹುಮತ ಪಡೆಯುವಲ್ಲಿ ಯಶಸ್ವಿಯಾಗಿದೆ. ಮೇಲ್ಮನೆಯಲ್ಲಿ ಬಿಜೆಪಿ ಸದಸ್ಯರ ಬಲ 39ಕ್ಕೇರಿದೆ. ಒಂಬತ್ತು ವರ್ಷಗಳ ಬಳಿಕ ಬಿಜೆಪಿ ಮತ್ತೆ ಬಹುಮತ ಸಾಧಿಸಿದೆ. ಬಹುಮತ ಇಲ್ಲದ ಕಾರಣ ಮತಾಂತರ ನಿಷೇಧ ಮಸೂದೆಯಂತಹ ವಿವಾದಾತ್ಮಕ ಮಸೂದೆಗಳಿಗೆ ಅನುಮೋದನೆ ಪಡೆಯಲು ಬಿಜೆಪಿಗೆ ಸಾಧ್ಯವಾಗಿರಲಿಲ್ಲ.

ಚುನಾವಣೆ ನಡೆದ ನಾಲ್ಕು ಸ್ಥಾನಗಳಲ್ಲಿ ಮೂರು ಸ್ಥಾನಗಳ ಫಲಿತಾಂಶ ಬುಧವಾರವೇ ಪ್ರಕಟವಾಗಿತ್ತು. ಬಿಜೆಪಿಯ ಬಸವರಾಜ ಹೊರಟ್ಟಿ, ಹಣಮಂತ ನಿರಾಣಿ ಮತ್ತು ಕಾಂಗ್ರೆಸ್‌ನ ಪ್ರಕಾಶ ಹುಕ್ಕೇರಿ ಜಯ ಗಳಿಸಿದ್ದರು. ದಕ್ಷಿಣ ಪದವೀಧರ ಕ್ಷೇತ್ರದ ಮತ ಎಣಿಕೆ ಮತ್ತು ಫಲಿತಾಂಶ ಪ್ರಕಟ ಪ್ರಕ್ರಿಯೆ ಸುಮಾರು 29 ತಾಸು ಹಿಡಿಯಿತು.

ಕಾಂಗ್ರೆಸ್‌ಗೆ ಗೆಲುವು: ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮಧು ಜಿ.ಮಾದೇಗೌಡ 12,205 ಮತಗಳ ಅಂತರದಿಂದ ಗೆಲುವು ಸಾಧಿಸಿದರು.

ಬಿಜೆಪಿಯ ಮೈ.ವಿ.ರವಿಶಂಕರ್ 33,878 ಮತಗಳನ್ನು ಗಳಿಸಿದರು. ಎಲಿಮಿನೇಷನ್ ಪ್ರಕ್ರಿಯೆಯಲ್ಲಿ 17 ಅಭ್ಯರ್ಥಿಗಳನ್ನು ಕೈಬಿಡಲಾಯಿತು. ಮಧು ಅವರು 46,083 ಮತಗಳನ್ನು ಪಡೆದರು. ಆದರೆ ನಿಗದಿತ ಕೋಟ ತಲುಪಲು 808 ಮತಗಳ ಕೊರತೆ ಎದುರಾಯಿತು. ಆಗ ಚುನಾವಣಾ ಆಯೋಗದ ನಿರ್ದೇಶನದಂತೆ ಪ್ರತಿಸ್ಪರ್ಧಿ ಮೈ.ವಿ.ರವಿಶಂಕರ್ ಅವರ ಮತಪತ್ರದಲ್ಲಿ ಅಗತ್ಯವಿರುವ 808 ಮತಗಳು ಬರುವವರೆಗೆ ಮಾತ್ರವೇ ಎಣಿಕೆ ಪ್ರಕ್ರಿಯೆಯನ್ನು ಅಧಿಕಾರಿಗಳು ನಡೆಸಿದರು. ಕೋಟ ತಲುಪುತ್ತಿದ್ದಂತೆಯೇ ಎಣಿಕೆ ಕಾರ್ಯ ನಿಲ್ಲಿಸಿ, ಮಧು ಅವರನ್ನು ವಿಜೇತ ಅಭ್ಯರ್ಥಿ ಎಂದು ಘೋಷಿಸಲಾಯಿತು.

ಬುಧವಾರ ಬೆಳಿಗ್ಗೆ 8ಕ್ಕೆ ಆರಂಭವಾಗಿದ್ದ ಮತ ಎಣಿಕೆ ಪ್ರಕ್ರಿಯೆ ಗುರುವಾರ ಮಧ್ಯಾಹ್ನ 1 ರ ಸುಮಾರಿಗೆ ಮುಕ್ತಾಯವಾಯಿತು.

ಪರಿಷತ್ತಿನಲ್ಲಿ ಪಕ್ಷಗಳ ಬಲಾಬಲ

ಬಿಜೆಪಿ	39
ಕಾಂಗ್ರೆಸ್	26
ಜೆಡಿಎಸ್	8
ಪಕ್ಷೇತರ	1
ಖಾಲಿ	1
(ಸಿ.ಎಂ.ಇಬ್ರಾಹಿಂ ರಾಜೀನಾಮೆಯಿಂದ ಒಂದು ಸ್ಥಾನ ಖಾಲಿ ಉಳಿದಿದೆ)	
ಚುನಾವಣೆ	4 ಕ್ಷೇತ್ರಗಳು
ಬಿಜೆಪಿ	2
ಕಾಂಗ್ರೆಸ್	2

ಟ್ಯಾಂಕ್‌ನಲ್ಲಿ 20 ವರ್ಷಗಳ ಕೊಳಕು!

ಪ್ರಜಾವಾಣಿ ವಾರ್ತೆ

ರಾಯಚೂರು: ಕುಡಿಯುವ ನೀರು ಸಂಗ್ರಹಿಸಲು ನಗರಸಭೆಯಿಂದ ನಿರ್ಮಿಸಲಾದ ಓವರ್‌ಹೆಡ್ ಟ್ಯಾಂಕ್‌ನಲ್ಲಿ ಕೊಳಕು ತುಂಬಿದ್ದು, ಇದನ್ನು 20 ವರ್ಷಗಳಿಂದ ಸ್ವಚ್ಛಗೊಳಿಸಿಯೇ ಇಲ್ಲ!

'ಮನೆ ಕಟ್ಟಿಕೊಂಡು ಇಲ್ಲಿ 20 ವರ್ಷಗಳಿಂದ ಇದ್ದೇನೆ. ಆದರೆ, ಟ್ಯಾಂಕ್‌ನ ಸ್ವಚ್ಛತಾ ಕಾರ್ಯ ನಡೆದಿದ್ದು ನಾನು ಒಮ್ಮೆಯೂ ನೋಡಿಲ್ಲ. ಈಗ ನಗರಸಭೆಯವರು ಸ್ವಚ್ಛ ಮಾಡಲು ಬಂದಿದ್ದಾರೆ. ನಗರಸಭೆ ನೀರಿನ ಸಹವಾಸವೇ ಬೇಡವೆಂದು ಶುದ್ಧ ನೀರಿನ ಕ್ಯಾನ್ ಖರೀದಿಸುತ್ತಿದ್ದೇವೆ' ಎಂದು ಇಂದಿರಾನಗರದ (ವಾರ್ಡ್ ಸಂಖ್ಯೆ 4) ನಿವಾಸಿ ಉದಯಕುಮಾರ್ 'ಪ್ರಜಾವಾಣಿ' ತಿಳಿಸಿದರು.

'ತುಂಗಭದ್ರಾ ನದಿ ನೀರು ಸಂಸ್ಕರಣೆ ಆಗುವ ರಾಂಪುರ ಶುದ್ಧೀಕರಣ ಘಟಕದಲ್ಲಿ ಹಲವು ವರ್ಷಗಳಿಂದ ಸಂಗ್ರಹವಾಗಿದ್ದ 4 ಅಡಿಗಳಷ್ಟು ಹೂಳನ್ನು ಈಗಷ್ಟೆ ತೆರವು ಮಾಡಲಾಗಿದೆ. ಮೂರು ತಿಂಗಳಿಗೊಮ್ಮೆ ಸಂಸ್ಕರಣೆ ಘಟಕದ ಹೂಳು ತೆರವಾಗಬೇಕು. 20 ವರ್ಷಗಳಿಂದ ಅದರಲ್ಲಿ ಕೊಳಕು ಸಂಗ್ರಹವಾಗುತ್ತಿದ್ದು, ಅದೇ ನೀರು ಪೂರೈಕೆಯಾಗುತ್ತಿದೆ. ವಾಂತಿ ಭೇದಿ ಪ್ರಕರಣ ಉಲ್ಬಣಿಸಲು ಇದೇ ಕಾರಣ' ಎಂದು ನಿವಾಸಿಗಳು ಹೇಳುತ್ತಾರೆ.

ಹಳೆಯ ಘಟಕದ ಪಕ್ಕದಲ್ಲಿ ₹5.3 ಕೋಟಿ ವೆಚ್ಚದಲ್ಲಿ ಹೊಸ ನೀರು ಸಂಸ್ಕರಣಾ ಘಟಕ ನಿರ್ಮಾಣವಾಗಿ ಮೂರು ವರ್ಷಗಳಾದರೂ ನಗರಸಭೆ ತನ್ನ ವ್ಯಾಪ್ತಿಗೆ ಪಡೆದಿರಲಿಲ್ಲ. ಈಗ ಎಚ್ಚೆತ್ತಿರುವ ನಗರಸಭೆಯು ನೂತನ ಘಟಕದ ಬಳಕೆಗೆ ಮುಂದಾಗಿದೆ.

ಮಹಿಳೆ ಸಾವು; ಮೃತರ ಸಂಖ್ಯೆ 7ಕ್ಕೆ

ರಾಯಚೂರು: ಕಲುಷಿತ ನೀರು ಕುಡಿದು ವಾಂತಿ ಭೇದಿಯಿಂದ ನರಳುತ್ತಿದ್ದ ವಾರ್ಡ್ ಸಂಖ್ಯೆ 14ರ ನಿವಾಸಿ ಶಮೀಮ್ ಬೇಗಂ (48) ಮೇ 30ರಂದು ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಬುಧವಾರ ಆಸ್ಪತ್ರೆಯವರು ಅದನ್ನು ದೃಢಪಡಿಸಿದ್ದಾರೆ. ಇದರಿಂದ ಸಾವಿನ ಸಂಖ್ಯೆ 7ಕ್ಕೆ ಏರಿಕೆಯಾಗಿದೆ.

'ಯಾವುದೇ ಸಾವಿನ ವರದಿಯನ್ನು ಜಿಲ್ಲಾ ಆರೋಗ್ಯ ಇಲಾಖೆ ಪರಿಶೀಲಿಸಿದ ಬಳಿಕ, ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು' ಎಂದು ನಗರಸಭೆ ಪೌರಾಯುಕ್ತ ಗುರುಲಿಂಗಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ದೇಶದಾದ್ಯಂತ ಪ್ರತಿಭಟನೆ; ಸ್ಪೀಕರ್, ಸಭಾಧ್ಯಕ್ಷರಿಗೆ ಕಾಂಗ್ರೆಸ್ ದೂರು

ರಾಷ್ಟ್ರಪತಿ ಭೇಟಿಗೆ 'ಕೈ' ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾರಿ ನಿರ್ದೇಶನಾಲಯದ (ಇ.ಡಿ) ವಿರುದ್ಧ ಪ್ರತಿಭಟನೆ ನಡೆಸಿದ ಪಕ್ಷದ ಸಂಸದರು ಹಾಗೂ ಕಾರ್ಯಕರ್ತರ ವಿರುದ್ಧ 'ರಾಜಕೀಯ ದೌರ್ಜನ್ಯ' ಎಸಗಲಾಗಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಈ ವಿಚಾರವನ್ನು ರಾಷ್ಟ್ರಪತಿ ಅವರ ಗಮನಕ್ಕೆ ತರಲು ನಿರ್ಧರಿಸಿದೆ. ರಾಮನಾಥ ಕೋವಿಂದ್ ಅವರನ್ನು ಶುಕ್ರವಾರ ಭೇಟಿಯಾಗಿ, ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಕುರಿತು ದೂರು ದಾಖಲಿಸಲು ಪಕ್ಷ ನಿರ್ಧರಿಸಿದೆ.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋಮವಾರ, ಮಂಗಳವಾರ ಮತ್ತು ಬುಧವಾರ ಇ.ಡಿ ವಿಚಾರಣೆ ಎದುರಿಸಿದ್ದ ರಾಹುಲ್ ಗಾಂಧಿ ಅವರಿಗೆ ಶುಕ್ರವಾರ ಮತ್ತೆ ವಿಚಾರಣೆಗೆ ಹಾಜರಾಗಲು ಸೂಚಿಸಲಾಗಿತ್ತು. ಆದರೆ ಸೋನಿಯಾ ಗಾಂಧಿ ಅವರ ಅನಾರೋಗ್ಯದ ಕಾರಣ, ಶುಕ್ರವಾರದ ಬದಲು ಸೋಮವಾರ ವಿಚಾರಣೆಗೆ ಬರುವುದಾಗಿ ರಾಹುಲ್ ಹೇಳಿದ್ದರು. ಇದಕ್ಕೆ ಇ.ಡಿ ಸಮ್ಮತಿಸಿದೆ.

ರಾಹುಲ್ ಅವರ ವಿಚಾರಣೆಯನ್ನು ಖಂಡಿಸಿ ಪ್ರತಿಭಟನೆಯನ್ನು ತೀವ್ರಗೊಳಿಸಿರುವ ಕಾಂಗ್ರೆಸ್, ದೇಶದ ಬಹುತೇಕ ಕಡೆ ಗುರುವಾರ ರಾಜಭವನ ಚಲೋ ನಡೆಸಿತು. ಹೈದರಾಬಾದ್‌ನಲ್ಲಿ ಪ್ರತಿಭಟನೆ ಹಿಂಸೆಗೆ ತಿರುಗಿತು. ಕೈರತಾಬಾದ್‌ನಲ್ಲಿ ಬೈಕ್‌ಗೆ ಬೆಂಕಿ ಹಚ್ಚಲಾಯಿತು.

ರಾಜ್ಯ ರಸ್ತೆ ಸಾರಿಗೆ ಬಸ್‌ಗಳ ಮೇಲೆ ಪ್ರತಿಭಟನಕಾರರು ದಾಳಿ ನಡೆಸಿದರು. ಕೇಂದ್ರದ ಮಾಜಿ ಸಚಿವೆ ರೇಣುಕಾ ಚೌಧರಿ ಅವರು ಪೊಲೀಸ್ ಸಿಬ್ಬಂದಿ ಯೊಬ್ಬರ ಕೊರಳಪಟ್ಟಿ ಹಿಡಿದು ಪ್ರತಿಭಟಿಸಿದರು. ಗುಂಪು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು.

ಕಾಂಗ್ರೆಸ್ ದೂರು: ಕಾಂಗ್ರೆಸ್ ಸಂಸದರ ನಿಯೋಗವು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹಾಗೂ ರಾಜ್ಯಸಭೆ ಸಭಾಧ್ಯಕ್ಷ ಎಂ. ವೆಂಕಯ್ಯ ನಾಯ್ಡು ಅವರನ್ನು ಗುರುವಾರ ಭೇಟಿ ಮಾಡಿತು. ಕಾಂಗ್ರೆಸ್ ಕಾರ್ಯಕರ್ತರನ್ನು ದೆಹಲಿ ಪೊಲೀಸರು ನಡೆಸಿಕೊಂಡ ರೀತಿಯ ಬಗ್ಗೆ ನಿಯೋಗ ಅಸಮಾಧಾನ ವ್ಯಕ್ತಪಡಿಸಿತು.

ಅಧಿರ್ ರಂಜನ್ ಚೌಧರಿ ನೇತೃತ್ವದ ನಿಯೋಗವು ಬಿರ್ಲಾ ಅವರನ್ನು, ಮಲ್ಲಿಕಾರ್ಜುನ ಖರ್ಗೆ ನೇತೃತ್ವದ ನಿಯೋಗವು ನಾಯ್ಡು ಅವರನ್ನು ಭೇಟಿ ಮಾಡಿತು. ಕಾಂಗ್ರೆಸ್ ಸಂಸದರ ಮೇಲೆ ದೆಹಲಿ ಪೊಲೀಸರ ಅನುಚಿತ ವರ್ತನೆ ಹಾಗೂ ದೌರ್ಜನ್ಯವನ್ನು ಪ್ರಬಲವಾಗಿ ವಿರೋಧಿಸುತ್ತೇವೆ ಎಂದು ಬಿರ್ಲಾ ಅವರಿಗೆ ನೀಡಿದ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಕಾಂಗ್ರೆಸ್ ಕಚೇರಿಯಲ್ಲಿ ದೆಹಲಿ ಪೊಲೀಸರು ವರ್ತಿಸಿದ ರೀತಿಯು ನಿಯಮಗಳ ಲಜ್ಜೆಗೆಟ್ಟ ಉಲ್ಲಂಘನೆ ಎಂದು ಆರೋಪಿಸಿತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಖರ್ಗೆ, ಪೊಲೀಸ್ ಕ್ರಮದ ಹಿಂದೆ ಸಂಸದರನ್ನು ಹಿಂಸಿಸುವುದು ಹಾಗೂ ಮಾನಸಿಕವಾಗಿ ಕಿರುಕುಳ ನೀಡುವ ಉದ್ದೇಶವಿತ್ತು ಎಂದರು.

7ನೇ ಪುಟ ನೋಡಿ

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಡಾ.ಎಚ್.ಸಿ. ಮಹದೇವಪ್ಪ, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಇ.ಡಿ ವಿರುದ್ಧ ಬೆಂಗಳೂರಿನ ಕ್ವೀನ್ಸ್ ವೃತ್ತದ ಬಳಿ ಗುರುವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ದಾಖಲೆ ಮಟ್ಟಕ್ಕೆ ವಿಮಾನ ಇಂಧನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ವಿಮಾನ ಇಂಧನ (ಎಟಿಎಫ್) ದರವನ್ನು ಗುರುವಾರ ಶೇಕಡ 16.26ರಷ್ಟು ಹೆಚ್ಚಿಸಲಾಗಿದೆ. ಇದು ಅತಿಹೆಚ್ಚಿನ ಪ್ರಮಾಣದ ಏರಿಕೆ. ಈ ಹೆಚ್ಚಳದಿಂದಾಗಿ ಎಟಿಎಫ್ ಬೆಲೆಯು ದೆಹಲಿಯಲ್ಲಿ ಕಿಲೋ ಲೀಟರ್‌ಗೆ ದಾಖಲೆಯ ₹ 1.41 ಲಕ್ಷ ತಲುಪಿದೆ.

ಈ ತಿಂಗಳ ಆರಂಭದಲ್ಲಿ ಎಟಿಎಫ್ ಬೆಲೆಯನ್ನು ಶೇ 1.3ರಷ್ಟು ಇಳಿಸಲಾಗಿತ್ತು. ಈ ವರ್ಷದಲ್ಲಿ ಬೆಲೆಯನ್ನು 11 ಬಾರಿ ಹೆಚ್ಚಿಸಲಾಗಿದ್ದು, ವರ್ಷದ ಆರಂಭದಲ್ಲಿದ್ದ ಮಟ್ಟಕ್ಕೆ ಹೋಲಿಸಿದರೆ ಬೆಲೆಯು ಸರಿ ಸುಮಾರು ದುಪ್ಪಟ್ಟಾಗಿದೆ.

ವಿಮಾನಯಾನ ಕಂಪನಿಗಳ ಕಾರ್ಯಾಚರಣಾ ವೆಚ್ಚದಲ್ಲಿ ಸರಿಸುಮಾರು ಶೇ 40ರಷ್ಟು ಎಟಿಎಫ್‌ಗೆ ವಿನಿಯೋಗವಾಗುತ್ತದೆ.

ವಿಮಾನಯಾನ ದರವು ಶೇ 10ರಿಂದ ಶೇ 15ರಷ್ಟು ಜಾಸ್ತಿಯಾಗಬಹುದು ಎಂದು ಸ್ಪೈಸ್ ಜೆಟ್ ಅಧ್ಯಕ್ಷ ಅಜಯ್ ಸಿಂಗ್ ಅವರು ಹೇಳಿದ್ದಾರೆ.

2021ರ ಜೂನ್ ನಂತರದಲ್ಲಿ ಎಟಿಎಫ್ ಬೆಲೆಯು ಶೇ 120ಕ್ಕಿಂತ ಹೆಚ್ಚು ಜಾಸ್ತಿಯಾಗಿದೆ.

ಈ ಏರಿಕೆಯು ಸುಸ್ಥಿರವಾಗಿಲ್ಲ. ಎಟಿಎಫ್ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತುರ್ತಾಗಿ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಒಳ ಪುಟಗಳು

ಶಾಂತಿ ಭಂಗ ಮಾಡಿದರೆ ತಕ್ಕ ಉತ್ತರ' 13
ಸ್ವಿಸ್ ಬ್ಯಾಂಕಿನಲ್ಲಿ ಭಾರತೀಯರ ಹಣ ಏರಿಕೆ 12
ಅಮೆರಿಕ ರಕ್ಷಣಾ ಇಲಾಖೆ ಉನ್ನತ ಹುದ್ದೆಗೆ ರಾಧಾ ಅಯ್ಯಂಗಾರ್ ನೇಮಕ 13
ಕಾಮನ್‌ವೆಲ್ತ್ ಕ್ರೀಡಾ ಕೂಟ: ಕರ್ನಾಟಕದ ಮನು, ಐಶ್ವರ್ಯಾ ಆಯ್ಕೆ 13

ಚಿನಕುರಳಿ
ಪ್ರಕಾಶ್ ಶೆಟ್ಟಿ

E-BOOK TODAY AT WWW.MARUTISUZUKI.COM OR VISIT YOUR NEAREST MARUTI SUZUKI DEALERSHIP.

MARUTI SUZUKI AUTHORISED DEALERS: BENGALURU: BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI: 95909 90011. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. KATARIA: KANAKAPURA ROAD, PH: 78990 40000. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI PH: 8884442299. VARUN MOTORS: MALLESHWARAM, HEBBAL, 78991 00200. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and corporate offer (wherever applicable) on selected models/ variants. Above mentioned savings amount is the value of maximum savings on selected models/variants. Terms and conditions apply. Terms and conditions are subject to change without any prior notice. For more details, please contact your nearest ARENA dealership. Features and accessories shown may not be part of standard fitment. Black Glass Shade on the vehicle is due to the lighting effect. Images used are for illustration purposes only. Car color may vary due to printing on paper. Offers vary across variants. Maruti Suzuki India Limited reserves the right to discontinue offers without notice. Above offers are valid till 30th June, 2022

ಸಂಚಾರ ಪೊಲೀಸರ ವ್ಯವಸ್ಥೆ: ಸಾಕ್ಷ್ಯ ಸಮೇತ ದೂರು ಸಲ್ಲಿಕೆಗೆ ಅವಕಾಶ

‘ಪಬ್ಲಿಕ್ ಐ’: ಫೋಟೊ ಸಮೇತ ದೂರು ನೀಡಿ

● ಖಲೀಲಅಹ್ಮದ ಶೇಖ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುವವರ ಬಗ್ಗೆ ಫೋಟೊ ಸಮೇತ ದೂರು ಸ್ವೀಕರಿಸಲು ಸಂಚಾರ ಪೊಲೀಸರು ‘ಪಬ್ಲಿಕ್–ಐ’ ವ್ಯವಸ್ಥೆ ರೂಪಿಸಿದ್ದಾರೆ.

ನಗರದಲ್ಲಿ ವಾಹನಗಳ ದಟ್ಟಣೆ ಹೆಚ್ಚಿದ್ದು, ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಜೊತೆಯಲ್ಲಿ ದಂಡ ವಿಧಿಸುವ ಕಾರ್ಯ ನಿರ್ವಹಿಸಲು ಪೊಲೀಸರ ಕೊರತೆ ಇದೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಸಂಚಾರ ಪೊಲೀಸರು, ಕೆಲ ವರ್ಷಗಳ ಹಿಂದೆಯೇ ಪಬ್ಲಿಕ್–ಐ ವ್ಯವಸ್ಥೆ ಜಾರಿಗೆ ತಂದಿದ್ದಾರೆ. ಇದೀಗ ಈ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಮುಂದಾಗಿರುವ ಪೊಲೀಸರು, ‘ಫೋಟೊ ಸಮೇತ ದೂರು ನೀಡಿ’ ಎಂದು ಸಾರ್ವಜನಿಕರಿಗೆ ಆಹ್ವಾನ ನೀಡಿದ್ದಾರೆ.

‘ಸಿಬ್ಬಂದಿ ಕೊರತೆಯಿಂದಾಗಿ ಪುರಾವೆ ಸಮೇತ ಉಲ್ಲಂಘನೆ ಪತ್ತೆ ಮಾಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಸಾರ್ವಜನಿಕರಿಂದ ದೂರು ಪಡೆದು ಕ್ರಮ ಜರುಗಿಸುವ ವ್ಯವಸ್ಥೆ ಬಲಪಡಿಸಲಾಗಿದೆ’ ಎಂದು ಸಂಚಾರ ಪೊಲೀಸರು ಹೇಳಿದರು.

‘ನಗರದ ಎಲ್ಲ ಕಡೆಯೂ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲು ಆಗುವುದಿಲ್ಲ. ಕೆಲವೆಡೆ ಮಾತ್ರ ಸಿಬ್ಬಂದಿ ಎಫ್‌ಟಿವಿಆರ್ ಉಪಕರಣ ಮೂಲಕ ದಂಡ ಹಾಕುತ್ತಿದ್ದಾರೆ. ಹೀಗಾಗಿಯೇ ಸಾರ್ವಜನಿಕರ ಸಹಕಾರ ಪಡೆಯಲಾಗುತ್ತಿದೆ. ಪಬ್ಲಿಕ್–ಐ ಬಗ್ಗೆ ಹೆಚ್ಚು ಪ್ರಚಾರ ಮಾಡುವಂತೆಯೂ ಠಾಣೆ ಸಿಬ್ಬಂದಿಗೆ ಸೂಚಿಸಲಾಗಿದೆ’ ಎಂದೂ ತಿಳಿಸಿದರು.

> ಪಬ್ಲಿಕ್ ಐ ವ್ಯವಸ್ಥೆ ಮೂಲಕ ದೂರು ನೀಡುವ ಸಾರ್ವಜನಿಕರ ಮಾಹಿತಿಯನ್ನು ಬಹಿರಂಗಪಡಿಸುವುದಿಲ್ಲ
> **ಬಿ.ಆರ್. ರವಿಕಾಂತೇಗೌಡ**
> ಸಂಚಾರ ವಿಭಾಗದ ಜಂಟಿ ಕಮಿಷನರ್

ಆ್ಯಪ್ ಹಾಗೂ ಸಾಮಾಜಿಕ ಮಾಧ್ಯಮ: ‘ಪಬ್ಲಿಕ್ ಐ’ ವ್ಯವಸ್ಥೆಯು ಆ್ಯಪ್, ಜಾಲತಾಣ (https://btp.gov.in) ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಕಾರ್ಯನಿರ್ವಹಿಸಲಿದೆ. ಸಾರ್ವಜನಿಕರು ತಮಗೆ ಅನುಕೂಲವಾದ ಮಾಧ್ಯಮದ ಮೂಲಕ ದೂರು ನೀಡಬಹುದು’ ಎಂದು ಪೊಲೀಸರು ತಿಳಿಸಿದರು.

ಪ್ರಜಾವಾಣಿ ವಿಶೇಷ

‘ಸಾರ್ವಜನಿಕರು ತಮ್ಮ ಸುತ್ತಮುತ್ತ ಯಾರಾದರೂ ಸಂಚಾರ ನಿಯಮ ಉಲ್ಲಂಘನೆ ಮಾಡಿದರೆ ಅದರ ಫೋಟೊ ತೆಗೆಯಬೇಕು. ಆ್ಯಪ್, ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ (ಫೇಸ್‌ಬುಕ್, ಟ್ವಿಟರ್) ವಾಹನಗಳ ನೋಂದಣಿ ಸಂಖ್ಯೆ ಹಾಗೂ ಫೋಟೊ ಸಮೇತ ದೂರು ನೀಡಬೇಕು. ಅಂಥ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥ ವಾಹನಗಳ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಂಡು ನೋಟಿಸ್ ಕಳುಹಿಸಲಾಗುವುದು’ ಎಂದೂ ಹೇಳಿದರು.

‘ಗೂಗಲ್ ಪ್ಲೇ ಸ್ಟೋರ್‌ನಲ್ಲೂ ‘ಪಬ್ಲಿಕ್ ಐ–ಬಿಟಿಪಿ’ ಆ್ಯಪ್ ಲಭ್ಯವಿದೆ. ಡೌನ್‌ಲೋಡ್ ಮಾಡಿಕೊಂಡು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಳ್ಳಬಹುದು’ ಎಂದೂ ತಿಳಿಸಿದರು.

ಯಾವೆಲ್ಲ ನಿಯಮ ಉಲ್ಲಂಘನೆ

- ದೋಷಪೂರಿತ ನೋಂದಣಿ ಫಲಕ
- ಫಲಕದ ಮೇಲೆ ತರಹೇವಾರಿ ಬರಹ
- ಚಾಲನೆ ವೇಳೆ ಮೊಬೈಲ್ ಬಳಕೆ
- ಹೆಲ್ಮೆಟ್ ಧರಿಸದಿರುವುದು
- ಜೀಬ್ರಾ ಕ್ರಾಸಿಂಗ್
- ಕರೆದಲ್ಲಿ ಬಾರದ ಆಟೊ ಚಾಲಕರು
- ಮೀಟರ್ ದರಕ್ಕಿಂತ ಹೆಚ್ಚು ಹಣ ಕೇಳುವ ಚಾಲಕರು
- ವಾಣಿಜ್ಯ ಬಳಕೆ ವಾಹನಗಳ ಚಾಲಕರು ಸಮವಸ್ತ್ರ ಧರಿಸದಿರುವುದು

ವಾಟ್ಸ್‌ಆ್ಯಪ್ ಮೂಲಕವೂ ದೂರು

‘ಸಂಚಾರ ಪೊಲೀಸರ ವಾಟ್ಸ್‌ಆ್ಯಪ್ (9480801800) ಮೂಲಕವೂ ದೂರು ನೀಡಬಹುದು. ಜೊತೆಗೆ ಫೇಸ್‌ಬುಕ್ (@bangaloretrafficpolice), ಟ್ವಿಟರ್ (@blrcitytraffic) ಮತ್ತು ಇ–ಮೇಲ್ (tmcbtp@gmail.com) ಮೂಲಕ ಸಹ ದೂರು ದಾಖಲಿಸಬಹುದು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ನಗರದಲ್ಲಿ ಆಮ್ ಆದ್ಮಿ ಪಕ್ಷದ ಕಚೇರಿಯನ್ನು ಪಕ್ಷದ ರಾಷ್ಟ್ರೀಯ ವಕ್ತಾರ ದಿಲೀಪ್ ಪಾಂಡೆ ಉದ್ಘಾಟಿಸಿದರು. ಪೃಥ್ವಿರೆಡ್ಡಿ, ಭಾಸ್ಕರ್ ರಾವ್, ‘ಮುಖ್ಯಮಂತ್ರಿ’ ಚಂದ್ರು ಮೊದಲಾದವರು ಹಾಜರಿದ್ದರು

ಎಎಪಿಯ ನೂತನ ಕಚೇರಿ ಉದ್ಘಾಟನೆ

ಬೆಂಗಳೂರು: ಆಮ್ ಆದ್ಮಿ ಪಕ್ಷದ (ಎಎಪಿ) ಕಚೇರಿಯನ್ನು ಗುರುವಾರ ಪಕ್ಷದ ರಾಷ್ಟ್ರೀಯ ವಕ್ತಾರ ದಿಲೀಪ್ ಪಾಂಡೆ ಉದ್ಘಾಟಿಸಿದರು. ನಗರದ ಕುಮಾರ ಪಾರ್ಕ್‌ನಲ್ಲಿ (ಪಶ್ಚಿಮ) ಕಚೇರಿ ಆರಂಭಿಸಲಾಗಿದೆ.

‘ರಾಜ್ಯದಲ್ಲಿ ಪಕ್ಷಕ್ಕೆ ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ. ದೆಹಲಿ, ಪಂಜಾಬ್ ಮಾದರಿಯಲ್ಲಿ ಇಲ್ಲೂಬಹು ಮತದೊಂದಿಗೆ ಅಧಿಕಾರಕ್ಕೆ ಬರಲಿದೆ. ಬಿಬಿಎಂಪಿ ಚುನಾವಣೆ ಯಿಂದಲೇ ವಿಜಯಯಾತ್ರೆ ಆರಂಭವಾಗುವ ನಿರೀಕ್ಷೆಯಿದೆ’ ಎಂದು ಪಾಂಡೆ ಹೇಳಿದರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರೆಡ್ಡಿ, ‘ರಾಜ್ಯದಲ್ಲಿ ಎಎಪಿಗೆ ಸೇರ್ಪಡೆ ಜನಾಂದೋಲನ ಆಗಲಿದೆ. ಜನರು ಎಎಪಿ ಬೆಂಬಲಿಸುವ ಮೂಲಕ ಪರ್ಯಾಯ ರಾಜಕೀಯಕ್ಕೆ ನಾಂದಿ ಹಾಡಬೇಕು. ಭ್ರಷ್ಟ, ನಿಷ್ಕ್ರಿಯ ಪಕ್ಷಗಳನ್ನು ಬದಿಗೊತ್ತಿ, ಸ್ವಚ್ಛ, ಜನಪರ ಆಡಳಿತ ನೀಡುವ ಎಎಪಿಯನ್ನು ಅಧಿಕಾರಕ್ಕೆ ತರಲು ಕೈಜೋಡಿಸಬೇಕು’ ಎಂದರು.

ಕಲಾ ಕಾಲೇಜಿನಲ್ಲಿ ಸಾಮೂಹಿಕ ನಕಲು

ಮುಖ್ಯ ಅಧೀಕ್ಷಕ ಕರ್ತವ್ಯದಿಂದ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ವ್ಯಾಪ್ತಿಯ ಕಲಾ ಕಾಲೇಜಿನಲ್ಲಿ ಬುಧವಾರ ನಡೆದಿದ್ದ ಸ್ನಾತಕೋತ್ತರ ಪರೀಕ್ಷೆಯಲ್ಲಿ ನಡೆದಿದ್ದ ಸಾಮೂಹಿಕ ನಕಲು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಉನ್ನತ ಶಿಕ್ಷಣ ಸಚಿವರು, ಪರಿಶೀಲಿಸಿ ವರದಿ ನೀಡುವಂತೆ ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದಾರೆ. ಸಚಿವರ ಪರವಾಗಿ ಆಪ್ತ ಕಾರ್ಯದರ್ಶಿ ಬಿ.ವಿ.ಮಾರುತಿ ಪ್ರಸನ್ನ ಪತ್ರ ಬರೆದಿದ್ದಾರೆ.

‘ಪ್ರಜಾವಾಣಿ’ಯ ಗುರುವಾರದ ಸಂಚಿಕೆಯಲ್ಲಿ ‘ಸ್ನಾತಕೋತ್ತರ ಪರೀಕ್ಷೆ, ಸಾಮೂಹಿಕ ನಕಲು’ ಶೀರ್ಷಿಕೆ ಅಡಿ ವಿಶೇಷ ವರದಿ ಪ್ರಕಟವಾಗಿತ್ತು.

ಕುಲಪತಿ ಪ್ರೊ.ಲಿಂಗರಾಜು ಗಾಂಧಿ ಅವರು, ಪ್ರಕರಣ ಸಂಬಂಧ ಕುಲಸಚಿವರಿಂದ (ಮೌಲ್ಯಮಾಪನ) ವರದಿ ತರಿಸಿಕೊಂಡಿದ್ದಾರೆ.

ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿದ್ದು, ನಕಲು ನಡೆದಿಲ್ಲವೆಂದು ಪ್ರಾಂಶುಪಾಲರು ಹಾಗೂ ಸಿಬ್ಬಂದಿ ತಿಳಿಸಿದ್ದಾರೆ. ಆದರೆ, ಪ್ರಾಂಶುಪಾಲರು ಪರೀಕ್ಷೆಯ ವೇಳೆ ಇರಲಿಲ್ಲ ಎಂಬುದು ದೃಢಪಟ್ಟಿದೆ. ಪರೀಕ್ಷಾ ನಿಯಮಾವಳಿ ಪ್ರಕಾರ ಕರ್ತವ್ಯ ಲೋಪವಾಗಿದ್ದು, ಅವರನ್ನು ಮುಖ್ಯ ಅಧೀಕ್ಷಕ ಜವಾಬ್ದಾರಿಯಿಂದ ಬಿಡುಗಡೆ ಮಾಡುವಂತೆ ಕುಲಸಚಿವರು ವರದಿಯಲ್ಲಿ ತಿಳಿಸಿದ್ದಾರೆ. ಜಾಗೃತದಳದ ಸಿಬ್ಬಂದಿಯಿಂದಲೂ ಮೌಖಿಕ ವರದಿ ಪಡೆದುಕೊಳ್ಳಲಾಗಿದೆ ಎಂದು ಲಿಂಗರಾಜು ಗಾಂಧಿ ಪ್ರಕಟಣೆ ಬಿಡುಗಡೆ ಮಾಡಿದ್ದಾರೆ.

ವರದಿ ಪರಿಣಾಮ

ಜೂನ್ 13ರಂದು ಸ್ನಾತಕೋತ್ತರ ಪರೀಕ್ಷೆಗಳು ಆರಂಭಗೊಂಡಿದ್ದವು. ಮೊದಲ ದಿನ ತಾಂತ್ರಿಕ ಕಾರಣಕ್ಕೆ ಪರೀಕ್ಷೆ ಆರಂಭವಾಗಿದ್ದು ತಡವಾಗಿತ್ತು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ಕೈಗೊಳ್ಳಲಾಗಿತ್ತು ಎಂದು ವರದಿಯಲ್ಲಿ ಕುಲಸಚಿವರು ತಿಳಿಸಿದ್ದಾರೆ.

ಕಲಾ, ವಿಜ್ಞಾನ, ವಾಣಿಜ್ಯ ವಿಭಾಗಗಳ ಪರೀಕ್ಷಾ ಕೇಂದ್ರಕ್ಕೆ ಮುಖ್ಯ ಅಧೀಕ್ಷಕರಾಗಿದ್ದ ಕಲಾ ಕಾಲೇಜಿನ ಪ್ರಾಂಶುಪಾಲ ಶ್ರೀನಿವಾಸ ನಾಯ್ಕ್ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಅದೇ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕ ಪ್ರೊ.ಪಿ. ಶಿವಪ್ರಸಾದ್ ಅವರನ್ನು ನೇಮಿಸಲಾಗಿದೆ. ಕಾಲೇಜಿನಲ್ಲಿ ಸಿಟಿಂಗ್ ಸ್ಕ್ವಾಡ್ ನಿಯೋಜಿಸಲು ನಿರ್ಧರಿಸಲಾಗಿದೆ.

ಇ.ಡಿ. ವಿಚಾರಣೆಗೆ ಹಾಜರಾದ ಕೆಜಿಎಫ್ ಬಾಬು

ನವದೆಹಲಿ: ಕಾಂಗ್ರೆಸ್ ಮುಖಂಡ ಹಾಗೂ ಉದ್ಯಮಿ ಯೂಸುಫ್ ಷರೀಫ್ (ಕೆ.ಜಿ.ಎಫ್ ಬಾಬು) ಜಾರಿ ನಿರ್ದೇಶನಾಲಯದ ವಿಚಾರಣೆಗೆ ಗುರುವಾರ ಹಾಜರಾದರು.

ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ ತನಿಖೆ ನಡೆಸುತ್ತಿರುವ ನಿರ್ದೇಶನಾಲಯವು ವಿಚಾರಣೆಗೆ ಹಾಜರಾಗುವಂತೆ ಕೆಜಿಎಫ್ ಬಾಬುಗೆ ಸಮನ್ಸ್ ನೀಡಿತ್ತು. ಬುಧವಾರ ಹಾಜರಾಗುವಂತೆ ಸೂಚಿಸಲಾಗಿತ್ತು. ಬಳಿಕ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಲಾಗಿತ್ತು.

‘ನಾನು ಕಾನೂನಿಗೆ ಗೌರವ ಕೊಡುವವ. ಯಾವುದೇ ಅಕ್ರಮ ಎಸಗಿಲ್ಲ. ಹೈಕೋರ್ಟ್ ಹಾಗೂ ರಾಜ್ಯ ಸರ್ಕಾರ ಹರಾಜು ಹಾಕಿದ್ದ ಜಮೀನುಗಳನ್ನು ಖರೀದಿ ಮಾಡಿದ್ದೇನೆ. ಎಲ್ಲವೂ ಕಾನೂನುಬದ್ಧವಾಗಿದೆ. ಈ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದೇನೆ’ ಎಂದು ಕೆಜಿಎಫ್ ಬಾಬು ಹೇಳಿದರು.

ಕಳೆದ ತಿಂಗಳು ಇ.ಡಿ. ಅಧಿಕಾರಿಗಳು ಬಾಬು ಹಾಗೂ ಕುಟುಂಬ ಸದಸ್ಯರ ಮನೆಗಳ ಮೇಲೆ ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು. ರಿಯಲ್ ಎಸ್ಟೇಟ್ ಉದ್ಯಮಿ ಷರೀಫ್, 2021ರ ಡಿಸೆಂಬರ್‌ನಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬೆಂಗಳೂರು ನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು. ₹1,744 ಕೋಟಿ ಆಸ್ತಿ ಹೊಂದಿದ್ದೇನೆ ಎಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ತಿಳಿಸಿದ್ದರು.

‘ಬಿಎಸ್‌ವೈ, ವಿಜಯೇಂದ್ರ ಜೈಲಿಗೆ ಹೋಗ್ತಾರೆ’

ಪ್ರಜಾವಾಣಿ ವಾರ್ತೆ

ಹಾವೇರಿ: ‘ಬಿ.ಎಸ್.ಯಡಿಯೂರಪ್ಪನ ಮಗ ವಿಜಯೇಂದ್ರ ದುಬೈಗೆ ಏಕೆ ಪದೇ ಪದೇ ಹೋಗುತ್ತಾರೆ? ಎಷ್ಟು ಆಸ್ತಿ ಮಾಡಿದ್ದೀರಿ, ಎಷ್ಟು ದುಡ್ಡು ಹೊಡೆದಿದ್ದೀರಿ, ಮಾರಿಷಸ್‌ನಲ್ಲಿ ಎಷ್ಟು ರೆಸಾರ್ಟ್ ಮಾಡಿದ್ದೀರಿ ಎಲ್ಲ ಗೊತ್ತಿದೆ. ಅವರಿಗೂ ಕಾಲ ಬರುತ್ತದೆ. ಅವರೂ ಜೈಲಿಗೆ ಹೋಗುತ್ತಾರೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ವಾಗ್ದಾಳಿ ನಡೆಸಿದರು.

ರಾಣೆಬೆನ್ನೂರು ತಾಲ್ಲೂಕು ಬೇಲೂರು ಗ್ರಾಮದಲ್ಲಿ ಮಾಧ್ಯಮದವರೊಂದಿಗೆ ಅವರು ಮಾತನಾಡಿ, ನಿಮಗೆ ಭವಿಷ್ಯ ಹೇಳ್ತಿದ್ದೀನಿ ಕೇಳಿ. ಬರಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮೇಲೆ ಅಷ್ಟೇ ರೈಡ್ ಮಾಡಲ್ಲ. ಬಿಜೆಪಿ ನಾಯಕರ ಮೇಲೂ ರೈಡ್ ಮಾಡಿದ್ದೆವು. ಹಿಂದೆ, ಉಮೇಶ್ ಅಂತ ಒಬ್ಬ ಕಂಡಕ್ಟರ್ ಯಡಿಯೂರಪ್ಪ ಅವರ ಪಿ.ಎ ಆಗಿದ್ದ. 4 ಹಣ ಎಣಿಕೆ ಯಂತ್ರಗಳನ್ನಿಟ್ಟಿದ್ದ. ಅವನ ಮನೆಯಲ್ಲಿ 10 ಸಾವಿರ ಕೋಟಿ ಸಿಕ್ಕಿತ್ತು. ಅದು ಯಾರ ದುಡ್ಡು? ಆ ದುಡ್ಡು ವಿಜಯೇಂದ್ರನಿಗೆ ಸೇರಿದ್ದಲ್ಲವಾ? ಎಂದು ಗಂಭೀರ ಆರೋಪ ಮಾಡಿದರು.

ಪುಗಸಟ್ಟೆ ಕ್ರೆಡಿಟ್ ಸಿಗಲ್ಲ: ಬೊಮ್ಮಾಯಿಯವರೇ ಮೀಸಲಾತಿ ಕೊಡೋದ್ರಲ್ಲಿ ಗಡಿಬಿಡಿ ಮಾಡಬೇಡಿ, ಬಹಳ ಬೇಗ ಕೊಡಬೇಡಿ ಅಂದವರು ಯಾಕೆ ನಿನ್ನೆ ಮನವಿ ಕೊಟ್ಟರು? ಪುಗಸಟ್ಟೆ ಕ್ರೆಡಿಟ್ ಸಿಗಲ್ಲಾರಿ. ಇಲ್ಲಿ ಬಂದು ಓಡಾಡಲಿ ಎಂದು ಹೆಸರು ಹೇಳದೇ ಹರಿಹರ ಪೀಠದ ವಚನಾನಂದ ಸ್ವಾಮೀಜಿ ಬಗ್ಗೆ ಯತ್ನಾಳ ವ್ಯಂಗ್ಯವಾಡಿದರು.

‘₹ 10 ಕೋಟಿ ವ್ಯವಹಾರ’

ಯತ್ನಾಳ

ನಮ್ಮ ಕೂಡಲ ಸಂಗಮದ ಸ್ವಾಮಿಗಳು ಮಠಕ್ಕಾಗಿ ಹಣ ತಗೊಂಡು ಕೂತವರಲ್ಲ. ಕೆಲ ಸ್ವಾಮಿಗಳು ಮಠಕ್ಕೆ ₹10 ಕೋಟಿ ತಗೊಂಡು ಗಪ್ ಕೂತರು. ಅಸೆಂಬ್ಲಿಯೊಳಗೆ ಈ ವಿಷಯದ ಬಗ್ಗೆ ಧ್ವನಿ ಎತ್ತುತ್ತೇನೆ. ಪಂಚಮಸಾಲಿಗಳನ್ನು ₹10 ಕೋಟಿ ಕೊಟ್ಟು ಖರೀದಿ ಮಾಡಿದ್ದೇವೆ ಅನ್ಕೊಂಡಿದ್ರು ವಿಜಯೇಂದ್ರ ಯಡಿಯೂರಪ್ಪ. ಸದ್ಯದಲ್ಲೇ 10 ಕೋಟಿ ವ್ಯವಹಾರವೂ ಆಚೆ ಬರುತ್ತದೆ ಎಂದು ಹೊಸ ಬಾಂಬ್ ಸಿಡಿಸಿದರು.

‘ಭೂಸ್ವಾಧೀನ ಪ್ರಕ್ರಿಯೆ ತ್ವರಿತಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿಯಲ್ಲಿ ಕೈಗಾರಿಕಾ ಪ್ರದೇಶ ನಿರ್ಮಾಣಕ್ಕಾಗಿ ಗುರುತಿಸಿರುವ ಜಮೀನಿನ ಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಜಮೀನು ಮಾಲೀಕರಿಗೆ ಪರಿಹಾರ ಮತ್ತು ಅವರ ಮಕ್ಕಳಿಗೆ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿ ಅಲ್ಲಿನ ಹಲವು ರೈತರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ರೇಸ್‌ಕೋರ್ಸ್ ರಸ್ತೆಯಲ್ಲಿರುವ ಖನಿಜ ಭವನದಲ್ಲಿರುವ ಕೆಐಎಡಿಬಿ ಪ್ರಧಾನ ಕಚೇರಿ ಎದುರು ಪ್ರತಿಭಟನೆ ನಡೆಸಿದ ರೈತರು, ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಭಾರತ್ ಕಿಸಾನ್ ಸಂಘದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜಯ್ಯ ನೇತೃತ್ವದಲ್ಲಿ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರನ್ನು ಭೇಟಿಮಾಡಿ ಮನವಿ ಸಲ್ಲಿಸಿದರು.

‘ಪ್ರತಿ ಎಕರೆ ಜಮೀನಿಗೆ ₹ 3 ಕೋಟಿಯಿಂದ ₹ 4 ಕೋಟಿ ಪರಿಹಾರ ನೀಡಬೇಕು. ನಮ್ಮ ಜಮೀನು ಬೇಕಿದ್ದಲ್ಲಿ ತ್ವರಿತವಾಗಿ ಸ್ವಾಧೀನಪಡಿಸಿಕೊಳ್ಳಬೇಕು. ಜಮೀನು ಕಳೆದುಕೊಳ್ಳುವ ಕುಟುಂಬಗಳ ಯುವಕ, ಯುವತಿಯರಿಗೆ ಉದ್ಯೋಗ ನೀಡಬೇಕು’ ಎಂದು ಒತ್ತಾಯಿಸಿದರು.

ಅಗ್ನಿಪಥ ವಿರುದ್ಧ ಆಕ್ರೋಶ ತೀವ್ರ

ಒಂದನೇ ಪುಟದಿಂದ...

ಹರಿಯಾಣದ ಗುರುಗ್ರಾಮ, ರೆವಾಡಿ ಮತ್ತು ಪಲವಲ್, ಆಗ್ರಾಚೌಕದಲ್ಲಿ ರಸ್ತೆ ತಡೆ ನಡೆದಿದೆ. ಪಲವಲ್‌ನಲ್ಲಿ ಪೊಲೀಸ್ ವಾಹನಕ್ಕೆ ಹಾನಿಯಾಗಿದೆ. ಗುರುಗ್ರಾಮದಲ್ಲಿ ಬಸ್‌ಗಳ ಸಂಚಾರವನ್ನು ಪ್ರತಿಭಟನಕಾರರು ಸ್ಥಗಿತಗೊಳಿಸಿ, ರಸ್ತೆ ತಡೆ ನಡೆಸಿದರು. ಸೇನಾ ಪಡೆಗಳಿಗೆ ಯುವ ಜನರನ್ನು ನಾಲ್ಕು ವರ್ಷಗಳ ಅವಧಿಗೆ ಗುತ್ತಿಗೆ ನೇಮಕ ಮಾಡಿಕೊಳ್ಳುವ ‘ಅಗ್ನಿಪಥ ಯೋಜನೆ’ಯನ್ನು ಸರ್ಕಾರವು ಮಂಗಳವಾರ ಪ್ರಕಟಿಸಿತ್ತು. ‘ಅಗ್ನಿಪಥ ಯೋಜನೆ’ ವಿರೋಧಿಸಿ ಇದೇ 28ರಿಂದ ಉತ್ತರ ಪ್ರದೇಶದ ಎಲ್ಲ ಜಿಲ್ಲೆಗಳಲ್ಲಿ ‘ಯುವ ಪಂಚಾಯತ್’ ಹೆಸರಿನಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಪ್ರಕಟಿಸಿದೆ.

ಪ್ರಮಾಣ ಸ್ವೀಕಾರ ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನೂತನವಾಗಿ ಆಯ್ಕೆ ಏಳು ಮಂದಿಗೆ ಹಂಗಾಮಿ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಅವರು ಪ್ರಮಾಣ ಬೋಧಿಸಿದ ಬಳಿಕ ಲಕ್ಷ್ಮಣ ಸವದಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು. ಕೇಶವ ಪ್ರಸಾದ್, ಛಲವಾದಿ ನಾರಾಯಣಸ್ವಾಮಿ, ಅಬ್ದುಲ್ ಜಬ್ಬಾರ್, ನಾಗರಾಜ್ ಯಾದವ್, ಟಿ.ಎ.ಶರವಣ, ಹೇಮಲತಾ ನಾಯಕ್ ಮತ್ತು ಪರಿಷತ್ ಕಾರ್ಯದರ್ಶಿ ಮಹಾಲಕ್ಷ್ಮಿ ಇದ್ದರು.

ಟಿ20 ಪಂದ್ಯ: ರಾತ್ರಿ 1ರ ತನಕ ಮೆಟ್ರೊ ರೈಲು

ಬೆಂಗಳೂರು: ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ಟಿ20 ಕ್ರಿಕೆಟ್ ಪಂದ್ಯದ ಹಿನ್ನೆಲೆಯಲ್ಲಿ ನಗರದಲ್ಲಿ ಜೂ.19ರಂದು ಮೆಟ್ರೊ ರೈಲು ಸೇವೆಯನ್ನು ಮಧ್ಯರಾತ್ರಿವರೆಗೆ ವಿಸ್ತರಿಸಲು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ನಿರ್ಧರಿಸಿದೆ.

ಕೊನೆಯ ನಿಲ್ದಾಣಗಳಾದ ಬೈಯಪ್ಪನಹಳ್ಳಿ, ಕೆಂಗೇರಿ, ನಾಗಸಂದ್ರ ಮತ್ತು ರೇಷ್ಮೆ ಸಂಸ್ಥೆ ನಿಲ್ದಾಣಗಳಿಂದ ಅಂದು ರಾತ್ರಿ 1 ಗಂಟೆಗೆ ಕೊನೆಯ ರೈಲುಗಳು ಹೊರಡಲಿವೆ. ನಾಡಪ್ರಭು ಕೆಂಪೇಗೌಡ ನಿಲ್ದಾಣದಿಂದ 1.30ಕ್ಕೆ ಹೊರಡಲಿವೆ ಎಂದು ತಿಳಿಸಿದೆ.

ಪೇಪರ್ ಟಿಕೆಟ್: ‘ವಾಪಸ್ ಹೋಗುವ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗುವ ಸಾಧ್ಯತೆ ಇದ್ದು, ನೂಕುನುಗ್ಗಲು ತಪ್ಪಿಸಲು ಮುಂಚಿತವಾಗಿಯೇ ಪೇಪರ್ ಟಿಕೆಟ್‌ಗಳನ್ನು ನೀಡಲಾಗುವುದು. ಮಧ್ಯಾಹ್ನ 3 ಗಂಟೆಯಿಂದಲೇ ಪೇಪರ್ ಟಿಕೆಟ್‌ಗಳು ಎಲ್ಲಾ ಮೆಟ್ರೊ ನಿಲ್ದಾಣಗಳಲ್ಲಿ ಲಭ್ಯವಾಗಲಿವೆ. ₹50 ದರದ ಪೇಪರ್ ಟಿಕೆಟ್ ಪಡೆದವರು ಕಬ್ಬನ್ ಪಾರ್ಕ್ ಮೆಟ್ರೊ ರೈಲು ನಿಲ್ದಾಣದಿಂದ ಯಾವುದೇ ನಿಲ್ದಾಣಕ್ಕೆ ರಾತ್ರಿ 10 ಗಂಟೆ ನಂತರ ಪ್ರಯಾಣಿಸಬಹುದು’ ಎಂದು ವಿವರಿಸಿದೆ.

‘ಪಂದ್ಯ ನೋಡಲು ಬರುವಾಗ ಎಂದಿನಂತೆ ಸ್ಮಾರ್ಟ್‌ಕಾರ್ಡ್ ಮತ್ತು ಟೋಕನ್‌ಗಳನ್ನು ಪಡೆದು ಪ್ರಯಾಣಿಸಬೇಕು. ವಾಪಸ್ ಹೋಗಲು ಪೇಪರ್ ಟಿಕೆಟ್‌ಗಳನ್ನು ಮಾತ್ರ ಬಳಸಲು ಅವಕಾಶ ಇದೆ’ ಎಂದು ತಿಳಿಸಿದೆ.

ಬಿಎಂಟಿಸಿಯಿಂದ ಹೆಚ್ಚುವರಿ ಬಸ್

ಬೆಂಗಳೂರು: ಕ್ರಿಕೆಟ್ ಪಂದ್ಯ ವೀಕ್ಷಿಸಲು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬರುವ ಜನರ ಅನುಕೂಲಕ್ಕಾಗಿ ಜೂನ್ 19ರಂದು ಹೆಚ್ಚುವರಿ ಬಸ್‌ಗಳ ಸೇವೆ ಒದಗಿಸಲು ಬಿಎಂಟಿಸಿ ನಿರ್ಧರಿಸಿದೆ.

ಮಧ್ಯಾಹ್ನ 3ರಿಂದ ಬೇಡಿಕೆಗೆ ಅನುಗುಣವಾಗಿ ಬಸ್ ಸೇವೆ ಒದಗಿಸಲಾಗುತ್ತದೆ. ಕ್ರೀಡಾಂಗಣದಿಂದ ಕಾಡುಗೋಡಿ ಬಸ್ ನಿಲ್ದಾಣ (ಎಚ್‌ಎಎಲ್ ರಸ್ತೆ, ಹೂಡಿ ರಸ್ತೆ), ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿ, ಬನ್ನೇರುಘಟ್ಟ, ಕೆಂಗೇರಿ ಕೆಎಚ್‌ಬಿ ಕಾಲೊನಿ(ಎಂಸಿಟಿಸಿ-ನಾಯಂಡಹಳ್ಳಿ), ಜನಪ್ರಿಯ ಟೌನ್‌ಶಿಪ್ (ಮಾಗಡಿ ರಸ್ತೆ), ನೆಲಮಂಗಲ, ಯಲಹಂಕ 5ನೇ ಹಂತ, ಆರ್.ಕೆ. ಹೆಗಡೆನಗರ (ನಾಗವಾರ, ಟ್ಯಾನರಿ ರಸ್ತೆ), ಬಾಗಲೂರು(ಹೆಣ್ಣೂರು ರಸ್ತೆ) ಮತ್ತು ಹೊಸಕೋಟೆಗೆ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ ಎಂದು ಬಿಎಂಟಿಸಿ ಪ್ರಕಟಣೆ ತಿಳಿಸಿದೆ.

ರಾಜ್ಯಸಭೆ: ನೂತನ 23 ಸದಸ್ಯರ ವಿರುದ್ಧ ಕ್ರಿಮಿನಲ್ ಪ್ರಕರಣ

ನವದೆಹಲಿ (ಪಿಟಿಐ): ರಾಜ್ಯಸಭೆಗೆ ಹೊಸದಾಗಿ ಆಯ್ಕೆಯಾಗಿರುವ 57 ಸದಸ್ಯರ ಪೈಕಿ 23 ಮಂದಿ ಮೇಲೆ (ಶೇ 40ರಷ್ಟು ಸದಸ್ಯರು) ಕ್ರಿಮಿನಲ್ ಪ್ರಕರಣಗಳಿವೆ. ಇವರಲ್ಲಿ ಬಿಜೆಪಿಯ ಒಂಬತ್ತು, ಕಾಂಗ್ರೆಸ್‌ನ ನಾಲ್ವರು ಸದಸ್ಯರು ಇದ್ದಾರೆ.

ಅಭ್ಯರ್ಥಿಗಳು ಸಲ್ಲಿಸಿದ್ದ ಪ್ರಮಾಣಪತ್ರಗಳನ್ನು ಆಧರಿಸಿ ಪ್ರಜಾಪ್ರಭುತ್ವ ಸುಧಾರಣಾ ಸಂಸ್ಥೆ (ಎಡಿಆರ್) ಈ ಬಗ್ಗೆ ವರದಿ ನೀಡಿದೆ. ಈ ಸದಸ್ಯರು ತಮ್ಮ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಇರುವುದನ್ನು ಘೋಷಿಸಿಕೊಂಡಿದ್ದಾರೆ ಎಂದು ವರದಿ ತಿಳಿಸಿದೆ.

ಕ್ರಿಮಿನಲ್ ಪ್ರಕರಣಗಳಿರುವ 23 ಸದಸ್ಯರಲ್ಲಿ ಉತ್ತರಪ್ರದೇಶದಿಂದ ಆರು ಮಂದಿ ಆಯ್ಕೆಯಾಗಿದ್ದಾರೆ. ಉಳಿದಂತೆ ಮಹಾರಾಷ್ಟ್ರ, ಬಿಹಾರದಿಂದ ಆಯ್ಕೆಯಾಗಿರುವ ತಲಾ ನಾಲ್ವರು, ತಮಿಳುನಾಡಿನ ಮೂವರು, ತೆಲಂಗಾಣದ ಇಬ್ಬರು, ಆಂಧ್ರಪ್ರದೇಶ, ಛತ್ತೀಸಗಡ, ರಾಜಸ್ಥಾನ, ಹರಿಯಾಣದ ತಲಾ ಒಬ್ಬರು ಸದಸ್ಯರು ಇದ್ದಾರೆ.

ಟಿಆರ್‌ಎಸ್‌ನ ಇಬ್ಬರು, ಆರ್‌ಜೆಡಿಯ ಇಬ್ಬರು, ವೈಎಸ್‌ಆರ್‌ಸಿಪಿ, ಡಿಎಂಕೆ, ಎಐಎಡಿಎಂಕೆ, ಎಸ್‌ಪಿ, ಶಿವಸೇನೆಯ ತಲಾ ಒಬ್ಬರು, ಒಬ್ಬ ಪಕ್ಷೇತರ ಅಭ್ಯರ್ಥಿ ತಮ್ಮ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಇರುವುದನ್ನು ಘೋಷಿಸಿಕೊಂಡಿದ್ದಾರೆ. ಒಟ್ಟಾರೆ 12 ಮಂದಿ ಸದಸ್ಯರು ತಮ್ಮ ವಿರುದ್ಧ ಗಂಭೀರ ಸ್ವರೂಪದ ಪ್ರಕರಣಗಳಿವೆ ಎಂದು ತಿಳಿಸಿದ್ದಾರೆ.

ಕೋಟ್ಯಧಿಪತಿಗಳು: ಹೊಸದಾಗಿ ಆಯ್ಕೆಯಾದ 57 ಸದಸ್ಯರಲ್ಲಿ 53 ಮಂದಿ ಕೋಟ್ಯಧಿಪತಿಗಳು. ಇವರಲ್ಲಿ ಟಿಎಸ್‌ಆರ್ ಪಕ್ಷದ ಬಂಡಿ ಪಾರ್ಥ ಅವರು ಸಿರಿವಂತರಾಗಿದ್ದು, ತಮ್ಮ ಒಟ್ಟು ಆಸ್ತಿಯ ಮೌಲ್ಯ ₹ 1,500 ಕೋಟಿ ಎಂದು ಘೋಷಿಸಿಕೊಂಡಿದ್ದಾರೆ.

ಜೈರಾಂ ರಮೇಶ್‌ಗೆ ಕಾಂಗ್ರೆಸ್ ಪಕ್ಷದ ಪ್ರಚಾರ, ಮಾಧ್ಯಮ ಉಸ್ತುವಾರಿ



ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಸಂವಹನ, ಪ್ರಚಾರ ಮತ್ತು ಮಾಧ್ಯಮ ವಿಭಾಗದ ಉಸ್ತುವಾರಿಯಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರನ್ನು ನೇಮಿಸಿದೆ. ರಣದೀಪ್ ಸುರ್ಜೇವಾಲಾ ಬದಲಿಗೆ ಇವರು ನೇಮಕಗೊಂಡಿದ್ದಾರೆ.

ತಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯಸಭೆ ಸದಸ್ಯ ಜೈರಾಂ ರಮೇಶ್ ಅವರಿಗೆ ಹೊಸ ಜವಾಬ್ದಾರಿಯನ್ನು ವಹಿಸಲಾಗಿದೆ. ಸುರ್ಜೇವಾಲಾ ಅವರು ಪಕ್ಷದ ಕರ್ನಾಟಕದ ಉಸ್ತುವಾರಿಯಾಗಿ ಮುಂದುವರಿಯುವರು ಎಂದು ಪಕ್ಷವು ಹೇಳಿಕೆಯಲ್ಲಿ ತಿಳಿಸಿದೆ.

ನಗರದಲ್ಲಿ ಇಂದು

ಭಾವಸಾರ ಕ್ಷತ್ರಿಯ ಶಾಲೆ ವಿದ್ಯಾರ್ಥಿಗಳಿಗೆ ಪುಸ್ತಕಗಳ ವಿತರಣಾ ಕಾರ್ಯಕ್ರಮ: ಉದ್ಘಾಟನೆ: ಸಂತೋಷ ಹೆಗ್ಡೆ, ಉಪಸ್ಥಿತಿ: ವೂಡೇ.ಪಿ. ಕೃಷ್ಣ, ಆಯೋಜಕರು: ಭಾವಸಾರ ಕ್ಷತ್ರಿಯ ಎಜುಕೇಷನಲ್ ಎನ್‌ಕರೇಜ್‌ಮೆಂಟ್ ಟ್ರಸ್ಟ್, ಸ್ಥಳ: ಭಾವಸಾರ ಕ್ಷತ್ರಿಯ ಸಮಾಜ ಶಾಲೆ, ಶ್ರೀ ಟಾಕೀಸ್ ಸರ್ಕಲ್, ಸೇಂಟ್ ಜೋಹಾನ್ಸ್ ರಸ್ತೆ, ಆರ್‌ಬಿಎಎನ್‌ಎಂಎಸ್ ಮೈದಾನದ ಹತ್ತಿರ, ಬೆಳಿಗ್ಗೆ: 9.30

ವಾಯು ಗುಣಮಟ್ಟ ನಿರ್ವಹಣೆ ಉಪನ್ಯಾಸ #21: ಉಪನ್ಯಾಸಕರು: ಶ್ರೀನಿವಾಸಲು, ವಿಷಯ: ನಗರದ ವಾಯು ಗುಣಮಟ್ಟದ ನಿರ್ವಹಣೆ ಮತ್ತು ಸವಾಲುಗಳು, ಮಧ್ಯಾಹ್ನ: 3 (ಆನ್‌ಲೈನ್ ಕಾರ್ಯಕ್ರಮ)

ಜ್ಯೋತಿ.ಸಿ.ಸಿಂಗ್ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ 'Coal'i'fied': ಅತಿಥಿಗಳು: ವಿ.ಸುನೀಲ್ ಕುಮಾರ್, ಸ್ಥಳ: ಚಿತ್ರಕಲಾ ಪರಿಷತ್ತು, ಗ್ಯಾಲರಿ ನಂ.1 ಮತ್ತು 2, ಕುಮಾರಕೃಪಾ ರಸ್ತೆ, ಸಂಜೆ: 5

ಚೈತನ್ಯ ಸಂಜೆ–814: ಅಧ್ಯಕ್ಷತೆ: ಶಾಂತಾಮಣಿ ಮೃತ್ಯುಂಜಯ, ಉಪನ್ಯಾಸ: ಡಾ.ರುದ್ರೇಶ್ ಅದರಂಗಿ, ವಿಷಯ: ಶರಣರ ಚಿಂತನೆಗಳು, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಬಿ.ಉಮೇಶ್, ಆಯೋಜಕರು: ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜು ಸಭಾಂಗಣ, ಗೇಟ್ ನಂ.7 38ನೇ ಕ್ರಾಸ್, 1ನೇ ಮುಖ್ಯ ರಸ್ತೆ , 8ನೇ ವಿಭಾಗ ಜಯನಗರ, ಸಂಜೆ: 5.30

ಶ್ರೀದೇವಿ-ಭೂದೇವಿ ಸಮೇತ ಲಕ್ಷ್ಮೀವೆಂಕಟರಮಣಸ್ವಾಮಿ, ಕರಿಯಣ್ಣಸ್ವಾಮಿ, ಕೆಂಚಣ್ಣಸ್ವಾಮಿ ದೇವಾಲಯಗಳ ಲೋಕಾರ್ಪಣೆ ಹಾಗೂ ಮಹಾಕುಂಭ ಅಭಿಷೇಕ ಮಹೋತ್ಸವ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉಪಸ್ಥಿತಿ: ಪ್ರಕಾಶನಾಥ ಸ್ವಾಮೀಜಿ, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಸ್ಥಳ: ಲಿಂಗಾಪುರ ಗ್ರಾಮ, ಕೆ.ಗೊಲ್ಲಹಳ್ಳಿ ಅಂಚೆ, ಕೆಂಗೇರಿ ಹೋಬಳಿ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ.ಬಿಐಎಪಿಎ/ಟಿಪಿ/ಭೂಉಬ/16/2022–23/572 ದಿನಾಂಕ: 15.06.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಯಶೋಧಮ್ಮ ಕೋಂ ಎಂ.ಎಸ್. ಶರಭಣ್ಣ	ದೇವನಹಳ್ಳಿ	ಕುಂದಾಣ	ಕಾಮೇನಹಳ್ಳಿ	121/1	2–00	ವ್ಯವಸಾಯ	ವಸತಿ
2	ಶ್ರೀಮತಿ ಹೇಮಲತಾ ಉರುಫ್ ಎಂ. ಜ್ಯೋತಿ ಮತ್ತು ಕುಮಾರಿ ಎಸ್. ಚೇತನ	ದೇವನಹಳ್ಳಿ	ಕುಂದಾಣ	ಕಾಮೇನಹಳ್ಳಿ	121/2	2–00	ವ್ಯವಸಾಯ	ವಸತಿ
3	ಶ್ರೀ ಜಯಶಂಕರ್ ಬಿನ್ ವೀರಭದ್ರಯ್ಯ, ಶ್ರೀಮತಿ ಬಿ.ಎಸ್. ಚಂದ್ರಕಲಾ ಕೋಂ ಲೇ॥ ಎಸ್.ವಿ. ಶಿವಶಂಕರ್, ಶ್ರೀ ವಿ.ಎಸ್. ಪ್ರದೀಪ್ ಕುಮಾರ್ ಬಿನ್ ಲೇ॥ ಎಸ್.ವಿ. ಶಿವಶಂಕರ್, ಶ್ರೀ ವಿ.ಎಸ್. ಪ್ರವೀಣ್ ಕುಮಾರ್ ಬಿನ್ ಲೇ॥ ಎಸ್.ವಿ. ಶಿವಶಂಕರ್, ಶ್ರೀಮತಿ ಉಮಾದೇವಿ ಬಿನ್ ವೀರಭದ್ರಯ್ಯ,	ದೇವನಹಳ್ಳಿ	ಕುಂದಾಣ	ಕಾಮೇನಹಳ್ಳಿ	122	4–00	ವ್ಯವಸಾಯ	ವಸತಿ
4	ಶ್ರೀ ಎಂ.ಎಸ್. ಶಾಂತಕುಮಾರ್ ಬಿನ್ ಎಂ.ಎಸ್. ಶರಭಣ್ಣ	ದೇವನಹಳ್ಳಿ	ಕುಂದಾಣ	ಕಾಮೇನಹಳ್ಳಿ	123/1	2–00	ವ್ಯವಸಾಯ	ವಸತಿ
5	ಕುಮಾರಿ ಎಸ್.ವಿ. ವಿನಯಶ್ರೀ	ದೇವನಹಳ್ಳಿ	ಕುಂದಾಣ	ಕಾಮೇನಹಳ್ಳಿ	123/2	1–00	ವ್ಯವಸಾಯ	ವಸತಿ
6	ಶ್ರೀ ಎಸ್.ವಿ. ವೀರೇಂದ್ರ	ದೇವನಹಳ್ಳಿ	ಕುಂದಾಣ	ಕಾಮೇನಹಳ್ಳಿ	123/3	1–00	ವ್ಯವಸಾಯ	ವಸತಿ
7	ಶ್ರೀಮತಿ ಪುಷ್ಪ, ಶ್ರೀ ಎಂ.ಎಸ್. ಸತೀಶ್, ಶ್ರೀಮತಿ ಪಿ.ಸಂಧ್ಯಾ	ದೇವನಹಳ್ಳಿ	ಕುಂದಾಣ	ಕಾಮೇನಹಳ್ಳಿ	124	4–00	ವ್ಯವಸಾಯ	ವಸತಿ
8	ಶ್ರೀ ಎಂ.ಎಸ್. ಮಹೇಶ್ ಕುಮಾರ್ ಬಿನ್ ಲೇ॥ ಎಂ.ಎಸ್. ಮುದ್ದರಾಚಪ್ಪ	ದೇವನಹಳ್ಳಿ	ಕುಂದಾಣ	ಕಾಮೇನಹಳ್ಳಿ	125	4–00	ವ್ಯವಸಾಯ	ವಸತಿ
9	ಶ್ರೀ ಎಂ.ಎಸ್. ದೇವರಾಜ್, ಶ್ರೀಮತಿ ಡಿ. ಮೇನಕ, ಶ್ರೀಮತಿ ಡಿ. ಸ್ವರ್ಣಲಕ್ಷ್ಮೀ	ದೇವನಹಳ್ಳಿ	ಕುಂದಾಣ	ಕಾಮೇನಹಳ್ಳಿ	126	4–00	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

DIPR/CP/KAVITA/920/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಉಪನಗರಗಳಿಗೆ ಮೆಮು ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ನಗರಕ್ಕೆ ಭೇಟಿ ನೀಡುವ ದಿನವೇ(ಜೂನ್ 20) ನಗರದ ಸುತ್ತಲಿನ ಉಪನಗರಗಳಿಗೆ ರೈಲುಗಳನ್ನು ಪುನರಾರಂಭಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್ಆರ್) ರೈಲು ನಿಲ್ದಾಣದಿಂದ ರಾಮನಗರಕ್ಕೆ(01763/01764) ನಿತ್ಯ ಮೆಮು ಎಕ್ಸ್‌ಪ್ರೆಸ್ ಪರಿಚಯಿಸಿದ್ದು, ಬೋಗಿಗಳ ಸಂಖ್ಯೆಯನ್ನು 8ರಿಂದ 16ಕ್ಕೆ ಹೆಚ್ಚಿಸಲಾಗಿದೆ. ಭಾನುವಾರ ಕೂಡ ಈ ರೈಲು ಸೇವೆ ಇರಲಿದೆ.

ಕೆಎಸ್ಆರ್‌ನಿಂದ ವೈಟ್‌ಫೀಲ್ಡ್ (01765/01766), ಕೆಎಸ್ಆರ್-ಕುಪ್ಪಂ (06529/06530), ಬಂಗಾರಪೇಟೆ-ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್(06527/06528), ಯಶವಂತಪುರ-ತುಮಕೂರು (06579), ತುಮಕೂರು-ಯಶವಂತಪುರ (06574) ಹಾಗೂ ಕೆಎಸ್ಆರ್‌ನಿಂದ ಮೈಸೂರಿಗೆ (06525/ 06526) ನಿತ್ಯ 16 ಬೋಗಿಗಳ ಮೆಮು ರೈಲು ಸೇವೆ ಆರಂಭಿಸಲು ನಿರ್ಧರಿಸಿದೆ. ಕೆಎಸ್ಆರ್‌ನಿಂದ ಬಂಗಾರಪೇಟೆ (01769/ 01770) ಹಾಗೂ ಕಂಟೋನ್ಮೆಂಟ್‌ನಿಂದ ಬಂಗಾರಪೇಟೆಗೆ (06389/ 06390) ಎಂಟು ಬೋಗಿಗಳ ಡೆಮು ರೈಲು ವಾರದ ಆರು ದಿನಗಳು ಲಭ್ಯ ಇರಲಿದೆ. ಧರ್ಮಪುರಿ- ಕೆಎಸ್ಆರ್ (06278) ನಡುವಿನ ಡೆಮು ರೈಲಿನ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದ್ದು, ಜೂನ್ 20ರಿಂದ ಅನ್ವಯವಾಗಲಿದೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

'ಎಲ್ಲಾ ನಿಲ್ದಾಣಗಳಲ್ಲೂ ನಿಲುಗಡೆ ಆಗುವ ಈ ರೈಲುಗಳಿಗೆ ಮೆಮು ಎಕ್ಸ್‌ಪ್ರೆಸ್ ಎಂದು ಹೆಸರಿಸಲಾಗಿದೆ. ಹಿಂದಿದ್ದ ರೈಲುಗಳ ಸೇವೆಯನ್ನೇ ಪುನರ್ ಆರಂಭಿಸಿ ಅದಕ್ಕೆ ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡಿ ಪ್ರಯಾಣಿಕರು ದುಪ್ಪಟ್ಟು ದರ ತೆರುವಂತೆ ಮಾಡಲಾಗಿದೆ. ಇದು ಸರಿಯಲ್ಲ' ಎಂದು ರೈಲ್ವೆ ಹೋರಾಟಗಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್: 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/06/2022–23 ದಿನಾಂಕ: 14.06.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ಎಸ್.ವಿ. ತಿಮ್ಮಯ್ಯ ಬಿನ್ ವೆಂಕಟರಮಣಪ್ಪ	ಆನೇಕಲ್	ಸರ್ಜಾಪುರ	ಸೊಳ್ಳೇಪುರ	117/1	1–31	ಕೈಗಾರಿಕಾ	ವಸತಿ	
2	ಶ್ರೀ ಎಸ್. ಶಶಿಕುಮಾರ್ ಬಿನ್ ಲೇ. ಎನ್. ಶ್ರೀನಿವಾಸ ರೆಡ್ಡಿ	ಆನೇಕಲ್	ಸರ್ಜಾಪುರ	ಸೊಳ್ಳೇಪುರ	120/1	1–09	ಕೈಗಾರಿಕಾ	ವಸತಿ	
3	ಶ್ರೀ ಪಿಲ್ಲಯ್ಯ ಬಿನ್ ಗುರಪ್ಪ	ಆನೇಕಲ್	ಸರ್ಜಾಪುರ	ಸೊಳ್ಳೇಪುರ	120/3	0–26	ಕೈಗಾರಿಕಾ	ವಸತಿ	
4	ಶ್ರೀ ನಾರಾಯಣರೆಡ್ಡಿ ಬಿನ್ ಲೇ. ಕೊಂಡಾರೆಡ್ಡಿ ಉ. ಕೊಂಡಪ್ಪ	ಆನೇಕಲ್	ಸರ್ಜಾಪುರ	ಸೊಳ್ಳೇಪುರ	120/4	0–24.04	ಕೈಗಾರಿಕಾ	ವಸತಿ	

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ತುಂಬಾ ಅನುಕೂಲವಾಗುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ದೊರಕುತ್ತದೆ. ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಹಾಗೂ ನಾಗರಿಕ ಸೌಲಭ್ಯ ಜಾಗಗಳು, ದೊರಕುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/926/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 03/2022
ದಿನಾಂಕ: 10.06.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ: ಆರ್‌ಡಿಎಸ್‌ಓ ನಿರ್ದಿಷ್ಟತೆ ಸಂ. RE/30/OHE/5 (11/60) & IS: 613/1984 ಅಥವಾ ಇತ್ತೀಚಿನದರ ಪ್ರಕಾರ 18 ಮಿಮೀ ಡಯಾ ಕಾಪರ್ ಬಸ್ ಬಾರ್.
ಟೆಂಡರ್ ಸಂ. L8225535 (ಪ್ರಮಾಣ: 1000 ಮೀಟರ್‌ಗಳು)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19–07–2022, 14:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಾಮಗ್ರಿಗಳ ಪ್ರಬಂಧಕರು
ಬೆಂಗಳೂರು

PUB/148/AAV/PRB/SWR/2022-23

S.W.Railways SWRRLY SWRRLY

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

REQUIRED
CIVIL ENGINEERS
EXPERIENCED IN PWD/IRRIGATION CIVIL WORKS
DRIVERS
Contact
9513884326

General

WANTED: FIELD Officer/Area Manager/Training Officer in & around Bangalore for Shashi Detective Services Pvt.Ltd. Rajajinagar-080-23133633/ 9845739500/ 9880495755

URGENT REQUIREMENT of Parking Cashiers For Supervisor Phoenix Market city Mahadevpura below 35 age limit. Contact: 9600800923.

Marketing & Sales

REQ, TEAMLEADER, Telecaller, & Field executive for Banking Loan collection (salary 20000). Direct recruitment to company Contact:- 9620206756, 9620200756.

WANTED TRANSPORT MARKETING PERSON, Shree Shyam Road Carrier, Makali 562162, Language: Hindi/ English/ Kannada. Salary 25,000 to 40,000/- 9742121211.

Part-Time Jobs

SANIYA PARTTIME Join Male Work with Highprofile Girl Work, Housewife, Earn (15000- 25000). 8979597135, 9557041436, 7043061724.

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

Receptionist/ Secretary

WANTED RECEPTIONIST (Female) with Computer Knowledge, Language: Eng & Kan, Salary: 12K, Loc: In and around Basaveshwar Nagar & Rajajinagar, Contact: 8073026526

Teachers/ Professors

WANTED TEACHERS St.Mark's English Medium School (Recognised by the Govt of A.P) Nursery to 10th Standard. Pamur- 523108, Prakasam Dist., Andhra Pradesh. Required Qualified and Experienced staff for English, Science, Social Maths and Computers for Primary Section. Salary: Negotiable & free food and accommodation. Contact: Within two days. Ph: 9663357420.

ST JOSEPH'S SCHOOL
Affiliated to CBSE #23, Vittal Mallya Road, Bengaluru-560001
Ph: 080-22226045
6366695008
Email: stjcbse@gmail.com
Applications are invited from eligible and Competent Candidates to Teach CBSE Class IX & X
Qualification
Post Graduation & B Ed in Mathematics
Preference will be given to candidates who have prior experience in CBSE Schools.
Resume should reach the Principal's office by 20 June 2022.

WANTED MONTESSORI Trained TEACHERS, ACHARYA SRI RAKUM PRIMARY SCHOOL, Devanahalli Taluk, Salary Rs. 15000/- with food and accommodation. Walk-in interview 10 am to 12 noon. Sri Rakum School, 421/i Sri Krishna Temple Road, Indiranagar 1st stage, Bangalore- 560038. Tel: 080 25215253/ 25215705.

SRI.RAMAKRISHNA EDUCATION Society, Halasuru Requires TEACHERS BSc (CBZ),BEd and PE TEACHERS. 8861248642/ 9845048824 Mail: srkes1963@gmail.com

NEW HOLY SAINT HIGH SCHOOL HAMPINAGAR Requires Kannada Lady Trained Teacher 15000/- Contact: 7892461960/ 9980802988

WANTED POST Graduate Lady Teachers for High school & Higher Primary English Medium B.Sc. B.Ed (PCM, CBZ) BA BEd English, History, Geography 5 Years Experience. Fluent in English. Freshers & Retd can also apply. Walk-in Interview with Originals on 20/06/2022 & 22/06/2022 Timings: 10AM To 1PM Apply To- The Principal/ Secretary PT. Jawaharlal Nehru Memorial High School 6/23/1,4 Main Road 9th Cross Chamarajpet (Near Nayara Petrol Bunk) BANGALORE- 560018

Wanted

WANTED VEG and Non Veg Cooking Manager Delivery Boy Cashier 50 Nos Contact: 8892501007/ 9606701007

REAL ESTATE SELLING

Flat

Banashankari

PRESTIGE BROOKLYN HEIGHTS, 3 BHK, semi furnished, ready to occupy apartment with all amenities for resale in Banashankari. Call: 9108050577.

Chandra Layout

3 BHK FLAT SALE near Chandra Layout, 1.25 cr. Slightly Negotiable (Brokers excuse). Contact: 9739999589

Jayanagar

JAYANAGAR 4TH 'T' Block, Spacious 1580 sft 2 BHK Apartment for Sale, Near Cakewala 9,500/- Sft. Call:9886655869.

Koramangala

PRESTIGE PINEWOOD, Koramangala, 2, 2.5 & 3 BHK, ready to occupy apartment with all amenities for resale. Call: 9900020184

Mahalakshmi Layout

READY TO Move, 3 BHK Flats, 1 KM from Iskcon Temple & Metro Station, Few Flats Left: 9845014364/ 9513999423

Uttarahalli

PRESTIGE LAKE ridge, Uttarahalli, 1 BHK, ready to occupy apartment with all amenities for resale. Call: 9008999266.

Sites

Devanahalli

PRESTIGE GOLFSHIRE MARINA, Plot of 13345 Sft for Sale on Nandi Hills Road, For details, call: 7022549452

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

HIGH end office space 1200 Sqft. Racecourse road with Conference room Cabins and workstations Basement parking Contact: 9900097097

80 SFT Commercial Complex Including Mini Party Hall Available, Pipeline Main Road Mahalakshmipuram: 9742628580/ 9538988534

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Flats

PRESTIGE MISTY WATERS, Vista Tower, Hebbal, 3 BHK ready to occupy apartment with all amenities for rent. Call: 9900085276.

PRESTIGE LAKE RIDGE, Uttarahalli, 2.5 & 3 BHK ready to occupy apartment with all amenities for rent. Call: 9008999266.

REAL ESTATE BUYING

Sites

Vishweshwariah Layout

WANTED SITES 20x30, 30x40,40x60,50x80 Vishveshwaraiah layout, Kempegowda Layout, RHCS-Layout, NGEF-Layout, ITI-Layout, Arkavathi Layout- 8861063532

PUBLIC NOTICE

PUBLIC NOTICE
Notice is hereby given that Mrs. SRIDEVI, W/o. P.C Shamasundara Reddy has agreed to sell us the 'Scheduled Property' mentioned hereunder free from all encumbrances. Any person having any right, title, interest, claim or demand of any nature whatsoever in respect of the said flat, is hereby required to make the same known in writing along with documentary proof thereof, to the undersigned within 14 days from date of publication hereof, failing with the negotiations shall be completed, without any reference to such claims and the claims if any, shall be deemed to have been given up or waived.

'SCHEDULED PROPERTY'
All that piece and parcel of portion of property bearing Residential house list no 93, old no 93/6, Old Khata #762, New BBMP Khata #1473 situated at Munnekolala Village, Varthur Hobli, Bangalore East Taluk, presently under BBMP limits measuring East to West 30 Feet and North to South 52 Feet in all measuring 1560 Sq. Ft and bounded on. **East by**: Property of P.C Rama Reddy, **West by**: Property of P.C Shamasundara Reddy **North by**: 25 Feet Road **South by**: Rayasandra Munireddy's House.
Sd/- **K Srikar Reddy,** (Mob: 9845131417)
Venkatadri Nilayam, 1st Cross, Kaveri Layout, Marathahalli, Bangalore.
Place:Bangalore Date:17.6.2022

ಸಾರ್ವಜನಿಕರ ಗಮನಕ್ಕೆ
ಟ್ರಿನಿಟಿ ಎಜುಕೇಷನ್ ಟ್ರಸ್ಟ್
ಸಂಖ್ಯೆ: 50, 2/3, 1ನೇ ಕ್ರಾಸ್ ರಸ್ತೆ, ವೀರಣ್ಣಪಾಳ್ಯ, ಬೆಂಗಳೂರು–45.
ಈ ಮೇಲ್ಕಂಡ ಸೂಚನೆಯ ಮೇರೆಗೆ ಅಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಅರ್. ರಸ್ತೆ, ಬೆಂ – 1. ಅದಿಸೂಚನೆ ಸಂಖ್ಯೆ – ನಂ.
E 783020-DPI-CP-10C7-2 (SCNC)/2/2022-GRANT IN AID SEC DATED 22.05.2022
ಕಿಂಗ್‌ಸ್ಟನ್ ಹೈ ಲೋವರ್ ಪ್ರೈಮರಿ ಸ್ಕೂಲ್
(CISCE, New Delhi ಮಂಡಳಿಗೆ ಸಂಯೋಜಿತವಾಗಿದೆ. ಶಾಲೆಯ ಕೋಡ್: KA 356)
ನಂ. 50, 2/3, 1ನೇ "ಎ" ಕ್ರಾಸ್, ವೀರಣ್ಣಪಾಳ್ಯ, ಬೆಂಗಳೂರು–560045 ಎಂಬ ಶಾಲೆಯ ಹೆಸರು ಬದಲಾಗಿ
ಕಿಂಗ್‌ಸ್ಟನ್ ಹೈಸ್ಕೂಲ್ ಎಂದು ಬದಲಾಗಿದೆ.

UVCE GRADUATES ASSOCIATION
NOTICE IS HEREBY GIVEN THAT the 2nd General Meeting (AGM) of the Association is scheduled to be held on **Sunday, 10th July, 2022 at 11 AM in the KEB Engineers Association,** Anand Rao Circle, Bengaluru along with elections. Agenda and Calendar of events can be viewed in the website: **www.uvcega.org**
Sd/- Secretary
Date: 17-06-2022 Place: Bengaluru

BUSINESS

Business Offers

Finance

WANTED BUSINESS Partner Non Veg Hotel 1 Crore Investment Monthly Income 10 Lakhs: 8892501007/ 9606701007

WANTED BUSINESS Partner Non Veg Hotel 10 Lakhs Investment Monthly Income 1 Lakhs: 8892501007/ 9606701007

General

EARN 65,000/- to 90,000/- per-month. Setup Paper-bags, Tea-cups, LED-Bulbs unit. We provide free raw material. Buyback Agreement. Contact: 9958628785.

EDUCATIONAL

Correspondence Courses

DIRECT FINAL PUC B.Com BA BBA BCA MBA B.Ed Diploma BE D.Pharm PhD: 9739077186/ 8618506480

Special Courses

JOB ORIENTED Course Diploma in Student Counselling 6months ONLINE CLASSES, Starts 12.07.2022 WhatsApp 9886044221 www.darwinpsychologycentre.com

PERSONAL

Change of Name

CHANGE OF NAME
I, **Manoj Kumar Jain** S/o Late Subhaschand aged about 42 Years Residing at No 180, 1st Floor, 8th Cross, 7th Main Jayanagar, 2nd Block, Bengaluru - 560 011. Declare that my son's name as per school records wrongly mentioned as **Puneet Jain M** instead of **Puneet Jain** both the names belongs to one and same person, I will continue my name in future as **Puneet Jain** my son only vide affidavit dated 10.06.2022 sworn before notary R.Basavaraja, Bengaluru.

DEVENDRA PRATAP SINGH, 6492891K, HAV, Vill- Ahirgaon, Alarpatan, Satna Madhya Pradesh changed Son's name from SAILENDER KUMAR SINGH to SHALENDER KUMAR SINGH 15/06/2022 Notary K.V. Mani Bangalore

I, SHILPA AGARWALLA D/o. Mr. Sajjan Agarwalla, aged about 40 years, residing at No S-315, Soudhamini Apartment, Kanakapura Main Road, Udayapura Kaggalipura, Udaypura Bengaluru -560082 have changed my daughter's name from HITAKSHI TAYAL to HITAKSHI AGARWAL vide Affidavit dated 16.06.2022 sworn to before IV Addl. Chief Metropolitan Magistrate, Bengaluru

I, B.S. Srinivasa Murthy Residing at No. 14, 6th Cross, Kalkere Main Road, Sir M.V. Nagar Ramamurthy Nagar, Bangalore North Dooravani Nagar Bangalore-560016, have changed my minor daughter's name from STHUTHI SRI to STUTTI SHREE vide affidavit dated 16.06.2022 before notary L. Gopalakrishna, Banglaore. Henceforth she shall be known as STUTTI SHREE only.

I SHINU MADATHIL SUKUMARAN Residing at No. 6, 6th Cross, Bhuvaneshwari Nagar, Sulthan palya R.T.Nagar, Bangalore-560032 declare that my minor daughter's actual name is AVANTIKA MADATHIL SHINU instead of AVANTIKA MADATHIL SUKUMARAN vide affidavit dated 14.06.2022, before notary T.V. Chandrashekara Reddy Bangalore. Henceforth she will be known as AVANTIKA MADATHIL SHINU.

I, SAYED ZEESHAN HUSAIN NAQVI Residing 203, 8th Cross Road, Teacher's Colony, Venkatapura Koramangala, Bangalore-560034 have changed my name to SYED ZEESHAN HUSSAIN NAQVI vide affidavit dated 16.06.2022, before notary K.V. Mani Bangalore. Henceforth I shall be known as SYED ZEESHAN HUSSAIN NAQVI only.

I, MOHAMMED EHTESHAM UL HAQ MALIK R/o 39, Patalamma Temple Street, Basavanagudi, Bangalore-4 states that in My Passport No. Z2296385 my father's name to be corrected as MOHAMMED ALI JAMDAR (instead of MOHAMMED ALI MOHAMMED HUSSAIN JAMDAR), I further states that above both names are one & the same & belongs to my father only vide affidavit dated 16/6/2022 before Notary T.R. Raghavendra Rao, Bangalore

I A. SRINIVASULU @ N. RAJESH R/o. Nainde Mandalam Post Puttu Mandala Puttur District Andhra Pradesh presently R/at #23/136, Nethajinagar, Mathigiri Hosur Cattle Farm Krishnagiri, TN- 635110 declare that both these names pertain to me only, my D.O.B wrongly mentioned in the aadhar card as 1975 correct D.O.B 06.05.1984 henceforth I shall be known as A. SRINIVASULU affidavit 03.06.2022, notary S.I.Balaguru Bangalore.

PUSPAVALLI, MOTHER/O, JC682079P, NB SUB, S SHIVA KUMAR, Vill - Ramanathapuram, Aranmanai (Ramanathapuram) Tamil Nadu changed name from PUSPAVALLI to PUSHPAVALLI 15/06/2022 Notary K.V. Mani Bangalore

Lost

LOST
I, **Wail Abdullah Naji Saeed,** residing at Kammanahalli (Permanent resident of Republic of Yemen) have lost my Passport **(#09625804)** while in transit.
Finders please contact: 074064 83467

CONNECT ಕ್ಲಾಸಿಫೈಡ್ಸ್

International Day of Yoga Celebrations
Azadi Ka Amrit Mahotsav


A CELEBRATION OF YOGA
by AthaYog Living
In association with Office of TEJASVI SURYA
FREE and open to all!
Scan to register
FOUR DAYS TO GO!
5.30 am onwards, 21st June
Kittur Rani Chenamma Stadium, Jayanagar
ATHAYOG LIVING ಅಥಯೋಗ್ ಲಿವಿಂಗ್
Leading Yoga Academy
www.athayogliving.com
+91 8690333111

DH DECCAN HERALD ಪ್ರಜಾವಾಣಿ

Classifieds EDUCATION SPECIAL
SPECIAL RATES FOR
Admission Notice,
Education Success
Congratulation Ads
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

ಕರಾವಳಿಯಲ್ಲಿ ಜೂನ್ 20ರವರೆಗೆ 'ಯೆಲ್ಲೋ ಅಲರ್ಟ್'

ಯಲ್ಲಮ್ಮ ದೇವಸ್ಥಾನಕ್ಕೆ ಮಳೆನೀರು

ಪ್ರಜಾವಾಣಿ ವಾರ್ತೆ

ಉಗರಗೋಳ (ಬೆಳಗಾವಿ ಜಿಲ್ಲೆ)/ ಕಾರವಾರ: ಇಲ್ಲಿನ ಯಲ್ಲಮ್ಮನ ಗುಡ್ಡದ ಸುತ್ತ ಗುರುವಾರ ಸುರಿದ ಧಾರಾಕಾರ ಮಳೆಯಿಂದ ಅಪಾರ ಪ್ರಮಾಣದ ನೀರು ದೇವಸ್ಥಾನದ ಒಳಗೆ ನುಗ್ಗಿತು.

ಸಂಜೆ 4ರ ಸುಮಾರಿಗೆ ಏಕಾಏಕಿ ಆರಂಭವಾದ ಮಳೆ ಒಂದು ತಾಸು ನಿರಂತರ ಸುರಿಯಿತು. ಸುತ್ತಲಿನ ಗುಡ್ಡಗಳಿಂದ ಹರಿದುಬಂದ ನೀರು ಅಲ್ಲಿನ ಎಣ್ಣೆಹೊಂಡ ಸೇರಿತು. ಹೊಂಡ ತುಂಬಿದ ಬಳಿಕ ದೇವಸ್ಥಾನದ ಪ್ರಾಂಗಣಕ್ಕೂ ನುಗ್ಗಿತು ಎಂದು ಭಕ್ತರು ತಿಳಿಸಿದ್ದಾರೆ. ನೀರು ನುಗ್ಗಿದ್ದರಿಂದ ದೇವಸ್ಥಾನದ ಸುತ್ತಲಿನ ಪೂಜಾ ಸಾಮಗ್ರಿಗಳ ಮಳಿಗೆಗಳಿಗೂ ಹಾನಿಯಾಗಿದೆ.

ಬೈಲಹೊಂಗಲ ಸಮೀಪದ ಮುರಗೋಡ ಗ್ರಾಮದಲ್ಲಿ ಸುತ್ತಮುತ್ತ ಗುರುವಾರ ಸಂಜೆ ಭಾರಿ ಮಳೆ ಸುರಿಯಿತು. ಬಿಸಿಲಿನ ಧಗೆಯಿಂದ ಜನರು ಬಸವಳಿದಿದ್ದರು. ಏಕಾಏಕಿ ಸುರಿದ ಮಳೆ ತಂಪೆರೆಯಿತು. ಮಳೆ ಇಲ್ಲದೆ ಬಿತ್ತನೆ ಕಾರ್ಯಕ್ಕೆ ತೊಂದರೆ ಆಗಿತ್ತು. ಈ ಮಳೆ ರೈತರಲ್ಲಿ ಖುಷಿ ಮೂಡಿಸಿದೆ.

ರಭಸದ ಮಳೆ: ಕಾರವಾರ ಜಿಲ್ಲೆ ಹಳಿಯಾಳ ತಾಲ್ಲೂಕಿನ ವಿವಿಧೆಡೆ ಗುರುವಾರ ಮಧ್ಯಾಹ್ನ ಸುಮಾರು ಒಂದು ತಾಸು ರಭಸದ ಮಳೆಯಾಯಿತು. ರೈತರು ಮುಂಗಾರು ಅವಧಿಯ ಗೋವಿನ ಜೋಳ ಬಿತ್ತನೆ ಮಾಡಿದ್ದು, ಮಳೆಯಿಂದಾಗಿ ಅನುಕೂಲವಾಗಿದೆ.

ಕರಾವಳಿಯಾದ್ಯಂತ ಒಂದೆರಡು ಸಲ ಸಾಮಾನ್ಯ ಮಳೆಯಾಯಿತು. ದಿನವಿಡೀ ಬಿಸಿಲು, ಮೋಡದ ವಾತಾವರಣವಿತ್ತು. ರಾಜ್ಯದ ಕರಾವಳಿಯಲ್ಲಿ ಜೂನ್ 20ರವರೆಗೆ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದ್ದು, ಜೋರು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ.

ಮಳೆಗಾಗಿ ಪ್ರಾರ್ಥನೆ: ಮುಂಡಗೋಡ ತಾಲ್ಲೂಕಿನ ಉಗ್ನಿಕೇರಿ ಗ್ರಾಮಸ್ಥರು ಅಮ್ಮಿನಬಾವಿ ಕೆರೆ ಹತ್ತಿರದ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಮಳೆಗಾಗಿ ಪ್ರಾರ್ಥಿಸಿದರು. ಬಿತ್ತಿರುವ ಬೀಜಗಳು ಮೊಳಕೆಯೊಡೆದು ಉತ್ತಮ ಫಸಲು ಬರುವಂತೆ ಸಾಮೂಹಿಕವಾಗಿ ಪ್ರಾರ್ಥಿಸಿದರು.

ಮಳೆಗಾಗಿ ವೇದಮೂರ್ತಿ ರುದ್ರಮುನಿ ಸ್ವಾಮೀಜಿ ನೇತೃತ್ವದಲ್ಲಿ ಜೂ.19ರಂದು ಪಟ್ಟಣದ ಹಳಿಯಾಳ ಓಣಿಯಲ್ಲಿ ಪೂಜೆ ನಡೆಯಲಿದೆ.

ಕಲಬುರಗಿ ವರದಿ: ಕಲಬುರಗಿ ಜಿಲ್ಲೆಯ ಚಿಂಚೋಳಿ, ಬೀದರ್ ಜಿಲ್ಲೆಯ ಚಿಟಗುಪ್ಪ ಮತ್ತು ಕೊಪ್ಪಳ ಜಿಲ್ಲೆಯ ಕುಷ್ಟಗಿ, ಯಲಬುರ್ಗಾ ಮತ್ತು ಮುನಿರಾಬಾದ್‌ನಲ್ಲಿ ಗುರುವಾರ ಮಳೆಯಾಯಿತು.

ಬೆಂಗಳೂರಿನ ಪೀಣ್ಯದಲ್ಲಿ ಗುರುವಾರ ಸಂಜೆ ಸುರಿದ ಮಳೆಯ ನಡುವೆ ವಾಹನ ಸಂಚಾರ ಕಂಡುಬಂದಿತು –ಪ್ರಜಾವಾಣಿ ಚಿತ್ರ

ಮಂಗಳೂರು: ವಿವಿಧೆಡೆ ಮಳೆ

ಮಂಗಳೂರು: ಕರಾವಳಿ ಜಿಲ್ಲೆಗಳು ಹಾಗೂ ಚಿಕ್ಕಮಗಳೂರು ಜಿಲ್ಲೆಯ ವಿವಿಧೆಡೆ ಗುರುವಾರ ಸಾಮಾನ್ಯ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಪುತ್ತೂರು ಮುಂತಾದೆಡೆ ಹಾಗೂ ಉಡುಪಿ ಜಿಲ್ಲೆಯ ಉಡುಪಿ, ಹೆಬ್ರಿ ಮುಂತಾದ ಭಾಗಗಳಲ್ಲಿ ತುಂತುರು ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಭಾಗದಲ್ಲಿ ಬಿರುಸಿನ ಮಳೆ ಸುರಿದಿದೆ. ಆಲ್ದೂರಿನಲ್ಲಿ ಸುಮಾರು ಅರ್ಧ ತಾಸು ಮಳೆಯಾಗಿದ್ದರಿಂದ ಸಂತೆ ವಹಿವಾಟಿಗೆ ಅಡ್ಡಿಯಾಯಿತು. ರಸ್ತೆಗಳಲ್ಲಿ ನೀರು ತುಂಬಿಕೊಂಡಿತ್ತು. ಗಿರಿ ಶ್ರೇಣಿ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಕೊಪ್ಪ ಭಾಗದಲ್ಲಿ ತುಂತುರು ಮಳೆಯಾಗಿದೆ.

ಸಿದ್ದಾಪುರ: ಬಿರುಸಿನ ಮಳೆ

ಮೈಸೂರು: ಮೈಸೂರು ಭಾಗದ ಕೊಡಗು, ಮಂಡ್ಯ, ಚಾಮರಾಜನಗರ ಜಿಲ್ಲೆಯಲ್ಲಿ ಗುರುವಾರ ಬಿರುಸಿನ ಮಳೆಯಾಗಿದೆ.

ಕೊಡಗು ಜಿಲ್ಲೆಯ ಸಿದ್ದಾಪುರ ಭಾಗದಲ್ಲಿ ಗುರುವಾರ ಧಾರಾಕಾರ ಮಳೆ ಸುರಿಯಿತು. ಬೆಳಿಗ್ಗೆಯಿಂದ ಬಿಸಿಲಿನ ವಾತಾವರಣವಿತ್ತು.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಉತ್ತಮ ಮಳೆ ಸುರಿಯಿತು. ಸಂಜೆ 5 ಗಂಟೆಗೆ ಆರಂಭವಾದ ಸೋನೆ ಮಳೆ ಬಳಿಕ ಬಿರುಸು ಪಡೆದುಕೊಂಡಿತು.

ಚಾಮರಾಜನಗರ ಜಿಲ್ಲಾ ಕೇಂದ್ರ, ಯಳಂದೂರು, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಧಾರಾಕಾರ ಮಳೆ ಸುರಿಯಿತು. ಚಾಮರಾಜನಗರ, ಯಳಂದೂರು ಸುತ್ತಮುತ್ತ ರಾತ್ರಿ ಅರ್ಧ ಗಂಟೆಗೂ ಹೆಚ್ಚು ಹೊತ್ತು ಮಳೆ ಸುರಿದಿದೆ. ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿ ಭಾಗದಲ್ಲೂ ಉತ್ತಮ ಹಾಗೂ, ಕೊಳ್ಳೇಗಾಲ, ಹನೂರು ತಾಲ್ಲೂಕಿನಲ್ಲಿ ತುಂತುರು ಮಳೆ ಆಗಿದೆ.

ಗೊಬ್ಬರ ಕೇಳಿದ್ದಕ್ಕೆ ಕೇಂದ್ರ ಸಚಿವ ಖೂಬಾ ತರಾಟೆ

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್): ಗೊಬ್ಬರ ಕಳುಹಿಸುವಂತೆ ದೂರವಾಣಿ ಕರೆ ಮಾಡಿದ ಔರಾದ್ ತಾಲ್ಲೂಕಿನ ಹೆಡಗಾಪುರ ಗ್ರಾಮದ ವ್ಯಕ್ತಿಯೊಬ್ಬರನ್ನು ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಅವರು ತರಾಟೆಗೆ ತೆಗೆದುಕೊಂಡಿರುವ ಮೊಬೈಲ್ ಸಂಭಾಷಣೆಯ ರೆಕಾರ್ಡಿಂಗ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಸಚಿವ ಖೂಬಾ ಅವರಿಗೆ, ಕುಶಾಲ ಪಾಟೀಲ ಎಂಬುವರು ಕರೆ ಮಾಡಿ, 'ನಮ್ಮ ಊರಲ್ಲಿ ಗೊಬ್ಬರ ಸಿಗುತ್ತಿಲ್ಲ. ಜನ ಕೆಟ್ಟದಾಗಿ ಮಾತನಾಡುತ್ತಿದ್ದಾರೆ. ಹೀಗಾದರೆ ನಿಮಗೆ ಮುಂದೆ ಚುನಾವಣೆಯಲ್ಲಿ ತೊಂದರೆಯಾಗುತ್ತದೆ' ಎಂದು ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ಗೊಬ್ಬರ ಮನೆಮನೆಗೆ ಹಂಚುವ ಕೆಲಸ ನನ್ನದಲ್ಲ. ನಾನು ಕೇಂದ್ರ ಸಚಿವ. ಯಾವ ರಾಜ್ಯಕ್ಕೆ ಎಷ್ಟು ಗೊಬ್ಬರ ಕೊಡಬೇಕು ಅಷ್ಟು ಕೊಟ್ಟಿದ್ದೇನೆ. ನಿಮ್ಮ ಎಂಎಲ್‌ಎ ಇದ್ದಾನೆ. ಅಧಿಕಾರಿಗಳು ಇದ್ದಾರೆ ಅವರನ್ನು ಕೇಳಿ' ಎಂದಿದ್ದಾರೆ.

ಇದಕ್ಕೆ ಉತ್ತರಿಸಿದ ಕುಶಾಲ ಪಾಟೀಲ 'ನೀವು ಈ ರೀತಿ ಮಾತನಾಡಿದರೆ ಅಂಜುವ ವ್ಯಕ್ತಿ ನಾನಲ್ಲ. ನಾನೂ ಎಲ್ಲದಕ್ಕೂ ತಯಾರಿದ್ದೀನಿ' ಎನ್ನುವ ಖೂಬಾ ಅವರ ಜತೆಗಿನ ನಾಲ್ಕು ನಿಮಿಷದ ಸಂಭಾಷಣೆಯ ಧ್ವನಿಮುದ್ರಣ ಎಲ್ಲೆಡೆ ಹರಿದಾಡುತ್ತಿದೆ.

ಈ ಸಂಭಾಷಣೆ ಕುರಿತು ಪ್ರತಿಕ್ರಿಯಿಸಿರುವ ಖೂಬಾ ಅವರು, 'ಸರ್ಕಾರಿ ಶಾಲೆಯ ಶಿಕ್ಷಕರೊಬ್ಬರು ರೈತನ ಹೆಸರಲ್ಲಿ ಮೊಬೈಲ್‌ನಲ್ಲಿ ಆಡಿದ ಸಂಭಾಷಣೆ ರೆಕಾರ್ಡ್ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ. ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಪ್ರಯತ್ನಿಸಿದ್ದಾರೆ. ಆದರೆ, ನಾನು ಸದಾಕಾಲ ರೈತರ ಜತೆಗೆ ಇದ್ದೇನೆ' ಎಂದು ತಿಳಿಸಿದ್ದಾರೆ.

ಹಾವೇರಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅವ್ಯವಹಾರ ಆರೋಪ

'ವಿದ್ಯಾಸಿರಿ' ಸ್ಕಾಲರ್‌ಶಿಪ್‌ಗೆ ಕನ್ನ!

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಬಡ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ 'ವಿದ್ಯಾಸಿರಿ' ಯೋಜನೆ ಜಾರಿಗೊಳಿಸಲಾಗಿದೆ. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತವರು ಜಿಲ್ಲೆ ಹಾವೇರಿಯಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲೇ 'ವಿದ್ಯಾಸಿರಿ'ಯ ವಿದ್ಯಾರ್ಥಿವೇತನ ವಿದ್ಯಾರ್ಥಿಗಳ ಕೈಸೇರಿಲ್ಲ.

ಕಾಲೇಜು ನೀಡಿರುವ 'ವಿದ್ಯಾಸಿರಿ' ಚೆಕ್‌ಗಳನ್ನು ವಿದ್ಯಾರ್ಥಿಗಳು ಬ್ಯಾಂಕಿಗೆ ಸಲ್ಲಿಸಿದರೆ, ಅಕೌಂಟಿನಲ್ಲಿ ಹಣವಿಲ್ಲ ಎಂಬ ಕಾರಣದಿಂದ 'ಚೆಕ್‌ಬೌನ್ಸ್' ಆಗುತ್ತಿವೆ. ಕಾಲೇಜಿನಲ್ಲಿ ನಡೆದಿರುವ ಲಕ್ಷಾಂತರ ರೂಪಾಯಿ ಅವ್ಯವಹಾರವೇ ಇದಕ್ಕೆ ಕಾರಣ ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

ಎಸ್‌ಡಿಎ ನಾಪತ್ತೆ: ಕಾಲೇಜಿನಲ್ಲಿ ವಿದ್ಯಾರ್ಥಿ ವೇತನ ವಿಭಾಗವನ್ನು ನೋಡಿಕೊಳ್ಳುತ್ತಿದ್ದ ದ್ವಿತೀಯ ದರ್ಜೆ ಸಹಾಯಕ ರವೀಂದ್ರಕುಮಾರ ನಾಲ್ಕು ತಿಂಗಳುಗಳಿಂದ ಅನಧಿಕೃತ ಗೈರು ಹಾಜರಾಗಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಕಾಲೇಜಿನವರು ದೂರವಾಣಿ ಮೂಲಕ ಸಂಪರ್ಕಿಸಲು ಯತ್ನಿಸಿದರೂ, ರವೀಂದ್ರಕುಮಾರ ಅವರಿಂದ ಪ್ರತ್ಯುತ್ತರ ಬಂದಿಲ್ಲ.

ಶಿಸ್ತುಕ್ರಮ ಕೈಗೊಳ್ಳುವ ಬಗ್ಗೆ ಎಚ್ಚರಿಕೆ ನೀಡಿ, ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ಜಯನಗರ ಬಡಾವಣೆಯ ಕಾಯಂ ವಿಳಾಸ ಹಾಗೂ ಹಾವೇರಿಯ ಬಸವೇಶ್ವರ ನಗರದ ತಾತ್ಕಾಲಿಕ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಿದ 'ಜ್ಞಾಪನ ಪತ್ರ'ಗಳು ಕಾಲೇಜಿಗೆ ವಾಪಸ್ ಬಂದಿವೆ ಎನ್ನುತ್ತಾರೆ ಆಡಳಿತ ಕಚೇರಿ ಸಿಬ್ಬಂದಿ.

ತನಿಖಾ ವರದಿ: ವಿದ್ಯಾರ್ಥಿವೇತನಕ್ಕೆ ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಒತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ, ಕಾಲೇಜು ಮಟ್ಟದಲ್ಲಿಯೇ ಒಂದು ಸಮಿತಿ ರಚಿಸಿ ತನಿಖೆಗೆ ಆದೇಶಿಸಲಾಗಿತ್ತು. ಸಮಿತಿಯವರು ವಿದ್ಯಾರ್ಥಿ ವೇತನ ಹಾಗೂ ಶೈಕ್ಷಣಿಕ ವಿದ್ಯಾಭ್ಯಾಸ ಸಾಲದ ಬ್ಯಾಂಕ್ ಖಾತೆಗಳ ವಿವರಣಾತ್ಮಕ ಪಟ್ಟಿಯನ್ನು ಬ್ಯಾಂಕಿನಿಂದ ತರಿಸಿ ಮೊತ್ತ ಪರಿಶೀಲಿಸಿದಾಗ, ಭಾರಿ ಪ್ರಮಾಣದ ವ್ಯತ್ಯಾಸ ಕಂಡು ಬಂದಿದೆ. ಇದರಲ್ಲಿ ಅವ್ಯವಹಾರದ ವಾಸನೆ ಕಂಡುಬಂದಿದೆ ಎಂದು ಸಮಿತಿಯು ತನ್ನ ವರದಿಯಲ್ಲಿ ಸ್ಪಷ್ಟವಾಗಿ ತಿಳಿಸಿದೆ.

ಎಫ್‌ಐಆರ್ ಏಕಿಲ್ಲ?: ವಿದ್ಯಾರ್ಥಿಗಳಿಗೆ ಬರಬೇಕಾದ ವಿದ್ಯಾರ್ಥಿ ವೇತನ ಹಾಗೂ ಶೈಕ್ಷಣಿಕ ವಿದ್ಯಾಭ್ಯಾಸ ಸಾಲದಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆದಿದ್ದರೂ, ಇದನ್ನು ನಿರ್ವಹಣೆ ಮಾಡುತ್ತಿದ್ದ ಎಸ್‌ಡಿಎ ರವೀಂದ್ರಕುಮಾರ ಅವರ ವಿರುದ್ಧ ಇದುವರೆಗೂ ಕಾಲೇಜು ಆಡಳಿತ ಮಂಡಳಿ ಪೊಲೀಸ್ ಠಾಣೆಯಲ್ಲಿ ಏಕೆ ಎಫ್‌ಐಆರ್ ದಾಖಲಿಸಿಲ್ಲ? ಇವರ ಜತೆ ಯಾರ್‍ಯಾರು ಅಕ್ರಮದಲ್ಲಿ ಶಾಮೀಲಾಗಿದ್ದಾರೆ? ಎಂಬುದನ್ನು ಪತ್ತೆ ಹಚ್ಚಿ, ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ವಿಧಿಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಲೋನ್ ಹಣದಲ್ಲೂ ವಂಚನೆ: 'ಶೈಕ್ಷಣಿಕ ಸಾಲ'ಕ್ಕೆ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಹಲವಾರು ಬ್ಯಾಂಕುಗಳಲ್ಲಿ ಅರ್ಜಿ ಸಲ್ಲಿಸಿದ್ದರು. ಬ್ಯಾಂಕುಗಳಿಂದ ಬಿಡುಗಡೆಯಾದ ಸಾಲದ ಮೊತ್ತ ಕಾಲೇಜು ಅಕೌಂಟ್‌ನಲ್ಲಿ ಜಮೆಯಾಗಿ, ನಂತರ ವಿದ್ಯಾರ್ಥಿಗಳ ಕೈ ಸೇರುತ್ತಿತ್ತು. ಈ ಅಕೌಂಟ್‌ನಿಂದಲೂ ಹಣವನ್ನು ಲಪಾಟಾಯಿಸಿರುವುದರಿಂದ, ಇಂದಿಗೂ ಹಳೇ ವಿದ್ಯಾರ್ಥಿಗಳು ತಮಗೆ ಬರಬೇಕಾದ ಹಣಕ್ಕಾಗಿ ಕಾಲೇಜಿಗೆ ಅಲೆಯುತ್ತಿದ್ದಾರೆ ಎಂದು ವಿದ್ಯಾರ್ಥಿನಿಯರು ದೂರಿದರು.

'ಆಯುಕ್ತರಿಗೆ ಪತ್ರ ಬರೆದಿದ್ದೇವೆ'

'ವಿದ್ಯಾಸಿರಿ' ವಿದ್ಯಾರ್ಥಿವೇತನದ ಚೆಕ್‌ಗಳು 'ಬೌನ್ಸ್' ಆಗುತ್ತಿವೆ ಎಂದು ಸುಮಾರು 60 ವಿದ್ಯಾರ್ಥಿಗಳಿಂದ ದೂರು ಬಂದಿವೆ. ವಿದ್ಯಾರ್ಥಿವೇತನದ ವಿಭಾಗವನ್ನು ನಿರ್ವಹಿಸುತ್ತಿದ್ದ ಎಸ್‌ಡಿಎ ರವೀಂದ್ರನಾಥ್ ಫೆ.8ರಿಂದ ಕಾಲೇಜಿಗೆ ಅನಧಿಕೃತ ಗೈರು ಹಾಜರಾಗಿದ್ದಾರೆ.

ಕಚೇರಿ ಅಧೀಕ್ಷಕ ಮತ್ತು ಕ್ಯಾಶಿಯರ್‌ಗೂ ಮೆಮೊ ಕೊಟ್ಟು ಮಾಹಿತಿ ಪಡೆಯುತ್ತಿದ್ದೇವೆ' ಎಂದು ಹಾವೇರಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ.ಜಗದೀಶ ಕೋರಿ ತಿಳಿಸಿದರು.

ಈ ಬಗ್ಗೆ ಕ್ರಮ ಕೈಗೊಳ್ಳಲು ಏಪ್ರಿಲ್ 27ರಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಮೇಲಧಿಕಾರಿಗಳ ಆದೇಶ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

ಜ್ಞಾನಭಾಸ್ಕರ ಸ್ವಾಮೀಜಿ ಶಂಕಾಸ್ಪದ ಸಾವು

ಹಿರಿಯೂರು: ನಗರದ ಚಿಟುಗು ಮಲ್ಲೇಶ್ವರ ಮಹಾಸಂಸ್ಥಾನದ ಗುರುಗಳಾದ ಜ್ಞಾನಭಾಸ್ಕರ ಸ್ವಾಮೀಜಿ (75) ಗುರುವಾರ ಬೆಳಿಗ್ಗೆ ಚಿಟುಗು ಮಲ್ಲೇಶ್ವರ ದೇವಸ್ಥಾನದ ಆವರಣದಲ್ಲಿನ ನಿವಾಸದಲ್ಲಿ ಅಸಹಜ ರೀತಿಯಲ್ಲಿ ಮೃತಪಟ್ಟಿದ್ದಾರೆ.

ಬೆಳಿಗ್ಗೆ ಸ್ನಾನಗೃಹದಲ್ಲಿ ಅವರ ಮೃತದೇಹ ಕಂಡುಬಂದಿದೆ. ಸ್ನಾನಕ್ಕೆ ನೀರು ಕಾಯಿಸಿಕೊಳ್ಳುವಾಗ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿರಬಹುದೇ ಅಥವಾ ಸಾವಿಗೆ ಬೇರೆ ಕಾರಣ ಇರಬಹುದೇ ಎಂಬ ಶಂಕೆ ಭಕ್ತರಲ್ಲಿದೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜ್ಞಾನಭಾಸ್ಕರ ಸ್ವಾಮೀಜಿ

ವಿಶ್ವಕರ್ಮ ಸಮಾಜದ ಒಕ್ಕೂಟದಲ್ಲಿನ 63 ಗುರುಗಳ ಪೈಕಿ ಈ ಇವರು ಒಬ್ಬರು. ಮಿಕ್ಕೆಲ್ಲ ಸ್ವಾಮೀಜಿಗಳಿಗೆ ಸಾವಿನ ಮಾಹಿತಿ ನೀಡಲಾಗಿದ್ದು, ಅವರು ಬಂದ ನಂತರ ಅಂತ್ಯಸಂಸ್ಕಾರದ ಬಗ್ಗೆ ನಿರ್ಧರಿಸಲಾಗುವುದು ಎಂದು ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ನಾರಾಯಣಾಚಾರ್ ತಿಳಿಸಿದ್ದಾರೆ.

30 ವರ್ಷಗಳ ಹಿಂದೆ ಜ್ಞಾನಭಾಸ್ಕರ ಸ್ವಾಮೀಜಿ ಸಂಸಾರ ತ್ಯಜಿಸಿ ಸನ್ಯಾಸತ್ವ ಸ್ವೀಕರಿಸಿದ್ದರು. ಅವರಿಗೆ ಪೂರ್ವಾಶ್ರಮದ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ.

ಅಸ್ಸಾಂ ಭೂಕುಸಿತ: ಎಂಟು ಸಾವು

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ನಿರಂತರ ಮಳೆಯಿಂದಾಗಿ ಮತ್ತೆ ಭೂಕುಸಿತ ಸಂಭವಿಸಿದ್ದು, ಪ್ರತ್ಯೇಕ ಘಟನೆಗಳಲ್ಲಿ ಆರು ಮಕ್ಕಳು ಸೇರಿದಂತೆ ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರವಾಹ ಪರಿಸ್ಥಿತಿಯಿಂದ ವಿವಿಧ 24 ಜಿಲ್ಲೆಗಳಲ್ಲಿ 10 ಲಕ್ಷ ಮಂದಿ ಅತಂತ್ರರಾಗಿದ್ದಾರೆ ಎಂದೂ ತಿಳಿಸಿದ್ದಾರೆ. ರಾಜ್ಯದಲ್ಲಿ ಈ ವರ್ಷ ಇದುವರೆಗೆ ಮಳೆ ಅವಘಡಗಳಲ್ಲಿ 44 ಮಂದಿ ಮೃತಪಟ್ಟಿದ್ದಾರೆ.

'ನಾರಾಯಣಗುರು ಪಾಠ ಮರು ಸೇರ್ಪಡೆ ಆಗದಿದ್ದರೆ ಹೋರಾಟ'

ಮಂಗಳೂರು: '10ನೇ ತರಗತಿ ಸಮಾಜ ವಿಜ್ಞಾನ ಪಠ್ಯದಲ್ಲಿ ನಾರಾಯಣ ಗುರು ಪಾಠ ಸೇರಿಸಬೇಕು. ಪಠ್ಯ ಪುಸ್ತಕ ಮುದ್ರಣ ಆಗಿದ್ದರೆ ಮರು ಮುದ್ರಣ ಮಾಡಿ, ಸೇರಿಸಲಿ. ಇಲ್ಲವಾದಲ್ಲಿ ಮೂಲ ಪುಸ್ತಕದ ಜತೆ ಪೂರಕ ಪಠ್ಯವಾಗಿ ಕೆಲವು ಪುಟಗಳನ್ನು ಮುದ್ರಿಸಿ ಮಕ್ಕಳಿಗೆ ನೀಡಬೇಕು' ಎಂದು ನಾರಾಯಣ ಗುರು ವಿಚಾರ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಸತ್ಯಜಿತ್ ಸುರತ್ಕಲ್ ಆಗ್ರಹಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಂದೂ ಸಮಾಜ, ಹಿಂದುತ್ವ ಸಮಾಜದಲ್ಲಿ ಉಳಿಯಲು ಕಾರಣರಾದ ಬ್ರಹ್ಮಶ್ರೀ ನಾರಾಯಣ ಗುರು ಅವರನ್ನು 10ನೇ ತರಗತಿಯ ಕನ್ನಡ ಪಠ್ಯಕ್ಕೆ ಸೀಮಿತಗೊಳಿಸಿದರೆ, ಶೇ 60ಕ್ಕೂ ಹೆಚ್ಚಿರುವ ಇಂಗ್ಲಿಷ್ ಮಾಧ್ಯಮ ಮಕ್ಕಳಿಗೆ ನಾರಾಯಣ ಗುರುಗಳ ತತ್ವ ತಿಳಿಯುವ ಅವಕಾಶವನ್ನು ತಪ್ಪಿಸಿದಂತಾಗುತ್ತದೆ. ಸರ್ಕಾರ ತನ್ನ ನಿಲುವನ್ನು ಬದಲಾಯಿಸದಿದ್ದಲ್ಲಿ, ಗುರುಗಳ ಸಮುದಾಯಕ್ಕೆ ಸೇರಿದ 26 ಪಂಗಡಗಳನ್ನು ಸೇರಿಸಿಕೊಂಡು ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಸಿದರು.

ಕುದ್ರೋಳಿ ಗೋಕರ್ಣನಾಥ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್, ಗರೋಡಿ ಕ್ಷೇತ್ರದ ಆಡಳಿತ ಮಂಡಳಿ ಅಧ್ಯಕ್ಷ ಚಿತ್ತರಂಜನ್ ಗರೋಡಿ, ಪುತ್ತೂರು ಬಿಲ್ಲವ ಸಂಘದ ಅಧ್ಯಕ್ಷ ಸತೀಶ್, ಮುಖಂಡರಾದ ಶೈಲೇಂದ್ರ, ಮಹಾಬಲ ಪೂಜಾರಿ, ದಿನೇಶ್ ಅಂಚನ್, ರಾಜೇಂದ್ರ ಚಿಲಿಂಬಿ ಇದ್ದರು.

'ಕೊಳೆಗೇರಿ ಜನರ ಬಗ್ಗೆ ಅಸಡ್ಡೆ ಏಕೆ?'

ಬೆಂಗಳೂರು: ರಾಯಚೂರಿನ ಕೊಳೆಗೇರಿಯಲ್ಲಿ ಕಲುಷಿತ ನೀರು ಕುಡಿದು ಆರು ಜನರು ಮೃತಪಟ್ಟಿದ್ದರೂ, ಸರ್ಕಾರ ಅತ್ತ ಗಮನಹರಿಸಿಲ್ಲ. ಬಿಜೆಪಿಗೆ ಕೊಳೆಗೇರಿ ಜನರ ಬಗ್ಗೆ ಏಕೆ ಇಷ್ಟು ಅಸಡ್ಡೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

'ಕಲುಷಿತ ನೀರು– ಪತ್ತೆಯಾಗದ ಮೂಲ' ಶೀರ್ಷಿಕೆಯಡಿ 'ಪ್ರಜಾವಾಣಿ' ಗುರುವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ವರದಿ ಟ್ಯಾಗ್ ಮಾಡಿ ಟ್ವೀಟ್ ಮಾಡಿರುವ ಅವರು, 'ಕಲುಷಿತ ನೀರಿನ ಮೂಲ ಪತ್ತೆ ಕೆಲಸ ನಡೆದಿಲ್ಲ. ಸಿ.ಎಂ ಅವರು ಮೃತರ ಕುಟುಂಬಗಳಿಗೆ ಪರಿಹಾರ ಘೋಷಿಸಿ ಮೌನ ವಹಿಸಿದ್ದಾರೆ. ದ್ವೇಷದ ರಾಜಕಾರಣದಲ್ಲಿ ಮುಳುಗಿರುವ ಬಿಜೆಪಿಗೆ ಜನರ ಕಷ್ಟದ ಅರಿವಿಲ್ಲ' ಎಂದು ಟೀಕಿಸಿದ್ದಾರೆ.

'ಮರು ಆದೇಶವಿಲ್ಲದೇ ಕರ್ತವ್ಯಕ್ಕೆ ಬರುವಂತಿಲ್ಲ'

ಬೆಂಗಳೂರು: ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿರುವ ತಹಶೀಲ್ದಾರ್‌ಗಳು ತಮ್ಮ ವರ್ಗಾವಣೆ ಆದೇಶಕ್ಕೆ ಕರ್ನಾಟಕ ಆಡಳಿತ ನ್ಯಾಯಮಂಡಳಿ ಅಥವಾ ನ್ಯಾಯಾಲಯಗಳಿಂದ ತಡೆಯಾಜ್ಞೆ ಪಡೆದರೂ ಸರ್ಕಾರದಿಂದ ಮರು ಆದೇಶವಿಲ್ಲದೇ ನೇರವಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತಿಲ್ಲ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಸೂಚನೆ ನೀಡಿದ್ದಾರೆ.

ಪ್ರಾದೇಶಿಕ ಆಯುಕ್ತರು ಮತ್ತು ಎಲ್ಲ ಜಿಲ್ಲಾಧಿಕಾರಿಗಳಿಗೆ ಅವರು ಸೋಮವಾರ ಅಧಿಕೃತ ಸೂಚನಾ ಪತ್ರ ಹೊರಡಿಸಿದ್ದಾರೆ.

'ಕೇಳದೆ ನಿಮಗೀಗ' ಕೃತಿಗೆ ಮುಸ್ಲಿಮ್ ಸಾಹಿತ್ಯ ಪ್ರಶಸ್ತಿ

ಮಂಗಳೂರು: ಕನ್ನಡದಲ್ಲಿ ಪ್ರಕಟಿತ ಮುಸ್ಲಿಮ್ ಬರಹಗಾರರ ಅತ್ಯುತ್ತಮ ಕೃತಿಗೆ ಕರ್ನಾಟಕ ಮುಸ್ಲಿಮ್ ಲೇಖಕರ ಸಂಘ ಕೊಡಮಾಡುವ 2020ನೇ ಸಾಲಿನ ರಾಜ್ಯ ಮಟ್ಟದ 'ಮುಸ್ಲಿಮ್ ಸಾಹಿತ್ಯ ಪ್ರಶಸ್ತಿ'ಗೆ ಸಂತೆಬೆನ್ನೂರು ಫೈಜ್ನಟ್ರಾಜ್ (ಸೈಯದ್ ಫೈಜುಲ್ಲಾ) ಅವರ 'ಕೇಳದೆ ನಿಮಗೀಗ' ಕವನ ಸಂಕಲನ ಆಯ್ಕೆಯಾಗಿದೆ.

ಸಂತೆಬೆನ್ನೂರು ಫೈಜ್ನಟ್ರಾಜ್

ದಿವಂಗತ ಯು.ಟಿ. ಫರೀದ್ ಸ್ಮರಣಾರ್ಥ ನೀಡಲಾಗುವ ಈ ಪ್ರಶಸ್ತಿಯು ₹ 10,000 ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಜುಲೈ 24ರಂದು ದಾವಣಗೆರೆಯಲ್ಲಿ ನಡೆಯಲಿರುವ 'ಈದ್ ಕಿ ಖುಷಿ' ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮುಸ್ಲಿಮ್ ಲೇಖಕರ ಸಂಘದ ಅಧ್ಯಕ್ಷ ಉಮರ್ ಯು.ಎಚ್. ತಿಳಿಸಿದ್ದಾರೆ.

ಪ್ರಕಟಣೆ



ಆರೋಪಿತನಾದ **ಶ್ರೀ ಅನುಪ್ ಪೈ ತಂದೆ ದಿನಕರ ಪೈ** ಶಾಖಾ ವ್ಯವಸ್ಥಾಪಕರು ಭಾರತೀಯ ಸ್ಟೇಟ್ ಬ್ಯಾಂಕ್ ಭಟ್ಕಳ ಹಾಲಿ ಚಂದ್ರ ನಾಯ್ಕ ಕಂಪೌಂಡ್ ಜೀವನ ನಿಲಯ ರೇಲ್ವೆ ಸ್ಟೇಶನ್ ಹತ್ತಿರ ಭಟ್ಕಳ ಖಾಯಂ ವಾಸ್ತವ್ಯ ಶ್ರೀ ಪ್ರಸಾದ ನಂ. ಇ–67/5–1 ಬೋಳಪು ಗುಡ್ಡೆ, ಕಾವೂರು ಮಂಗಳೂರು–575015 ಈತನ ಮೇಲೆ ಭಟ್ಕಳ ಶಹರ ಪೊಲೀಸ್ ಠಾಣಾ ಗುನ್ನಾ ನಂ. 55/2022 ಕಲಂ 406, 420 ಐಸಿಪಿ ನೇದರಂತೆ ದಿನಾಂಕ 23–04–2022 ರಂದು ಪ್ರಕರಣ ದಾಖಲಾಗಿ ತನಿಖೆಯಲ್ಲಿರುತ್ತದೆ. ಸದ್ರಿ ಆರೋಪಿತನು ಪ್ರಕರಣ ದಾಖಲಾಗಿದ್ದರಿಂದ ಇಲ್ಲಿಯವರೆಗೆ ದಸ್ತಗಿರಿಗೆ ಸಿಗದೇ ತಲೆ ಮರೆಯಿಸಿಕೊಂಡಿರುತ್ತಾನೆ.

ಹೆಸರು : ಶ್ರೀ ಅನುಪ್ ಪೈ ತಂದೆ ದಿನಕರ ಪೈ ವಯಸ್ಸು: 35 ವರ್ಷ
ಲಿಂಗ: ಗಂಡು, ಎತ್ತರ : 162 ಸೇ.ಮೀ.
ಮೈಬಣ್ಣ: ಗೋಧಿ ಮೈಬಣ್ಣ, ಮುಖ: ಕೋಲು ಮುಖ, ಮೈಕಟ್ಟು : ಸಾಧಾರಣ,
ಮಾತನಾಡುವ ಭಾಷೆ: ಕನ್ನಡ, ಇಂಗ್ಲೀಷ, ಹಿಂದಿ.

ಈ ಮೇಲ್ಕಂಡ ವ್ಯಕ್ತಿಯ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಭಟ್ಕಳ ಶಹರ ಪೊಲೀಸ್ ಠಾಣೆಗೆ ತಿಳಿಸಲು ಕೋರಿದೆ.

ಭಟ್ಕಳ ಶಹರ ಪೊಲೀಸ್ ಠಾಣೆ:
08385–226333, 9480805269

Sd/- Police Inspector
Bhatkal Town Police Station (U.K)

ನಗರದ ಪೀಣ್ಯ 1ನೇ ಹಂತದಲ್ಲಿ ಗುರುವಾರ ರಾತ್ರಿ ಸುರಿಯುತ್ತಿದ್ದ ಮಳೆಯಲ್ಲಿಯೇ ಮಹಿಳೆಯೊಬ್ಬರು ಸಾಗಿದರು – ಪ್ರಜಾವಾಣಿ ಚಿತ್ರ

ಗುಡುಗು – ಸಿಡಿಲು ಸಹಿತ ಮಳೆ

ಬೆಂಗಳೂರು: ನಗರದಲ್ಲಿ ಬಿಡುವು ಕೊಡುತ್ತಲೇ ಮಳೆ ಆಗುತ್ತಿದ್ದು, ಗುರುವಾರ ರಾತ್ರಿ ಗುಡುಗು-ಸಿಡಿಲು ಸಹಿತ ಮಳೆ ಸುರಿಯಿತು.

ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಹಲವು ಪ್ರದೇಶಗಳಲ್ಲಿ ಬಿಸಿಲಿನ ತಾಪ ಇತ್ತು. ಮಧ್ಯಾಹ್ನದ ನಂತರ ಮೋಡ ಕವಿದ ವಾತಾವರಣ ಕಂಡುಬಂತು. ಸಂಜೆ ತುಂತುರು ಮಳೆ ಆರಂಭವಾಗಿ, ನಂತರ ಜೋರಾಯಿತು.

ರಾಜಾಜಿನಗರ, ವಿಜಯನಗರ, ದೀಪಾಂಜಲಿನಗರ, ಚಂದ್ರಾಲೇಔಟ್, ನಾಗರಬಾವಿ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಶೇಷಾದ್ರಿಪುರ, ಆರ್.ಟಿ.ನಗರ, ಗಾಂಧಿ ನಗರ, ಮೆಜೆಸ್ಟಿಕ್, ಶಾಂತಿನಗರ, ಲಾಲ್‌ಬಾಗ್, ವಿಲ್ಸನ್ ಗಾರ್ಡನ್, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್ ಹಾಗೂ ಸುತ್ತಮುತ್ತ ಮಳೆ ಇತ್ತು. ಶಿವಾಜಿನಗರ, ಅಶೋಕನಗರ, ಎಂ.ಜಿ. ರಸ್ತೆ, ಹಲಸೂರು, ಇಂದಿರಾ ನಗರ, ದೊಮ್ಮಲೂರು, ಹೆಣ್ಣೂರು, ಬಾಣಸವಾಡಿ ಹಾಗೂ ಇತರೆ ಪ್ರದೇಶಗಳಲ್ಲೂ ಮಳೆ ಆಯಿತು.

'ಮಳೆಗಾಲ ಆರಂಭವಾಗಿದ್ದು, ಬಿಡುವು ಕೊಡುತ್ತಲೇ ನಗರದಲ್ಲಿ ಉತ್ತಮ ಮಳೆ ಆಗುತ್ತಿದೆ. ರಸ್ತೆಯಲ್ಲಿ ನೀರು ನಿಂತ ದೂರುಗಳು ಹೊರತುಪಡಿಸಿ, ಬೇರೆ ಯಾವ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ವಿಶ್ವ ಮಾನವ ಕುವೆಂಪುಗೆ ಅವಮಾನ; ಖಂಡನೆ

ಪರಿಷ್ಕೃತ ಪಠ್ಯ ಹಿಂಪಡೆಯಲು ಆಗ್ರಹಿಸಿ ನಾಳೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಕವಿ ಕುವೆಂಪು ಅವರಿಗೆ ಅವಮಾನ ಎಸಗಿರುವುದನ್ನು ಖಂಡಿಸಿ ಹಾಗೂ ರೋಹಿತ್ ಚಕ್ರತೀರ್ಥ ಸಮಿತಿಯ ಪರಿಷ್ಕೃತ ಪಠ್ಯಪುಸ್ತಕಗಳನ್ನು ಹಿಂಪಡೆಯಲು ಆಗ್ರಹಿಸಿ, 'ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ'ಯು ಜೂನ್ 18ರಂದು ರಾಜಧಾನಿಯಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ.

ನಗರದ ರೈಲು ನಿಲ್ದಾಣ ಬಳಿಯಿಂದ ಬೆಳಿಗ್ಗೆ 10ಕ್ಕೆ ರ‍್ಯಾಲಿ ಆರಂಭವಾಗಲಿದೆ. ಬೆಳಿಗ್ಗೆ 11ರ ವೇಳೆಗೆ ಫ್ರೀಡಂಪಾರ್ಕ್ ತಲುಪಲಿದೆ. ಬಳಿಕ ಪ್ರತಿಭಟನಾ ಸಭೆ ನಡೆಯಲಿದೆ. ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯ ಕವಿಶೈಲದಿಂದ ಹೊರಟಿರುವ ಜ್ಯೋತಿಯನ್ನು ಫ್ರೀಡಂಪಾರ್ಕ್‌ಗೆ ತರಲಾಗುವುದು ಎಂದು ಸಮಿತಿ ಅಧ್ಯಕ್ಷ ಜಿ.ಬಿ.ಪಾಟೀಲ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.

'ಪ್ರತಿ ಪಾಠವನ್ನೂ ತಿದ್ದುಪಡಿಗೆ ಒಳಪಡಿಸಿ ಸುಳ್ಳು ಮಾಹಿತಿ ನೀಡಲಾಗಿದೆ. ಕುವೆಂಪು ವಿಶ್ವದ ಆಸ್ತಿ. ಅವರಿಗೆ ಅವಮಾನ ಎಸಗಲಾಗಿದೆ. ಮಹನೀಯರ ಇತಿಹಾಸ ತಿರುಚುವುದು ಸಹ ಅಪರಾಧ' ಎಂದು ಪಾಟೀಲ ಹೇಳಿದರು.

'ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ವಿವಿಧ ಮಠಾಧೀಶರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವರು. ನಮ್ಮ ಹೋರಾಟಕ್ಕೆ ಜೆಡಿಎಸ್, ಕಾಂಗ್ರೆಸ್, ಎಎಪಿ, ಕನ್ನಡ ಸಂಘಟನೆಗಳು ಬೆಂಬಲ ಸೂಚಿಸಿವೆ. ಬಿಜೆಪಿಯಲ್ಲಿರುವ ಪ್ರಜ್ಞಾವಂತರು ರ‍್ಯಾಲಿಯಲ್ಲಿ ನಮ್ಮೊಂದಿಗೆ ಹೆಜ್ಜೆ ಹಾಕಲಿದ್ದಾರೆ' ಎಂದರು.

ಸಮಿತಿ ಪ್ರಧಾನ ಕಾರ್ಯದರ್ಶಿ ಆಡಿಟರ್ ನಾಗರಾಜ್, 'ಬುದ್ಧ, ಮಹಾವೀರ, ಬಸವಣ್ಣ, ಕುವೆಂಪು, ವಾಲ್ಮೀಕಿ, ಪೆರಿಯಾರ್, ಸಂಗೊಳ್ಳಿ ರಾಯಣ್ಣ, ಕನಕದಾಸರಿಗೆ ಅವಮಾನ ಎಸಗಲಾಗಿದೆ. ಚಕ್ರತೀರ್ಥ ಸಮಿತಿಯ ಪರಿಷ್ಕೃತ ಪಠ್ಯಪುಸ್ತಕಗಳನ್ನು ಹಿಂಪಡೆಯಬೇಕು. ಹಿಂದಿನ ಪಠ್ಯಗಳನ್ನೇ ವಿತರಿಸಬೇಕು. ನಾಡಗೀತೆ, ನಾಡಧ್ವಜವನ್ನು ವಿರೂಪಗೊಳಿಸಿ ಅವಮಾನಿಸಿರುವ ಕಿಡಿಗೇಡಿಗಳನ್ನು ಬಂಧಿಸಬೇಕು. ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ರಾಜೀನಾಮೆ ನೀಡಬೇಕು. ಅನಗತ್ಯವಾಗಿ ಪಠ್ಯಪರಿಷ್ಕರಣೆ ಮಾಡಿದ್ದು, ಅದರ ನಷ್ಟವನ್ನು ಭರಿಸಬೇಕು' ಎಂದು ಆಗ್ರಹಿಸಿದರು.

'ಪಠ್ಯಪುಸ್ತಕದಲ್ಲಿ ನೆಲ, ಜಲ ಹಾಗೂ ಮಹನೀಯರ ಚಿಂತನೆಯ ಬರಹಗಳು ಇರಬೇಕಿತ್ತು. ಆದರೆ, ಪಠ್ಯವನ್ನು ಪಕ್ಷದ ಪ್ರಣಾಳಿಕೆ ಮಾಡಲಾಗಿದೆ. ಆರ್‌ಎಸ್‌ಎಸ್ ಸಿದ್ಧಾಂತ ಹೇರುವ ಪ್ರಯತ್ನ ನಡೆಸಲಾಗಿದೆ' ಎಂದು ಕಾರ್ಯಾಧ್ಯಕ್ಷ ಮಾವಳ್ಳಿ ಶಂಕರ್ ದೂರಿದರು.

ಸಾಹಿತಿ ಎಲ್.ಎನ್. ಮುಕುಂದ ರಾಜ್ ಮಾತನಾಡಿ, 'ಚಕ್ರತೀರ್ಥ ವಿರುದ್ಧ ರಾಷ್ಟ್ರದ್ರೋಹ ಪ್ರಕರಣ ದಾಖಲಿಸಿ ಬಂಧಿಸಬೇಕು. ಈ ಹೋರಾಟವು ಜನಾಂದೋಲನವಾಗಿ ರೂಪುಗೊಂಡಿದೆ. ಜೂನ್ 18ರ ಬಳಿಕ ಸಚಿವ ನಾಗೇಶ್ ಮನೆಯ ಎದುರೂ ಪ್ರತಿಭಟನೆಗೆ ಕೂರುತ್ತೇವೆ' ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘಟನಾ ಕಾರ್ಯದರ್ಶಿ ಪ್ರಭಾ ಎನ್. ಬೆಳವಂಗಲ, ಕುಮಾರ್ ಹಾಜರಿದ್ದರು.

ಪ್ರತ್ಯೇಕ ಅಪಘಾತ: ಮೂವರ ಸಾವು

ಬೆಂಗಳೂರು: ನಗರದ ಮೂರು ಕಡೆ ಬುಧವಾರ ರಾತ್ರಿ ಅಪಘಾತಗಳು ನಡೆದಿದ್ದು, ಖಾಸಗಿ ಕಂಪನಿ ಉದ್ಯೋಗಿ ಸೇರಿ ಮೂವರು ಮೃತಪಟ್ಟಿದ್ದಾರೆ.

ಸೋಮಶೇಖರ್ (24), ಸಂದೇಗಪ್ಪ (69) ಹಾಗೂ ದಾಸಪ್ಪ (60) ಮೃತರು. ಅಪಘಾತ ಸಂಬಂಧ ಕಾಮಾಕ್ಷಿಪಾಳ್ಯ, ಹುಳಿಮಾವು ಹಾಗೂ ಚಿಕ್ಕಜಾಲ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

'ನಗರದ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ನಾಗಸಂದ್ರದ ನಿವಾಸಿ ಸೋಮಶೇಖರ್, ಬುಧವಾರ ವಾರದ ರಜೆಯಲ್ಲಿದ್ದರು. ಸ್ನೇಹಿತನ ಬೈಕ್‌ನಲ್ಲಿ ರಾತ್ರಿ ನೈಸ್ ರಸ್ತೆಯ ಉಲ್ಲಾಳ ಸೇತುವೆ ಬಳಿ ಹೊರಟಿದ್ದಾಗ, ಬೈಕ್ ಉರುಳಿಬಿದ್ದು ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆಟೊ ಗುದ್ದಿ ಸಾವು: 'ಕಾಳೇನ ಅಗ್ರಹಾರ ನಿವಾಸಿ ಸಂದೇಗಪ್ಪ, ಬನ್ನೇರುಘಟ್ಟ ರಸ್ತೆಯಲ್ಲಿದ್ದ ಸಂಬಂಧಿಕರ ಮನೆಗೆ ಬಂದಿದ್ದರು. ರಾತ್ರಿ ವಾಪಸು ಹೋಗುವಾಗ ಆಟೊ ಗುದ್ದಿದ್ದು, ಮೃತಪಟ್ಟಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಆರತಕ್ಷತೆಗೆ ಬಂದಿದ್ದ ವೃದ್ಧ ಸಾವು: 'ಕೋಲಾರದ ದಾಸಪ್ಪ ಸಂಬಂಧಿಕರ ಮದುವೆಯೊಂದರ ಆರತಕ್ಷತೆಗೆಂದು ನಗರಕ್ಕೆ ಬಂದಿದ್ದರು. ಊರಿಗೆ ಹೋಗಲು ಬಳ್ಳಾರಿ ರಸ್ತೆಯ ಬಸ್ ತಂಗು ದಾಣಕ್ಕೆ ಹೊರಟಿದ್ದಾಗ ವಾಹನ ಡಿಕ್ಕಿ ಹೊಡೆದು ಮೃತಪಟ್ಟರು' ಎಂದೂ ಮೂಲಗಳು ಹೇಳಿವೆ.

ತ್ಯಾಜ್ಯ ಆಯುವವರಿಗೆ 'ಹ್ಯಾಪಿ ನಂಬರ್' ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಿತ್ಯವೂ ಸಂಗ್ರಹವಾಗುವ ಮರುಬಳಕೆ ತ್ಯಾಜ್ಯ ಆಯ್ದು ವಿಲೇವಾರಿ ಮಾಡುವ ಕಾರ್ಮಿಕರ ಬದುಕು ಹಾಗೂ ಅವರ ಕೊಡುಗೆ ತಿಳಿಸುವ 'ಹ್ಯಾಪಿ ನಂಬರ್' ಹಾಡನ್ನು ಗುರುವಾರ ಬಿಡುಗಡೆ ಮಾಡಲಾಯಿತು.

ನಗರದಲ್ಲಿ 22,500ಕ್ಕೂ ಹೆಚ್ಚು ಕಾರ್ಮಿಕರು ಮರುಬಳಕೆ ಮಾಡಬಹುದಾದ ಪ್ಲಾಸ್ಟಿಕ್ ಹಾಗೂ ಇತರೆ ತ್ಯಾಜ್ಯ ಸಂಗ್ರಹದಲ್ಲಿ ನಿರತರಾಗಿದ್ದಾರೆ. ಎಲ್ಲೆಂದರಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಆಯ್ದು ಮರುಬಳಕೆ ಕೇಂದ್ರಗಳಿಗೆ ಸಾಗಿಸುತ್ತಿದ್ದಾರೆ. ಇಂಥ ಸಂಗ್ರಹಕಾರರ ಮಹತ್ವ ತಿಳಿಸುವ ಹಾಡಿಗೆ ಗಾಯಕ ವಾಸು ದೀಕ್ಷಿತ್, ಸಂಗೀತ ನೀಡಿ ಧ್ವನಿಯಾಗಿದ್ದಾರೆ.

ನಗರದಲ್ಲಿ ಗುರುವಾರ ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ 'ಹ್ಯಾಪಿ ನಂಬರ್' ಹಾಡನ್ನು ಬಿಡುಗಡೆ ಮಾಡಲಾಯಿತು. 'ಬಿಬಿಸಿ ಮಿಡಿಯಾ ಆಕ್ಷನ್' ಸಂಘಟನೆ ಸಹಯೋಗದಲ್ಲಿ ಹಾಡು ನಿರ್ಮಿಸಲಾಗಿದೆ.

ತ್ಯಾಜ್ಯ ಆಯುವವರ ಕುರಿತು ಸಿದ್ಧಪಡಿಸಿರುವ 'ಹ್ಯಾಪಿ ನಂಬರ್' ಹಾಡನ್ನು ಗಾಯಕ ವಾಸು ದೀಕ್ಷಿತ್ ಹಾಗೂ ತಂಡದವರು ಹಾಡಿದರು

ಸಂಘಟನೆ ಕಾರ್ಯನಿರ್ವಾಹಕ ನಿರ್ದೇಶಕ (ಕ್ರಿಯೆಟಿವ್) ಸೋಮಾ ಕಟಿಯಾರ್, 'ಬೆಂಗಳೂರಿನಲ್ಲಿ ಸಂಗ್ರಹವಾಗಿದ್ದ 38.32 ಕೋಟಿ ಕಿಲೋಗ್ರಾಂ ಮರುಬಳಕೆ ತ್ಯಾಜ್ಯವನ್ನು ಕಾರ್ಮಿಕರು ಭೂಮಿಗೆ ಸೇರದಂತೆ ನೋಡಿಕೊಂಡು ವಿಲೇವಾರಿ ಮಾಡಿದ್ದಾರೆ. ಸದ್ದಿಲ್ಲದೇ ಕೆಲಸ ಮಾಡಿರುವ ಇವರಿಗೆ ಹಾಡಿನ ಮೂಲಕ ಗೌರವ ಸಲ್ಲಿಸಲಾಗುತ್ತಿದೆ. ಜೊತೆಗೆ, ತ್ಯಾಜ್ಯವನ್ನು ಮರುಬಳಕೆ ಮಾಡುವ ಸಂಬಂಧ ಹೊಸ ಅಭಿಯಾನ ಆರಂಭಿಸುತ್ತಿದ್ದೇವೆ' ಎಂದರು.

ಪರಿಸರ ಹೋರಾಟಗಾರ್ತಿ ವಾಣಿ ಮೂರ್ತಿ, 'ಪ್ಲಾಸ್ಟಿಕ್ ತ್ಯಾಜ್ಯವನ್ನು ಮರುಬಳಕೆ ಮಾಡುವಲ್ಲಿ ಸಂಗ್ರಹಕಾರರ ಪಾತ್ರ ಮಹತ್ವದ್ದಾಗಿದೆ. ಮರುಬಳಕೆ ವಸ್ತುಗಳನ್ನು ತ್ಯಾಜ್ಯವೆಂದು ಬಿಸಾಡುವ ಮೊದಲು ಅವುಗಳ ಮರುಬಳಕೆಗೆ ಒತ್ತು ನೀಡಲು ನಾವೆಲ್ಲರೂ ಗಮನ ಹರಿಸಬೇಕು. ಜೊತೆಗೆ, ತ್ಯಾಜ್ಯ ಸಂಗ್ರಹ ಮಾಡುವವರನ್ನು ಗೌರವಿಸಬೇಕು' ಎಂದು ಹೇಳಿದರು.

ನಗರದ ಸ್ಯಾಂಕಿ ರಸ್ತೆಯಲ್ಲಿ ಗುರುವಾರ ಸಂಚಾರ ದಟ್ಟಣೆ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು – ಪ್ರಜಾವಾಣಿ ಚಿತ್ರ

ಪ್ರತಿಭಟನೆಯಿಂದ ವಾಹನ ದಟ್ಟಣೆ

ಬೆಂಗಳೂರು: ನಗರದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಿಂದಾಗಿ ಕೇಂದ್ರ ವಾಣಿಜ್ಯ ಪ್ರದೇಶ (ಸಿಬಿಡಿ) ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ಗುರುವಾರ ವಿಪರೀತ ಸಂಚಾರ ದಟ್ಟಣೆ ಉಂಟಾಯಿತು.

ಕಾಂಗ್ರೆಸ್ ಮುಖ್ಯ ಕಚೇರಿ ಇರುವ ಕ್ವೀನ್ಸ್ ರಸ್ತೆಯಿಂದ ರಾಜಭವನವರೆಗಿನ ರಸ್ತೆಯಲ್ಲಿ ಸಾರ್ವಜನಿಕರ ವಾಹನಗಳ ಸಂಚಾರ ನಿರ್ಬಂಧಿಸಿ ಪರ್ಯಾಯ ಮಾರ್ಗ ಸೂಚಿಸಲಾಗಿತ್ತು. ಅದರ ಬಗ್ಗೆ ಮಾಹಿತಿ ತಿಳಿಯದ ಸಾರ್ವಜನಿಕರು ಪ್ರತಿಭಟನೆ ನಡೆಯುವ ರಸ್ತೆಯಲ್ಲಿ ಬಂದು ದಟ್ಟಣೆಯಲ್ಲಿ ಸಿಲುಕಿದರು.

ಕ್ವೀನ್ಸ್ ರಸ್ತೆ, ರಾಜಭವನ ರಸ್ತೆ, ಅಂಬೇಡ್ಕರ್ ವೀದಿ, ಇನ್ಫೆಂಟ್ರಿ ರಸ್ತೆ, ಕಬ್ಬನ್ ರಸ್ತೆ ಹಾಗೂ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬಸವೇಶ್ವರ ವೃತ್ತ, ಅರಮನೆ ರಸ್ತೆ, ಬಳ್ಳಾರಿ ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಕೆ.ಜಿ. ರಸ್ತೆ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ವಾಹನಗಳು ನಿಧಾನವಾಗಿ ಸಂಚರಿಸಿದವು. ಪ್ರತಿಭಟನೆ ಮುಗಿದ ಬಳಿಕವೇ ಸಂಚಾರ ವ್ಯವಸ್ಥೆ ಯಥಾಸ್ಥಿತಿಗೆ ಮರಳಿತು.

ಮೆಟ್ರೊ: 3ನೇ ಹಂತಕ್ಕೆ ತಯಾರಿ

ಬೆಂಗಳೂರು: ಮೆಟ್ರೊ ರೈಲು ಮೂರನೇ ಹಂತದ ಯೋಜನೆಗೆ ನೀಲನಕ್ಷೆ ಸಿದ್ಧಪಡಿಸುವ ಕಾರ್ಯವನ್ನು ಬೆಂಗಳೂರು ಮೆಟ್ರೊ ರೈಲು ನಿಗಮ ಚುರುಕುಗೊಳಿಸಿದೆ. ಹೆಬ್ಬಾಳದಿಂದ ಗೊರಗುಂಟೆಪಾಳ್ಯ, ಮೈಸೂರು ರಸ್ತೆ ಮಾರ್ಗದಲ್ಲಿ ಜೆ.ಪಿ.ನಗರಕ್ಕೆ 32 ಕಿಲೋ ಮೀಟರ್(22 ನಿಲ್ದಾಣ), ಹೊಸಹಳ್ಳಿಯಿಂದ ಕಡಬಗೆರೆ ತನಕ 13 ಕಿಲೋ ಮೀಟರ್(9 ನಿಲ್ದಾಣ) ಮೆಟ್ರೊ ರೈಲು ಮಾರ್ಗ ನಿರ್ಮಾಣಗೊಳ್ಳಲಿದೆ. 2024 ಅಥವಾ 2025ರಿಂದ ಈ ಮೂರನೇ ಹಂತದ ಕಾಮಗಾರಿ ಆರಂಭಗೊಳಿಸಿ, 2028ರ ವೇಳೆಗೆ ಸಾರ್ವಜನಿಕ ಸೇವೆಗೆ ಮುಕ್ತಗೊಳಿಸುವ ಗುರಿ ಹೊಂದಲಾಗಿದೆ.

ಒಎಲ್‌ಎಕ್ಸ್ ಮಂಜ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಎಲ್‌ಎಕ್ಸ್ ಜಾಲತಾಣದ ಮೂಲಕ ಜನರನ್ನು ವಂಚಿಸುತ್ತಿದ್ದ ಆರೋಪದಡಿ ಎನ್.ಮಂಜುನಾಥ್ ಅಲಿಯಾಸ್ ಒಎಲ್‌ಎಕ್ಸ್ ಮಂಜನನ್ನು (30) ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಒಎಲ್‌ಎಕ್ಸ್ ಮಂಜ

'ರಾಮನಗರ ಜಿಲ್ಲೆ ಕನಕಪುರದ ಕಡವೆಕೆರೆದೊಡ್ಡಿಯ ಮಂಜ ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಈತನಿಂದ 3 ಕಾರು, ದ್ವಿಚಕ್ರ ವಾಹನ, 5 ಮೊಬೈಲ್ ಫೋನ್, ನೋಂದಣಿ ಸಂಖ್ಯೆಯ ನಕಲಿ ಫಲಕಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಒಎಲ್‌ಎಕ್ಸ್ ಜಾಲತಾಣದಲ್ಲಿ ನಕಲಿ ಹೆಸರಿನಲ್ಲಿ ಖಾತೆ ತೆರೆದು ಕಾರು ಹಾಗೂ ಬೈಕ್ ಮಾರಾಟಕ್ಕೆ ಇರಿಸಿ ಸಾರ್ವಜನಿಕರ ವಿವರ ಪಡೆಯುತ್ತಿದ್ದ. ಬಳಿಕ ಕರೆ ಮಾಡಿ, ತಾನೊಬ್ಬ ಡೀಲರ್ ಎಂದು ಪರಿಚಯಿಸಿಕೊಂಡು ವಾಹನ ಖರೀದಿಗೆ ಮಾತುಕತೆ ನಡೆಸುತ್ತಿದ್ದ.'

'ವಾಹನ ಮಾಲೀಕರನ್ನು ಭೇಟಿಯಾಗುತ್ತಿದ್ದ ಆರೋಪಿ, ದಾಖಲೆಗಳನ್ನು ಪಡೆಯುತ್ತಿದ್ದ. ಮುಂಗಡ ಹಣ ನೀಡಿ, ಜಾಲತಾಣದಲ್ಲಿದ್ದ ಜಾಹೀರಾತು ತೆಗೆಸುತ್ತಿದ್ದ. ನಂತರ, ಅದೇ ವಾಹನದ ಚಿತ್ರ ಹಾಗೂ ದಾಖಲೆಗಳನ್ನು ತನ್ನ ಖಾತೆಯಲ್ಲಿ ಪ್ರಕಟಿಸುತ್ತಿದ್ದ. ಅದನ್ನು ನೋಡಿ ಸಂಪರ್ಕಿಸುತ್ತಿದ್ದ ಸಾರ್ವಜನಿಕರಿಂದ ಹಣ ಪಡೆದು ಪರಾರಿಯಾಗುತ್ತಿದ್ದ' ಎಂದು ತಿಳಿಸಿದರು.

ಟೆಸ್ಟ್ ಡ್ರೈವ್ ಹೆಸರಿನಲ್ಲಿ ಪರಾರಿ: 'ವಾಹನ ಖರೀದಿಸುವುದಾಗಿ ಹೇಳಿ ಮಾಲೀಕರನ್ನು ನಂಬಿಸುತ್ತಿದ್ದ ಆರೋಪಿ, ಟೆಸ್ಟ್ ಡ್ರೈವ್ ಹೆಸರಿನಲ್ಲಿ ವಾಹನ ಪಡೆದು ಪರಾರಿಯಾಗುತ್ತಿದ್ದ' ಎಂದು ಪೊಲೀಸರು ಹೇಳಿದರು. 'ವಂಚನೆಯಿಂದ ಬಂದಿದ್ದ ಹಣದಲ್ಲಿ ಆರೋಪಿ ಕಾರು ಖರೀದಿಸಿದ್ದ. ಅವುಗಳ ಮೂಲಕವೂ ಜನರನ್ನು ವಂಚಿಸಿದ್ದ ಮಾಹಿತಿ ಲಭ್ಯವಾಗಿದೆ' ಎಂದರು.

ಸುದ್ದಿ 2 ನಿಮಿಷ

ಇಸ್ಕಾನ್: ಸರ್ಕಾರದ ನಿಲುವು ಕೇಳಿದ ಹೈಕೋರ್ಟ್

ಬೆಂಗಳೂರು: 'ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರ ಗ್ರಾಮದಲ್ಲಿ ಇಸ್ಕಾನ್ ಸಂಸ್ಥೆ ಒತ್ತುವರಿ ಮಾಡಿದೆ ಎನ್ನಲಾದ 33.17 ಎಕರೆ ಸರ್ಕಾರಿ ಜಮೀನನ್ನು ತೆರವುಗೊಳಿಸಲು ಆದೇಶಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ನಿಮ್ಮ ನಿಲುವು ತಿಳಿಸಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಮಹದೇವಪುರ ಗ್ರಾಮದ ನಿವಾಸಿಗಳಾದ ನಾಗೇಂದ್ರ ಮತ್ತು ಎಂ.ಎಸ್. ಶಿವಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರಕರಣವೇನು?: 'ಇಸ್ಕಾನ್ ಸಂಸ್ಥೆ ಒತ್ತುವರಿ ಮಾಡಿರುವ ಜಮೀನು ಗೋಮಾಳ. ಆದ್ದರಿಂದ, ಒತ್ತುವರಿಯಾಗಿರುವ 33 ಎಕರೆ ಜಮೀನು ವಶಕ್ಕೆ ಪಡೆಯುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ಇಸ್ಕಾನ್ ಸಂಸ್ಥೆಯು ಮಹದೇವಪುರ ಗ್ರಾಮದ ಸರ್ವೆ 411ರಲ್ಲಿ ಒಟ್ಟು 77 ಎಕರೆ ಜಮೀನನ್ನು ಖರೀದಿಸಿದೆ. ಇದೇ ಸರ್ವೆ ನಂಬರ್‌ನಲ್ಲಿರುವ 33.17 ಎಕರೆ ಸರ್ಕಾರಿ ಜಮೀನನ್ನೂ ಇಸ್ಕಾನ್ ಒತ್ತುವರಿ ಮಾಡಿದೆ. ಒತ್ತುವರಿಯನ್ನು ತೆರವುಗೊಳಿಸುವಂತೆ ಈಗಾಗಲೇ ಸ್ಥಳೀಯಾಡಳಿತ ನೋಟಿಸ್ ನೀಡಿದೆ. ಭೂ ಕಬಳಿಕೆ ಕುರಿತ ವಿಶೇಷ ನ್ಯಾಯಾಲಯವು ಕೂಡ ಈ ಜಾಗದಲ್ಲಿ ಇಸ್ಕಾನ್ ಅಳವಡಿಸಿರುವ ತಂತಿಬೇಲಿಯನ್ನು ತೆರವುಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಶಿಯೋಮಿ ಇಂಡಿಯಾ ಪ್ರಕರಣ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಶಿಯೊಮಿ ಇಂಡಿಯಾ ಕಂಪನಿಗೆ ಸೇರಿದ ನಾಲ್ಕು ಬ್ಯಾಂಕ್ ಖಾತೆಗಳಲ್ಲಿನ ₹ 5,551.27 ಕೋಟಿ ಮೊತ್ತವನ್ನು ಜಪ್ತಿ ಮಾಡಬೇಕೆಂಬ ಜಾರಿ ನಿರ್ದೇಶನಾಲಯದ (ಇಡಿ) ಆದೇಶ ಪ್ರಶ್ನಿಸಿ ಸಲ್ಲಿಸಲಾಗಿರುವ ರಿಟ್ ಅರ್ಜಿಯ ಮೇಲಿನ ತೀರ್ಪನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಇ.ಡಿ ಆದೇಶ ಪ್ರಶ್ನಿಸಿ ಬೆಂಗಳೂರಿನ ಮಾರತ್ ಹಳ್ಳಿಯ ಟೆಕ್ ಗ್ರಾಮದಲ್ಲಿರುವ ಶಿಯೊಮಿ ಕಂಪನಿ ಕಚೇರಿಯ ಅಧಿಕೃತ ಪ್ರತಿನಿಧಿ ಸಮೀರ್ ಬಿ.ಎಸ್. ರಾವ್ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್. ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪೂರ್ಣಗೊಳಿಸಿತು.

ಇ.ಡಿ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಂ.ಬಿ.ನರಗುಂದ ಹಾಗೂ ಅರ್ಜಿದಾರರ ಪರ ಹಿರಿಯ ವಕೀಲ ಎಸ್.ಗಣೇಶನ್ ಅವರ ವಾದ-ಪ್ರತಿವಾದವನ್ನು ನ್ಯಾಯಪೀಠ ಆಲಿಸಿದೆ.

ಏನಿದು ಪ್ರಕರಣ?: 'ಶಿಯೊಮಿ ಇಂಡಿಯಾ ಕಂಪನಿಯು ಭಾರತದಲ್ಲಿ ಗಳಿಸಿದ ಹಣವನ್ನು ರಾಯಧನ ನೀಡುವ ನೆಪದಲ್ಲಿ ವಿದೇಶಿ ಕಂಪನಿಗಳಿಗೆ ಅಕ್ರಮವಾಗಿ ವರ್ಗಾವಣೆ ಮಾಡುತ್ತಿದೆ. ಆದ್ದರಿಂದ, ಇದು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) 1999ರ ನಿಯಮಗಳ ಉಲ್ಲಂಘನೆ' ಎಂಬುದು ಇ.ಡಿ ಆರೋಪ.

ನಗರದ ಹೊರವಲಯದ ತಾತಗುಣಿಯ ಜ್ಯೋತಿ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಗುರುವಾರ ನಡೆದ ಜ್ಯೋತಿ ಇಂಡಸ್ಟ್ರೀಸ್ ಸಂಸ್ಥೆಯ ಸುವರ್ಣ ಮಹೋತ್ಸವಕ್ಕೆ ಶೃಂಗೇರಿ ಶಾರದಾ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿ ಚಾಲನೆ ನೀಡಿದರು

ಪ್ರಕೃತಿ ಸಂರಕ್ಷಣೆಗೆ ಸ್ವಾಮೀಜಿ ಕರೆ

ಬೆಂಗಳೂರು: 'ಮನುಷ್ಯರಿಗೆ ಭಗವಂತ ನೀಡಿರುವ ಕೊಡುಗೆ ಪ್ರಕೃತಿ. ಅದನ್ನು ಹಾಳು ಮಾಡದೆ ಸಂರಕ್ಷಣೆ ಮಾಡಬೇಕು' ಎಂದು ಶೃಂಗೇರಿ ಶಾರದಾ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿ ಕರೆ ನೀಡಿದರು.

ನಗರದ ಹೊರವಲಯದ ತಾತಗುಣಿಯ ಜ್ಯೋತಿ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಗುರುವಾರ ನಡೆದ ಜ್ಯೋತಿ ಇಂಡಸ್ಟ್ರೀಸ್ ಸಂಸ್ಥೆಯ ಸುವರ್ಣ ಮಹೋತ್ಸವದಲ್ಲಿ ಅವರು ಮಾತನಾಡಿದರು.

ಪ್ರಕೃತಿಯನ್ನು ಜತನವಾಗಿ ರಕ್ಷಿಸಿದರೆ ಮುಂದಿನ ತಲೆಮಾರುಗಳಿಗೂ ಪರಿಶುದ್ಧ ವಾತಾವರಣ ಇರುತ್ತದೆ. ಪ್ರಕೃತಿ ನಮಗೆ ಎಲ್ಲವನ್ನೂ ಕೊಟ್ಟಿದೆ. ಸ್ವಾರ್ಥದ ಉದ್ದೇಶಗಳಿಗೆ ಅದನ್ನು ಹಾಳು ಮಾಡಬಾರದು ಎಂದು ಹೇಳಿದರು.

ಮಕ್ಕಳು ವಿದ್ಯೆ ಜತೆಗೆ ಸಂಸ್ಕಾರವಂತರಾಗಬೇಕು ಎಂದು ಅಭಿಪ್ರಾಯಪಟ್ಟರು. ಸಂಸದ ಡಿ.ವಿ. ಸದಾನಂದ ಗೌಡ ಮಾತನಾಡಿದರು.

ಶೃಂಗೇರಿ ಶಾರದಾ ಪೀಠದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರಿ ಶಂಕರ್, ಎಂ.ನರಸಿಂಹನ್, ಎಚ್.ಎನ್. ಹಿರಿಯಣ್ಣ ಸ್ವಾಮಿ, ಜ್ಯೋತಿ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಸೀತಾ ಬಿ.ಎನ್. ವಿ.ಸುಬ್ರಹ್ಮಣ್ಯ ಹಾಜರಿದ್ದರು.

ಎನ್‌ಎಸ್‌ಎಸ್: ₹10 ಕೋಟಿ ಅನುದಾನ

ಬೆಂಗಳೂರು: ರಾಜ್ಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಚಟುವಟಿಕೆಗಳನ್ನು ವಿಸ್ತರಿಸಲು ಕೇಂದ್ರ ಸರ್ಕಾರವು ₹ 10 ಕೋಟಿ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ ತಿಳಿಸಿದ್ದಾರೆ.

'2022-23ನೇ ಶೈಕ್ಷಣಿಕ ವರ್ಷದಲ್ಲಿ ಎನ್‌ಎಸ್‌ಎಸ್ ಕಾರ್ಯಕರ್ತರ ಸಂಖ್ಯೆಯನ್ನು 50,000ದಷ್ಟು ಹೆಚ್ಚಿಸಲು ಅವಕಾಶ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು. ಸ್ವಯಂಸೇವಕರ ಸಂಖ್ಯೆಯನ್ನು 42,800ರಷ್ಟು ಹೆಚ್ಚಿಸಲು ಅನುಮತಿ ನೀಡಿದ್ದು, ಇದಕ್ಕಾಗಿ ₹ 10 ಕೋಟಿ ಅನುದಾನ ಒದಗಿಸಲಾಗಿದೆ. ಪ್ರಸಕ್ತ ವರ್ಷ ರಾಜ್ಯಕ್ಕೆ ಎನ್‌ಎಸ್‌ಎಸ್ ಚಟುವಟಿಕೆಗಳಿಗಾಗಿ ₹24.75 ಕೋಟಿ ಅನುದಾನ ಕೇಂದ್ರದಿಂದ ದೊರಕಲಿದೆ' ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಬಿಜೆಪಿಯ ಒಬಿಸಿ ಮೋರ್ಚಾ ರಾಷ್ಟ್ರೀಯ ಪ್ರಶಿಕ್ಷಣ ವರ್ಗ

'ಮೌಲ್ಯಾಧಾರಿತ ರಾಜಕೀಯದಲ್ಲಿ ನಂಬಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯದು ಮೌಲ್ಯಾಧಾರಿತ ರಾಜಕೀಯ. ಅಧಿಕಾರ ಪಡೆಯಲು ಮತ್ತು ಉಳಿಸಿಕೊಳ್ಳಲು ಬದಲಿ ಮಾರ್ಗವನ್ನು ಬಳಸುವುದಿಲ್ಲ' ಎಂದು ಬಿಜೆಪಿಯ ಒಬಿಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಡಾ.ಕೆ.ಲಕ್ಷ್ಮಣ್ ಹೇಳಿದರು.

ಯಲಹಂಕದ ಹೋಟೆಲ್ ರಮಡಾದಲ್ಲಿ ಗುರುವಾರ ಆರಂಭಗೊಂಡ ಬಿಜೆಪಿ ಒಬಿಸಿ ಮೋರ್ಚಾದ ಮೂರು ದಿನಗಳ ರಾಷ್ಟ್ರೀಯ ಪ್ರಶಿಕ್ಷಣ ವರ್ಗದಲ್ಲಿ ಮಾತನಾಡಿದರು.

ಒಂದು ಮತದಿಂದ ಸರ್ಕಾರ ಪತನವಾಗುವುದೆಂದು ಆಗಿನ ಪ್ರಧಾನಿ ವಾಜಪೇಯಿ ಅವರಿಗೆ ಗೊತ್ತಿದ್ದರೂ ಅವರು ಮೌಲ್ಯಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳದೇ, ತಮ್ಮ ಪದವಿಯಿಂದ ಕೆಳಕ್ಕಿಳಿದರು ಎಂದು ತಿಳಿಸಿದರು.

ಆರು ದಶಕಗಳಿಗೂ ಹೆಚ್ಚು ಕಾಲ ದೇಶವನ್ನಾಳಿದ ಕಾಂಗ್ರೆಸ್ ಪಕ್ಷವು ವಂಶವಾದ ಹಾಗೂ ಭ್ರಷ್ಟಾಚಾರಕ್ಕೆ ಅಂಟಿಕೊಂಡಿತ್ತು. ಆದರೆ, ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ 8 ವರ್ಷಗಳಲ್ಲಿ ದೇಶದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದೆ. ಮೋದಿಯವರ ಜನಪರ ಯೋಜನೆಗಳನ್ನು ಜನರಿಗೆ ತಲುಪಿಸುವ ಕಾರ್ಯವನ್ನು ನಾವು ಮಾಡಬೇಕಾಗಿದೆ ಎಂದರು.

ಬಿಜೆಪಿಯ ಒಬಿಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಡಾ.ಕೆ. ಲಕ್ಷ್ಮಣ್ ಅವರು ರಾಷ್ಟ್ರೀಯ ಪ್ರಶಿಕ್ಷಣ ವರ್ಗ ಉದ್ಘಾಟನೆ ವೇಳೆ ಗೋಪೂಜೆ ಮಾಡಿದರು

ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಒಬಿಸಿ ಮೋರ್ಚಾ ಶ್ರಮಿಸುತ್ತಿದೆ. ಅಹಂ ತೊರೆಯುವ ಮೂಲಕ ವ್ಯಕ್ತಿ ಪರಿವರ್ತನೆ ಆಗಬೇಕು. ಇದು ಸಾಮಾಜಿಕ ಪರಿವರ್ತನೆಗೆ ಪೂರಕ. ಪರಿವರ್ತನೆಯ ಹಾದಿ ಸುಗಮವಾಗಿರಲು ಪ್ರಶಿಕ್ಷಣ ವರ್ಗ ಮಹತ್ವದ ಪಾತ್ರವಹಿಸುತ್ತದೆ ಎಂದರು.

ಕೇಂದ್ರದ ಈಶಾನ್ಯ ರಾಜ್ಯಗಳ ಅಭಿವೃದ್ಧಿ ಸಚಿವ ಹಾಗೂ ಒಬಿಸಿ ಮೋರ್ಚಾದ ರಾಷ್ಟ್ರೀಯ ಉಪಾಧ್ಯಕ್ಷ ಬಿ.ಎಲ್.ವರ್ಮ ಮಾತನಾಡಿ, ನರೇಂದ್ರ ಮೋದಿ ಪ್ರಧಾನಿ ಆಗುವುದಕ್ಕೂ ಮೊದಲು ದೇಶದಲ್ಲಿ ನಿರಾಶದಾಯಕ ಸ್ಥಿತಿ ಇತ್ತು. ಕಾಂಗ್ರೆಸ್ ಮತ್ತು ಯುಪಿಎ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಭ್ರಷ್ಟಾಚಾರದ ಹಗರಣಗಳು ನಿರಂತರ ಎಂಬಂತೆ ನಡೆದವು. ಆದರೆ, ಮೋದಿ ನೇತೃತ್ವದ ಸರ್ಕಾರವು ವರ್ಗ, ಜಾತಿ ಭೇದವಿಲ್ಲದೇ, ಭ್ರಷ್ಟಾಚಾರ ದೂರವಿಟ್ಟು ಬಡವರ ಅಭಿವೃದ್ಧಿಗೆ ಶ್ರಮಿಸಿತು. ಭ್ರಷ್ಟಾಚಾರವಿಲ್ಲದ ಯೋಜನೆಗೆ ಜನಧನ್ ಸ್ಪಷ್ಟ ಉದಾಹರಣೆ ಎಂದು ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಎಸ್‌ಡಬ್ಲ್ಯೂಡಿ – ಪಶ್ಚಿಮ ವಲಯ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್,
4ನೇ ಬ್ಲಾಕ್, ಜಯನಗರ, ಬೆಂಗಳೂರು–560011.

ಸಂಖ್ಯೆ:ಕಾಅ/ಎಸ್‌ಡಬ್ಲ್ಯೂಡಿ–ಪಶ್ಚಿಮ/ಟೆಂಡರ್/02/2022–23 ದಿನಾಂಕ: 16–06–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಎಸ್‌ಡಬ್ಲ್ಯೂಡಿ–ಪಶ್ಚಿಮ ವಲಯ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–4)

ಕ್ರ. ಸಂ.	ಪ್ಯಾಕೇಜ್	ಅಂದಾಜು ಉದ್ದ (ಕಿ.ಮೀ.ಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)
1	ಪಶ್ಚಿಮ ವಲಯದ ರಾಜಾಜಿನಗರ ಮತಕ್ಷೇತ್ರದಲ್ಲಿ ಮಳೆ ನೀರು ಚರಂಡಿಗಳ ವಾರ್ಷಿಕ ನಿರ್ವಹಣೆ (3 ವರ್ಷಗಳ ಅವಧಿಗೆ)	7.86	482000.00
2	ಪಶ್ಚಿಮ ವಲಯದ ಚಾಮರಜಪೇಟೆ ಮತಕ್ಷೇತ್ರದಲ್ಲಿ ಮಳೆ ನೀರು ಚರಂಡಿಗಳ ವಾರ್ಷಿಕ ನಿರ್ವಹಣೆ (3 ವರ್ಷಗಳ ಅವಧಿಗೆ)	3.97	131000.00
3	ಪಶ್ಚಿಮ ವಲಯದ ಗೋವಿಂದರಾಜನಗರ ಮತಕ್ಷೇತ್ರದಲ್ಲಿ ಮಳೆ ನೀರು ಚರಂಡಿಗಳ ವಾರ್ಷಿಕ ನಿರ್ವಹಣೆ (3 ವರ್ಷಗಳ ಅವಧಿಗೆ)	12.56	272000.00
4	ಪಶ್ಚಿಮ ವಲಯದ ಮಹಾಲಕ್ಷ್ಮಿ ಲೇಔಟ್ ಮತಕ್ಷೇತ್ರದಲ್ಲಿ ಮಳೆ ನೀರು ಚರಂಡಿಗಳ ವಾರ್ಷಿಕ ನಿರ್ವಹಣೆ (3 ವರ್ಷಗಳ ಅವಧಿಗೆ)	11.60	415000.00
5	ಪಶ್ಚಿಮ ವಲಯದ ಗಾಂಧಿನಗರ ಮತಕ್ಷೇತ್ರದಲ್ಲಿ ಮಳೆ ನೀರು ಚರಂಡಿಗಳ ವಾರ್ಷಿಕ ನಿರ್ವಹಣೆ (3 ವರ್ಷಗಳ ಅವಧಿಗೆ)	8.05	390000.00
6	ಪಶ್ಚಿಮ ವಲಯದ ಮಲ್ಲೇಶ್ವರಂ ಮತಕ್ಷೇತ್ರದಲ್ಲಿ ಮಳೆ ನೀರು ಚರಂಡಿಗಳ ವಾರ್ಷಿಕ ನಿರ್ವಹಣೆ (3 ವರ್ಷಗಳ ಅವಧಿಗೆ)	4.925	205000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **22–06–2022ರಂದು 16.00 ಗಂಟೆಗೆ.** 3) ಬಿಡ್ ಡಾಕ್ಯೂಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28–06–2022ರಂದು 16.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **29–06–2022ರಂದು 16.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ, ಪಶ್ಚಿಮ ವಲಯ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಎಸ್‌ಡಬ್ಲ್ಯೂಡಿ, ಪೂರ್ವ ವಲಯ
ಬಿಬಿಎಂಪಿ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್,
4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011.

ಸಂ.: ಕಾಪಾಅ/ಎಸ್‌ಡಬ್ಲ್ಯೂಡಿ–ಪೂರ್ವ/ಟೆಂಡರ್/02/2022–23 ದಿನಾಂಕ: 16.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ – ಕೆಡಬ್ಲ್ಯೂ4)

ಕಾರ್ಯಪಾಲಕ ಅಭಿಯಂತರರು (ಎಸ್‌ಡಬ್ಲ್ಯೂಡಿ – ಪೂರ್ವ ವಲಯ), ಬಿಬಿಎಂಪಿ, ಬೆಂಗಳೂರು ಅವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು ಅಥವಾ ಅದಕ್ಕೆ ಸರಿಸಮಾನವಾದ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳ ಜೊತೆಗೆ ನೋಂದಾಯಿತದಾರರಿಂದ ಈ ಕೆಳಕಂಡ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಪ್ಯಾಕೇಜ್	ಕಿ.ಮೀ.ನ ಅಂದಾಜು ಉದ್ದ	ಇಎಂಡಿ (ರೂ. ಲಕ್ಷಗಳಲ್ಲಿ)
1	ಪೂರ್ವ ವಲಯದ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆ ನೀರಿನ ಚರಂಡಿಗಳ ವಾರ್ಷಿಕ ನಿರ್ವಹಣೆ. (3 ವರ್ಷಗಳ ಕಾಲ)	14.14	4,00,000/–
2	ಪೂರ್ವ ವಲಯದ ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆ ನೀರಿನ ಚರಂಡಿಗಳ ವಾರ್ಷಿಕ ನಿರ್ವಹಣೆ. (3 ವರ್ಷಗಳ ಕಾಲ)	24.01	7,40,000/–
3	ಪೂರ್ವ ವಲಯದ ಸಿವಿ ರಾಮನ್ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆ ನೀರಿನ ಚರಂಡಿಗಳ ವಾರ್ಷಿಕ ನಿರ್ವಹಣೆ. (3 ವರ್ಷಗಳ ಕಾಲ)	18.32	5,50,000/–
4	ಪೂರ್ವ ವಲಯದ ಪುಲಿಕೇಶಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆ ನೀರಿನ ಚರಂಡಿಗಳ ವಾರ್ಷಿಕ ನಿರ್ವಹಣೆ. (3 ವರ್ಷಗಳ ಕಾಲ)	6.37	1,70,000/–
5	ಪೂರ್ವ ವಲಯದ ಶಿವಾಜಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆ ನೀರಿನ ಚರಂಡಿಗಳ ವಾರ್ಷಿಕ ನಿರ್ವಹಣೆ. (3 ವರ್ಷಗಳ ಕಾಲ)	6.59	2,00,000/–
6	ಪೂರ್ವ ವಲಯದ ಶಾಂತಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆ ನೀರಿನ ಚರಂಡಿಗಳ ವಾರ್ಷಿಕ ನಿರ್ವಹಣೆ. (3 ವರ್ಷಗಳ ಕಾಲ)	4.20	1,70,000/–

ವೇಳಾಪಟ್ಟಿ: (1) ಪೂರ್ವ ಬಿಡ್ ಸಭೆಯ **ದಿನಾಂಕ: 21.06.2022ರ ಸಂಜೆ 4.00 ಗಂಟೆಗೆ.** (2) ಬಿಡ್ ದಸ್ತಾವೇಜು ಸಲ್ಲಿಸಲು ಕೊನೆಯ **ದಿನಾಂಕ: 24.06.2022ರ ಸಂಜೆ 4.00 ಗಂಟೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27.06.2022ರ ಸಂಜೆ 4.30 ಗಂಟೆಗೆ.** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ಬಿಡ್ದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಎಸ್‌ಡಬ್ಲ್ಯೂಡಿ, ಪೂರ್ವ ವಲಯ, ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಎಸ್‌ಡಬ್ಲ್ಯೂಡಿ, ಮಹದೇವಪುರ ವಲಯ ಬಿಬಿಎಂಪಿ. 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ ಕಟ್ಟಡ, 4ನೇ ಬ್ಲಾಕ್, ಬೆಂಗಳೂರು–560 011

ಸಂ. ಕಾಪಾಅ/ಎಸ್‌ಡಬ್ಲೂಡಿ/ಮಪುವ/ಟೆಂ/03/2022–23 ದಿನಾಂಕ: 16–06–2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಡಬ್ಲ್ಯೂ–4)
(ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಎಸ್‌ಡಬ್ಲ್ಯೂಡಿ–ಮಹದೇವಪುರ ವಲಯ), ಬೃಬೆಂಮಪಾಲಿಕೆ ಬೆಂಗಳೂರು ರವರು, ಬಿಬಿಎಂಪಿ ಅಥವಾ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದಾದರು ರಾಜ್ಯ/ಕೇಂದ್ರ ಸಂಸ್ಥೆಗಳಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಪ್ಯಾಕೇಜ್	ಅಂದಾಜು ಉದ್ದ ಕಿಮೀಗಳಲ್ಲಿ	ಇಎಂಡಿ (ರೂ. ಲಕ್ಷಗಳಲ್ಲಿ)
1.	ಮಹದೇವಪುರ ವಿಧಾನಸಭಾ ಕ್ಷೇತ್ರದ ಮಹದೇವಪುರ ವಲಯದಲ್ಲಿ ಚಂಡಮಾರುತದ ನೀರಿನ ಒಳಚರಂಡಿಯ ವಾರ್ಷಿಕ ನಿರ್ವಹಣೆ.	35.10	5.92
2.	ಕೆ.ಆರ್. ಪುರ ವಿಧಾನಸಭಾ ಕ್ಷೇತ್ರದ ಮಹದೇವಪುರ ವಲಯದಲ್ಲಿ ಚಂಡಮಾರುತದ ನೀರಿನ ಒಳಚರಂಡಿಯ ನಿರ್ವಹಣೆ.	45.35	7.72

ಟೆಂಡರ್‌ನ ಕಾರ್ಯಸೂಚಿ: (1) ಪೂರ್ವ ಬಿಡ್ ಸಭೆ ದಿನಾಂಕ: **21–06–2022 ರ ಸಂಜೆ 4:00 ಗಂಟೆಗೆ** (2) ಬಿಡ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 24–6–2022 ಸಂಜೆ: 4:00 ಗಂಟೆಗೆ.** (3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 27–06–2022 ರ ಸಂಜೆ 4:30 ಗಂಟೆಗೆ.** (4) ಆರ್ಥಿಕ ಬಿಡ್‌ಗಳನ್ನು ತೆರೆಯುವುದನ್ನು ಬಿಡ್‌ದಾರರಿಗೆ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಅಥವಾ **https://eproc.karnataka.gov.in** ಇಲ್ಲಿಗೆ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ,
ಮಹದೇವಪುರ ವಲಯ, ಬಿಬಿಎಂಪಿ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಗ್ನಿಪಥ: ರಾಜಕೀಯ ವಿರೋಧ ಹೆಚ್ಚಳ

ಯೋಜನೆ ರದ್ದತಿಗೆ ಕಾಂಗ್ರೆಸ್, ಎಸ್‌ಪಿ ಆಗ್ರಹ, ಸರ್ಕಾರದ ವಿರುದ್ಧ ನಿಂತ ಬಿಜೆಪಿ ಮಿತ್ರ ಪಕ್ಷ ಜೆಡಿಯು

ನವದೆಹಲಿ (ಪಿಟಿಐ): ಅಗ್ನಿಪಥ ಯೋಜನೆಯನ್ನು ರದ್ದು ಮಾಡಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆ ತೀವ್ರಗೊಂಡಿದೆ. ಯೋಜನೆಯನ್ನು ಕೈಬಿಡಬೇಕು ಎಂದು ಕಾಂಗ್ರೆಸ್ ಪಕ್ಷವು ಆಗ್ರಹಿಸಿದೆ. ಅಗ್ನಿಪಥ ಯೋಜನೆಯನ್ನು ನಿರ್ಲಕ್ಷ್ಯದಿಂದ ರೂಪಿಸಲಾಗಿದೆ ಮತ್ತು ಅದು ದೇಶದ ಭವಿಷ್ಯಕ್ಕೆ ಮಾರಕ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದ್ದಾರೆ.

ಬಿಜೆಪಿಯ ಮಿತ್ರ ಪಕ್ಷವಾದ ಜೆಡಿಯು ಕೂಡ 'ಅಗ್ನಿಪಥ' ಯೋಜನೆಯ ವಿರುದ್ಧ ಮಾತನಾಡಿದೆ.

'ಅಗ್ನಿಪಥ ಯೋಜನೆಯು ಅತೃಪ್ತಿ, ಹತಾಶೆ ಮತ್ತು ಕರಾಳ ಭವಿಷ್ಯದ (ನಿರುದ್ಯೋಗ) ಭೀತಿ ಹುಟ್ಟಿಸಿದೆ. ಇದು ಬಿಹಾರ ಸೇರಿದಂತೆ ದೇಶದ ಎಲ್ಲೆಡೆಯ ಯುವಜನರು ಮತ್ತು ವಿದ್ಯಾರ್ಥಿಗ-ಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ. ಅಗ್ನಿಪಥ ಯೋಜನೆಯನ್ನು ಕೇಂದ್ರ ಸರ್ಕಾರವು ತಕ್ಷಣವೇ ಮರುಪರಿಶೀಲ-ನೆಗೆ ಒಳಪಡಿಸಬೇಕು. ಇದು ದೇಶದ ಸುರಕ್ಷತೆಯ ವಿಷಯ' ಎಂದು ಜೆಡಿಯು ಅಧ್ಯಕ್ಷ ರಾಜೀವ್ ರಂಜನ್ ಸಿಂಗ್ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಯೋಜನೆಯನ್ನು ಅಮಾನತಿನಲ್ಲಿ ಇರಿಸಿ. ಸೇವೆಯಲ್ಲಿರುವ ಮತ್ತು ನಿವೃತ್ತರಾದ ಸೇನಾಧಿಕಾರಿಗಳ ಜತೆಗೆ ವ್ಯಾಪಕ ಸಮಾಲೋಚನೆ ನಡೆಸಿ. ಗುಣಮಟ್ಟ, ಕಾರ್ಯದಕ್ಷತೆ, ಹಣಕಾಸು ವಿಚಾರಗಳ ಕುರಿತು ಚರ್ಚಿಸಿ. ಈ ವಿಚಾರಗಳಲ್ಲಿ ರಾಜಿ ಮಾಡಿಕೊಳ್ಳಲೇಬಾರದು ಎಂದು ಕಾಂಗ್ರೆಸ್ ಪಕ್ಷವು ಆಗ್ರಹಿಸಿದೆ.

'ರ್‍ಯಾಂಕೂ ಇಲ್ಲ, ಪಿಂಚಣಿಯೂ ಇಲ್ಲ. ಎರಡು ವರ್ಷ ನೇರ ನೇಮಕಾತಿಯೂ ಇಲ್ಲ. ನಾಲ್ಕು ವರ್ಷಗಳ ಬಳಿಕ ಸ್ಥಿರ ಭವಿಷ್ಯವೇ ಇಲ್ಲ. ಸೇನೆಯ ಬಗ್ಗೆ ಸರ್ಕಾರಕ್ಕೆ ಯಾವ ಗೌರವವೂ ಇಲ್ಲ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದ್ದಾರೆ.

ಕಾಂಗ್ರೆಸ್‌ನ ಅಜಯ ಮಾಕನ್, ಸಚಿನ್ ಪೈಲಟ್, ಪವನ್ ಖೇರಾ ಮತ್ತು ಪಿ. ಚಿದಂಬರಂ ಅವರು ಜಂಟಿ ಮಾಧ್ಯಮಗೋಷ್ಠಿ ನಡೆಸಿ, ಪಿಂಚಣಿ ಮೊತ್ತವನ್ನು ತಗ್ಗಿಸಲು ಈ ಯೋಜನೆ ರೂಪಿಸಲಾಗಿದೆ ಎಂಬ ವಾದವೇ ಅತ್ಯಂತ ದುರ್ಬಲ ಎಂದರು. ಅಲ್ಪಾವಧಿ ಕರ್ತವ್ಯ ವ್ಯವಸ್ಥೆಯು ಗುಣಮಟ್ಟ, ದಕ್ಷತೆ ಮತ್ತು ಕಾರ್ಯಕ್ಷಮತೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದರು.

ಬಿಜೆಪಿ ಸಂಸದ ವರುಣ್ ಗಾಂಧಿ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಪತ್ರ ಬರೆದು ಯೋಜನೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಯುವ ಜನರಲ್ಲಿ ಅಸಮಾಧಾನ ಹೆಚ್ಚಲು ಇದು ಕಾರಣವಾಗಬಹುದು. ಸರ್ಕಾರವು ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಯೋಜನೆಯನ್ನು ರದ್ದು ಮಾಡಬೇಕು. ಸಂಸತ್ತಿನಲ್ಲಿ ಯೋಜನೆ ಬಗ್ಗೆ ಚರ್ಚೆ ನಡೆಸಬೇಕು. ಈ ಯೋಜನೆಯು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ ಎಂದು ಎಡ ಪಕ್ಷಗಳು ಹೇಳಿವೆ.

ನಾಲ್ಕು ವರ್ಷವಷ್ಟೇ ಅಲ್ಲ, ಜೀವನವಿಡೀ ದೇಶಕ್ಕೆ ಸೇವೆ ಸಲ್ಲಿಸಲು ಯುವ ಜನರಿಗೆ ಸರ್ಕಾರ ಅವಕಾಶ ಕೊಡಬೇಕು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ. ಬಹುಜನ ಸಮಾಜ ಪಕ್ಷ, ಲೋಕ ಜನಶಕ್ತಿ ಪಕ್ಷ ಕೂಡ ಯೋಜನೆಯನ್ನು ವಿರೋಧಿಸಿವೆ.

ಬಿಹಾರದ ಸರನ್ ಜಿಲ್ಲೆಯ ಛಪರದಲ್ಲಿ 'ಅಗ್ನಿಪಥ' ಯೋಜನೆ ವಿರುದ್ಧ ಪ್ರತಿಭಟಿಸುತ್ತಿದ್ದ ವ್ಯಕ್ತಿಯನ್ನು ಪೊಲೀಸರು ಗುರುವಾರ ಎಳೆದೊಯ್ದರು —ಪಿಟಿಐ ಚಿತ್ರ

> ಈ ಯೋಜನೆಯು ಐತಿಹಾಸಿಕ. ಯುವಕರಿಗೆ ಹೊಸ ಮಾರ್ಗವನ್ನು ತೋರುವ ಈ ಯೋಜನೆ, ಅವರ ಉತ್ತಮ ಭವಿಷ್ಯದ ಬಾಗಿಲನ್ನು ತೆರೆಯಲು ದಾರಿ ಮಾಡಿಕೊಡುತ್ತದೆ
> **ನರೇಂದ್ರ ತೋಮರ್,** ಕೇಂದ್ರ ಸಚಿವ

> ವಿವಿಧ ರಾಜ್ಯಗಳ ಪೊಲೀಸ್ ಇಲಾಖೆಗಳು ಹಾಗೂ ಇತರೆ ನೇಮಕಾತಿಯ ಸಮಯದಲ್ಲಿ 'ಅಗ್ನಿವೀರ'ರಿಗೆ ಆದ್ಯತೆ ನೀಡಲಾಗುತ್ತದೆ
> **ಯೋಗಿ ಆದಿತ್ಯನಾಥ**, ಉತ್ತರ ಪ್ರದೇಶ ಮುಖ್ಯಮಂತ್ರಿ

ನಿವೃತ್ತ ಅಧಿಕಾರಿಗಳಲ್ಲಿ ಭಿನ್ನಾಭಿಪ್ರಾಯ

ಕೋಲ್ಕತ್ತ (ಪಿಟಿಐ): ಅಗ್ನಿಪಥ ಯೋಜನೆ ಮತ್ತು ಅದನ್ನು ವಿರೋಧಿಸಿ ಯುವಕರು ನಡೆಸುತ್ತಿರುವ ಪ್ರತಿಭಟನೆ ಬಗ್ಗೆ ನಿವೃತ್ತ ಸೇನಾ ಮುಖ್ಯಸ್ಥರು ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ನಾಲ್ಕು ವರ್ಷಗಳ ಸೇವೆಯ ನಂತರ ಪಿಂಚಣಿ ಭದ್ರತೆ ಇಲ್ಲದೆ ವಾಪಸಾದರೆ, ನಮ್ಮ ಭವಿಷ್ಯವೇನು ಎಂಬ ಭಯ ಯುವಕರಿಗೆ ಎದುರಾಗಿದೆ. ಹೀಗಾಗಿ ಅವರು ಪ್ರತಿಭಟಿಸುತ್ತಿದ್ದಾರೆ' ಎಂದು ನಿವೃತ್ತ ಲೆಫ್ಟಿನೆಂಟ್ ಜನರಲ್ ಜೆ.ಆರ್.ಮುಖರ್ಜಿ ಅಭಿಪ್ರಾಯಪಟ್ಟಿದ್ದಾರೆ. ಜತೆಗೆ, 'ಅಗ್ನಿಪಥ ಯೋಜನೆಯು ಒಂದು ಕೆಟ್ಟ ನಿರ್ಧಾರ. ನಾಲ್ಕು ವರ್ಷಗಳ ಅವಧಿಯ ಸೇವೆಯಲ್ಲಿ ಅವರಿಗೆ ಅಗತ್ಯ ತರಬೇತಿಗಳನ್ನು ನೀಡಲು ಹೇಗೆ ಸಾಧ್ಯ? ಸರ್ಕಾರವು ಯುವಕರಿಗೆ ಅಗತ್ಯ ತರಬೇತಿ ನೀಡದೆ, ಯುದ್ಧಭೂಮಿಗೆ ದೂಡುತ್ತಿದೆ' ಎಂದು ಅವರು ಹೇಳಿದ್ದಾರೆ.

ಆದರೆ, 'ಸರ್ಕಾರದ ಈ ನಿರ್ಧಾರ ಸರಿಯಾಗಿದೆ. ಹದಿನೇಳೂವರೆ ವರ್ಷಕ್ಕೇ ಯುವಕರು ಸೇವೆಗೆ ಲಭ್ಯವಾಗುವುದರಿಂದ ಸೇನೆಯಲ್ಲಿ ಯುವಶಕ್ತಿ ಹೆಚ್ಚಾಗಲಿದೆ. ಇದರಿಂದ ಸೇನೆಗೇ ಅನುಕೂಲವಾಗಲಿದೆ. ನಾಲ್ಕು ವರ್ಷಗಳ ಸೇವೆ ಮುಗಿಸಿ ಹೊರಬಂದವರಿಗೆ ಸರ್ಕಾರಿ ಅಥವಾ ಖಾಸಗಿ ಕ್ಷೇತ್ರದಲ್ಲಿ ಸೂಕ್ತ ಉದ್ಯೋಗ ಒದಗಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಸ್ಪಷ್ಟವಾದ ನೀತಿ ರೂಪಿಸಬೇಕು' ಎಂದು ನಿವೃತ್ತ ಏರ್‌ಚೀಫ್ ಮಾರ್ಷಲ್ ಅರೂಪ್ ರಾಹಾ ಹೇಳಿದ್ದಾರೆ.

'ಇದನ್ನು ಮೊದಲು ಸೇನೆಯ ಇತರ ವಿಭಾಗಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಬೇಕಿತ್ತು. ಆನಂತರವಷ್ಟೇ ಕದನ ಕರ್ತವ್ಯ ವಿಭಾಗದಲ್ಲಿ ಜಾರಿಗೆ ತರಬೇಕಿತ್ತು' ಎಂದು ನಿವೃತ್ತ ಮೇಜರ್ ಜನರಲ್ ಅರುಣ್ ರಾಯ್ ಹೇಳಿದ್ದಾರೆ.



ಮುಂಗಾರು ಅಧಿವೇಶನದಲ್ಲಿ ವಿದ್ಯುತ್ ತಿದ್ದುಪಡಿ ಮಸೂದೆ ಮಂಡನೆ ಸಾಧ್ಯತೆ

ನವದೆಹಲಿ (ಪಿಟಿಐ): ದೂರಸಂಪರ್ಕ ಸೇವೆಯ ಕಂಪನಿಗಳಂತೆ ಬದಲಿಸುವ ರೀತಿಯಲ್ಲಿಯೇ ವಿದ್ಯುತ್ ಪೂರೈಕೆ ಕಂಪನಿಗಳನ್ನು ಬದಲಾಯಿಸುವು-ದಕ್ಕೆ ಗ್ರಾಹಕರಿಗೆ ಅವಕಾಶ ನೀಡುವ ವಿದ್ಯುತ್ (ತಿದ್ದುಪಡಿ) ಮಸೂದೆ 2021 ಅನ್ನು, ಜುಲೈನಲ್ಲಿ ಆರಂಭವಾಗುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ.

ಎಫ್‌ಐಸಿಸಿಐ ಗುರುವಾರ ಆಯೋಜಿಸಿದ್ದ ಭಾರತ ವಿದ್ಯುತ್ ಪ್ರಸರಣ ಶೃಂಗ ಸಭೆ 2022ರಲ್ಲಿ ಕೇಂದ್ರ ವಿದ್ಯುತ್ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಆರ್.ಕೆ.ಸಿಂಗ್ ಈ ವಿಷಯ ತಿಳಿಸಿದ್ದಾರೆ.

ಸ್ಪರ್ಧೆಯನ್ನು ಉತ್ತೇಜಿಸಲು ವಿತರಣಾ ವ್ಯವಹಾರವನ್ನು ಡಿ- ಲೈಸೆನ್ಸ್ ಮಾಡುವ, ಪ್ರತಿ ಆಯೋಗದಲ್ಲಿ ಕಾನೂನು ಹಿನ್ನೆಲೆಯ ಸದಸ್ಯರನ್ನು ನೇಮಿಸುವ, ವಿದ್ಯುತ್ ಮೇಲ್ಮನವಿ ನ್ಯಾಯಮಂಡಳಿಯನ್ನು (ಎಪಿಟಿಇಎಲ್) ಬಲಪಡಿಸುವ ಮತ್ತು ಗ್ರಾಹಕರ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಈ ಮಸೂದೆಯಲ್ಲಿ ಪ್ರಸ್ತಾಪಿಸಲಾಗುತ್ತದೆ ಎಂದು ಸಚಿವರು ಹೇಳಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ರಾಷ್ಟ್ರಪತಿ ಭೇಟಿಗೆ 'ಕೈ' ನಿರ್ಧಾರ

ಒಂದನೇ ಪುಟದಿಂದ...

ಸಂಸದರ ಘನತೆಗೆ ಚ್ಯುತಿ ತಂದ ಆರೋಪದ ಮೇಲೆ ದೆಹಲಿ ಪೊಲೀಸರಿಗೆ ಸಂಸತ್ ಸಮನ್ಸ್ ನೀಡಬೇಕು ಎಂದು ಮನವಿ ಸಲ್ಲಿಸಲಾಯಿತು ಎಂದರು. ಸಂಸದರನ್ನು ಯಾವುದೇ ಕಾರಣ ನೀಡದೇ 8-12 ಗಂಟೆಗಳ ಕಾಲ ಪೊಲೀಸರು ವಶದಲ್ಲಿ ಇರಿಸಿಕೊಂಡಿದ್ದು ಸರಿಯಲ್ಲ ಎಂದು ಚಿದಂಬರಂ ಆರೋಪಿಸಿದರು. ಖರ್ಗೆ ಅವರ ಜೊತೆ ಪಿ.ಚಿದಂಬರಂ, ಕೆ.ಸಿ. ವೇಣುಗೋಪಾಲ್, ಜೈರಾಮ್ ರಮೇಶ್ ಮತ್ತು ಇತರರು ಇದ್ದರು.

ಭಯೋತ್ಪಾದಕರನ್ನು ನಡೆಸಿಕೊಳ್ಳುವ ರೀತಿಯಲ್ಲಿ, ಠಾಣೆಯಲ್ಲಿ ಸಂಸದರ ಜೊತೆ ಪೊಲೀಸರು ಅನುಚಿತವಾಗಿ ವರ್ತಿಸಿದರು ಎಂದು ಚೌಧರಿ ನೇತೃತ್ವದ ನಿಯೋಗ ಓಂ ಬಿರ್ಲಾ ಅವರ ಎದುರು ಆರೋಪಿಸಿತು. ನಿಯೋಗದಲ್ಲಿ ಮಾಣಿಕಂ ಟಾಗೋರ್, ಕೋಡಿಕುನ್ನಿಲ್ ಸುರೇಶ್ ಮತ್ತು ಇತರರು ಇದ್ದರು.

ಅಕ್ಬರ್ ರಸ್ತೆಯ ಕಾಂಗ್ರೆಸ್ ಕಚೇರಿಯನ್ನು ಕೆಲವು ಸಿಬ್ಬಂದಿ ಅತಿಕ್ರಮವಾಗಿ ಪ್ರವೇಶಿಸಿದ್ದರ ವಿರುದ್ಧ ದೆಹಲಿ ಪೊಲೀಸರಿಗೆ ಕಾಂಗ್ರೆಸ್ ಗುರುವಾರ ದೂರು ಸಲ್ಲಿಸಿತು. ಈ ಸಂಬಂಧ ಕಾಂಗ್ರೆಸ್ ನಿಯೋಗವು ದೆಹಲಿ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿತು. ಕಾಂಗ್ರೆಸ್ ಕಚೇರಿಗೆ ನುಗ್ಗಿ ಪಕ್ಷದ ಮುಖಂಡರು ಹಾಗೂ ಕಾಂಗ್ರೆಸ್ ಕಾರ್ಯಕರ್ತರನ್ನು ಥಳಿಸಲಾಗಿದೆ ಎಂಬ ಆರೋಪ ಆಧಾರರಹಿತ ಎಂದು ದೆಹಲಿ ಪೊಲೀಸ್ ಇಲಾಖೆ ಸ್ಪಷ್ಟಪಡಿಸಿದೆ.

ರಾಜಭವನ ಮುತ್ತಿಗೆಗೆ 'ಕೈ' ಪಡೆ ಯತ್ನ

ಪ್ರಜಾವಾಣಿ ವಾರ್ತೆ

> ದೇಶದ ಪ್ರಜಾಪ್ರಭುತ್ವ ಮತ್ತು ಸಂವಿಧಾನ ಉಳಿಸಲು ನಾವು ಹೋರಾಟ ಆರಂಭಿಸಿದ್ದೇವೆ. ಕೇಂದ್ರೀಯ ತನಿಖಾ ಸಂಸ್ಥೆಗಳು ಬಿಜೆಪಿಯ ಕೈಗೊಂಬೆಯಂತೆ ಕೆಲಸ ಮಾಡಬಾರದು
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

> ಕಾಂಗ್ರೆಸ್ ಪ್ರತಿಭಟನೆಯಿಂದ ಕೋವಿಡ್ ಸೋಂಕು ಹೆಚ್ಚಿದರೆ ಆ ಪಕ್ಷದವರೇ ಹೊಣೆ. ಮಾರ್ಗಸೂಚಿ ಉಲ್ಲಂಘನೆ ಕುರಿತು ಪ್ರಕರಣ ದಾಖಲಿಸಲು ಸಿ.ಎಂ ಜತೆ ಚರ್ಚಿಸುತ್ತೇನೆ.
> **ಡಾ.ಕೆ. ಸುಧಾಕರ್,** ಆರೋಗ್ಯ ಸಚಿವ

ಬೆಂಗಳೂರು: ಕೇಂದ್ರದ ಬಿಜೆಪಿ ಸರ್ಕಾರವು ಜಾರಿ ನಿರ್ದೇಶನಾ-ಲಯದ (ಇ.ಡಿ) ಅಧಿಕಾರಿಗಳ-ನ್ನು ಬಳಸಿಕೊಂಡು ತಮ್ಮ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ರಾಜಭವನಕ್ಕೆ ಮುತ್ತಿಗೆ ಹಾಕಲು ಗುರುವಾರ ಯತ್ನಿಸಿದರು. ಸಾವಿರಾರು ಮಂದಿಯನ್ನು ವಶಕ್ಕೆ ಪಡೆದ ಪೊಲೀಸರು ಪ್ರತಿಭಟನಕಾರರ ಯತ್ನವನ್ನು ತಡೆದರು.

ಎಐಸಿಸಿ ನಿರ್ದೇಶನದಂತೆ ರಾಜಭವನ ಮುತ್ತಿಗೆಗೆ ಬುಧವಾರ ಕರೆ ನೀಡಲಾಗಿತ್ತು. ಗುರುವಾರ ಬೆಳಿಗ್ಗೆಯೇ ಸಾವಿರಾರು ಮಂದಿ ಕಾಂಗ್ರೆಸ್ ಕಾರ್ಯಕರ್ತರು ಕ್ವೀನ್ಸ್ ರಸ್ತೆ-ಯಲ್ಲಿರುವ ಕೆಪಿಸಿಸಿ ಕಚೇರಿ ಎದುರು ಸೇರಿದ್ದರು. ಅಲ್ಲಿಯೇ ಪಕ್ಷದ ಕಾರ್ಯ-ಕರ್ತರನ್ನುದ್ದೇಶಿಸಿ ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ನಂತರ ಸಿದ್ದರಾಮಯ್ಯ, ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ನೇತೃತ್ವದಲ್ಲಿ ರಾಜಭವನ ದತ್ತ ಹೆಜ್ಜೆ ಹಾಕಿದರು. ಹಿರಿಯ ಮುಖಂಡ ಎಂ.ವೀರಪ್ಪ ಮೊಯಿಲಿ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಆರ್. ಧ್ರುವನಾರಾಯಣ ಸೇರಿದಂತೆ ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಮೆರವಣಿಗೆಯಲ್ಲಿ ಹೊರಟರು.

ಪೊಲೀಸರ ತಡೆ: ಕ್ವೀನ್ಸ್ ರಸ್ತೆಯ ಮಾರ್ಗವಾಗಿ ಹೊರಟ ಪ್ರತಿಭಟನಕಾರರು ಎಸ್.ಜಿ. ಬಾಳೇಕುಂದ್ರಿ ವೃತ್ತ ತಲುಪುತ್ತಿದ್ದಂತೆ ಪೊಲೀಸರು ಎಲ್ಲ ದಿಕ್ಕುಗಳಿಂದಲೂ ತಡೆಯೊಡ್ಡಿದರು. ಮುಂದಕ್ಕೆ ಸಾಗಲು ಅವಕಾಶ ನೀಡುವಂತೆ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಪಟ್ಟು ಹಿಡಿದರು. ಕೆಲಕಾಲ ತಳ್ಳಾಟ, ನೂಕಾಟ ನಡೆಯಿತು.

ರಾಜಭವನಕ್ಕೆ ತೆರಳಲು ಅವಕಾಶ ನೀಡುವಂತೆ ಆಗ್ರಹಿಸಿ ಸಿದ್ದರಾಮಯ್ಯ ಅಲ್ಲಿಯೇ ಧರಣಿ ಕೂರಲು ಮುಂದಾದರು. ಇತರ ನಾಯಕರೂ ಅವರನ್ನು ಬೆಂಬಲಿಸಿದರು. ಕಾಂಗ್ರೆಸ್ ಕಾರ್ಯಕರ್ತರು ಏರು ಧ್ವನಿಯಲ್ಲಿ ಕೇಂದ್ರದ ಬಿಜೆಪಿ ಸರ್ಕಾರಗಳ ವಿರುದ್ಧ ಘೋಷಣೆ ಕೂಗಲಾರಂಭಿಸಿದರು. ಸಿದ್ದರಾಮಯ್ಯ, ಶಿವಕುಮಾರ್, ಹರಿಪ್ರಸಾದ್ ಸೇರಿದಂತೆ ಕಾಂಗ್ರೆಸ್ ನಾಯಕರನ್ನು ಮೊದಲು ವಶಕ್ಕೆ ಪಡೆದ ಪೊಲೀಸರು, ಬಸ್‌ನಲ್ಲಿ ಕರೆದೊಯ್ದರು.

ನಂತರ ಸಾವಿರಾರು ಮಂದಿ ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಹಲವು ಬಸ್‌ಗಳಲ್ಲಿ ಕರೆದೊಯ್ಯಲಾಯಿತು. ಕೆಲವು ಸಮಯದ ಬಳಿಕ ಎಲ್ಲರನ್ನೂ ಪೊಲೀಸರು ಬಿಡುಗಡೆ ಮಾಡಿದರು. ನಂತರ ಸಲೀಂ ಅಹ್ಮದ್ ನೇತೃತ್ವದ ನಿಯೋಗ ರಾಜಭವನಕ್ಕೆ ತೆರಳಿ ರಾಜ್ಯಪಾಲರ ಕಾರ್ಯದರ್ಶಿ ಮೂಲಕ ರಾಷ್ಟ್ರಪತಿಯವರಿಗೆ ಮನವಿ ಸಲ್ಲಿಸಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಸ್ವಸ್ಥ: ಎಸ್.ಜಿ. ಬಾಳೇಕುಂದ್ರಿ ವೃತ್ತದಲ್ಲಿ ಪೊಲೀಸರು ಮೆರವಣಿಗೆಗೆ ತಡೆ ಹಾಕಿದ್ದ ಸಂದರ್ಭದಲ್ಲೇ ಮಹಾಲಕ್ಷ್ಮಿ ಬಡಾವಣೆ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಿ. ರಾಮಕೃಷ್ಣ ಅಸ್ವಸ್ಥರಾಗಿ ಕುಸಿದುಬಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಬಿಜೆಪಿಯೇತರ ಪಕ್ಷಗಳು ಕೈಜೋಡಿಸಲಿ'

ಬೆಂಗಳೂರು: ಕೇಂದ್ರದ ಬಿಜೆಪಿ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ವಿರೋಧ ಪಕ್ಷಗಳ ನಾಯಕರಿಗೆ ಕಿರುಕುಳ ನೀಡುತ್ತಿದ್ದು, ಅದರ ವಿರುದ್ಧದ ಹೋರಾಟಕ್ಕೆ ಬಿಜೆಪಿಯೇತರ ಎಲ್ಲ ಪಕ್ಷಗಳೂ ಕೈಜೋಡಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರ ಸಂವಿಧಾನ, ಕಾನೂನು ಎಲ್ಲವನ್ನೂ ಗಾಳಿಗೆ ತೂರಿ, ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ. ತೃಣಮೂಲ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿ, ಡಿಎಂಕೆ ಪಕ್ಷದ ಸ್ಟಾಲಿನ್, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಸೇರಿದಂತೆ ವಿಪಕ್ಷಗಳ ನಾಯಕರು ಒಗ್ಗೂಡಬೇಕು' ಎಂದರು.

ಕರ್ನಾಟಕ ಸರ್ಕಾರ
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಎಫ್.ಕೆ.ಸಿ.ಸಿ.ಐ. ಕಟ್ಟಡ, ಫೇಡರೇಷನ್ ಹೌಸ್, 3ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು-09.
ದೂರವಾಣಿ: 080-22352044, ಮಿಂಚಂಚೆ: kbada6666@gmail.com
ಅಂತರ್ಜಾಲ: https://kbada.karnataka.gov.in
ಸಂ: ಕಗಪ್ರಅಪ್ರಾ/20/ಆ/2021-22 ದಿನಾಂಕ: 16.06.2022

2022-23ನೇ ಸಾಲಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಗಡಿ ತಾಲ್ಲೂಕುಗಳಲ್ಲಿ (ಬೀದರ್ ಮತ್ತು ಕಲುಬುರ್ಗಿ ಜಿಲ್ಲೆಗಳ ಗಡಿ ತಾಲ್ಲೂಕುಗಳನ್ನು ಹೊರತು ಪಡಿಸಿ) ಹಾಗೂ ಹೊರನಾಡಿನಲ್ಲಿ ಕಾರ್ಯಕ್ರಮ ಆಯೋಜಿಸಲು ನೋಂದಾಯಿತ ಅರ್ಹ ಸಂಘ/ಸಂಸ್ಥೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ/ವಿಚಾರ ಸಂಕಿರಣ/ಚಿಂತನಾ ಶಿಬಿರ/ಗಡಿ ಉತ್ಸವ ಹಾಗೂ ಹೊರನಾಡು ಗಡಿ ಉತ್ಸವ/ಮಹಿಳಾ ಸಂಘ/ಸಂಸ್ಥೆಗಳು ನಡೆಸುವ ಗಡಿ ಉತ್ಸವ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಮಾತ್ರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ರಾಜ್ಯದ ನೋಂದಾಯಿತ ಅರ್ಹ ಸಂಘ/ಸಂಸ್ಥೆಗಳು ಅರ್ಜಿಗಳನ್ನು ಕಡ್ಡಾಯವಾಗಿ ಸಂಬಂಧಪಟ್ಟ ಜಿಲ್ಲೆಗಳ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಕಛೇರಿಗೆ ಸಲ್ಲಿಸುವುದು. ಸದರಿ ಅರ್ಜಿಗಳನ್ನು ಸ.ನಿ.ಕಂ. ಮತ್ತು ಸ. ಇಲಾಖೆ ಇವರು ಪರಿಶೀಲಿಸಿ ಗಡಿ ಪ್ರಾಧಿಕಾರಕ್ಕೆ ರವಾನಿಸುವುದು ಹಾಗೂ ಹೊರನಾಡಿನ ಸಂಘ/ಸಂಸ್ಥೆಗಳು ನೇರವಾಗಿ ಗಡಿ ಪ್ರಾಧಿಕಾರಕ್ಕೆ ಅರ್ಜಿಗಳನ್ನು ಸಲ್ಲಿಸುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05.07.2022 ರಂದು ಆಗಿರುತ್ತದೆ. ಅರ್ಜಿಗಳನ್ನು ಆಹ್ವಾನಿಸಲಾದ ಪ್ರಾಧಿಕಾರದ ಯೋಜನೆಗಳ ಮತ್ತು ಗಡಿ ತಾಲ್ಲೂಕುಗಳ ಬಗ್ಗೆ ಸಂಪೂರ್ಣ ವಿವರಗಳನ್ನು ಹಾಗೂ ನಿಗದಿತ ಅರ್ಜಿ ನಮೂನೆಯನ್ನು ಅಂತರ್ಜಾಲ https://kbada.karnataka.gov.in ದಿಂದ ಪಡೆದುಕೊಳ್ಳುವುದು.

ಗಡಿ ಭಾಗದಲ್ಲಿ ಕಾರ್ಯಕ್ರಮ ಆಯೋಜಿಸಲು ಉದ್ದೇಶಿರುವ ಹಾಗೂ ಮೊದಲ ಬಾರಿ ಕಾರ್ಯಕ್ರಮ ಆಯೋಜಿಸಲು ಅರ್ಜಿ ಸಲ್ಲಿಸುವ ಸಂಘ ಸಂಸ್ಥೆಗಳಿಗೆ ಹಾಗೂ ಪ್ರತಿಷ್ಠಿತ ಸಂಘ/ಸಂಸ್ಥೆಗಳಿಗೆ ಆರ್ಥಿಕ ಇತಿಮಿತಿಯಲ್ಲಿ ಆದ್ಯತೆ ನೀಡಲಾಗುವುದು. ಧನಸಹಾಯ ನೀಡುವ/ತಿರಸ್ಕರಿಸುವ ಅಧಿಕಾರವನ್ನು ಗಡಿ ಪ್ರಾಧಿಕಾರ ಹೊಂದಿರುತ್ತದೆ.

ಸಹಿ/-ಕಾರ್ಯದರ್ಶಿ
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ವಾ.ಸಾ.ಸಂ.ಇ/ವಾಪ್ರ/942/ಆಕಾರ್/22-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಕಾರ್ಯಲಯ, ಹಬ್ಬುವಾಡಾ-ಕಾರವಾರ, ಉತ್ತರ ಕನ್ನಡ ಜಿಲ್ಲೆ -581 301.
ದೂರವಾಣಿ: 08382-228935, ಫ್ಯಾಕ್ಸ್: 229735 e-mail: eerdwsd.uk@gmail.com
ನಂ.: ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/ಪಿಬಿ-1/ಅಲ್ಪಾವಧಿ ಟೆಂಡರ/JJM/2022-23/697 ದಿನಾಂಕ: 16.06.2022
ಇ-ಪ್ರೊಕ್ಯೂರಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಇವರಿಂದ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ//ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ-ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document KW-3 ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.
ಕಾಮಗಾರಿ ಹೆಸರು : (1) INDENT39272/CALL-4 (2) INDENT39273/CALL-4
(1) Downloading of document through e-proc portal: 17.06.2022 to 24.06.2022 up to 16.30 Hrs. (2) Time & date of Pre-Bid Conference: 18.06.2022 Time : 11.30 Hrs. Venue: O/o. Executive Engineer, Rural Drinking Water & Sanitation Division Po: Habbuwada, Karwar- Uttara Kannada Dist. (3) Last Date & Time for Receipt of Bids: **24.06.2022** Time : 16.30 Hrs. (4) Date & Time of Technical Bid Opening: **27.06.2022** Time : 17:00 Hrs. (5) Date & Time of Financial Bid Opening: Will be informed technically qualified bidders after approval of Technical Bid.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಾರವಾರ (ಉ.ಕ.ಜಿಲ್ಲೆ)
DIPR/ADK/MCA/87/ 22-23 dt.16.06.2022

ಕರ್ನಾಟಕ ಸರಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ
ಟೆ.ಪ್ರ.ಸಂ: ಕಾಇಂ/ಗ್ರಾಕುನೀ&ನೈವಿಉ/ಟೆಂಡರ್ ನಂ.09/2022-23/ಎಇಂ-2/302 ದಿನಾಂಕ: 13.06.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ "ಜಲ್ ಜೀವನ್ ಮಿಷನ್" ಯೋಜನೆಯಡಿಯಲ್ಲಿ ಮನೆ ಮನೆಗೆ ನಳ್ಳಿ ಸಂಪರ್ಕದ ಮೂಲಕ ನೀರು ಸರಬರಾಜು ಸಂಬಂಧಿಸಿದಂತೆ ಅಂದಾಜು ಮೊತ್ತ ರೂ. 216.00 ರಿಂದ 458.00 ಲಕ್ಷಗಳ 09 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರನ್ನು **(Standard Tender Documents for Procurement of Works)** ನ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು **Government of Karnataka e-procurement portal website https://www.eproc.karnataka.gov.in** ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು. (ಈಗಾಗಲೇ ಈ ವಿಭಾಗ ವ್ಯಾಪ್ತಿಯಲ್ಲಿ ಜೆ.ಜೆ.ಎಂ. ಯೋಜನೆಯಡಿಯಲ್ಲಿ ವಹಿಸಿಕೊಂಡ ಕಾಮಗಾರಿಗಳನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸದ ಗುತ್ತಿಗೆದಾರರ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.
(1) ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ **ದಿನಾಂಕ: 13.06.2022 ರಿಂದ 22.06.2022ರ 4.00 (PM) ಗಂಟೆಯವರೆಗೆ** (2) ಟೆಕ್ನಿಕಲ್ ಬಿಡ್ಡುಗಳನ್ನು ತೆರೆಯುವ **ದಿನಾಂಕ: 23.06.2022 ರ 4.30 (PM) ಗಂಟೆಯ ನಂತರ.** (3) ಆರ್ಥಿಕ ಬಿಡ್ಡುಗಳನ್ನು ತೆರೆಯುವ **ದಿನಾಂಕ: 24.06.2022 ರ 11.00 (AM) ಗಂಟೆಯ ನಂತರ.**
ಇನ್ನಿತರೆ ನಿಬಂಧನೆಗಳು, ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್‌ಸೈಟ್: **https://www.eproc.karnataka.gov.in** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿಯಿಂದ ಪಡೆಯಬಹುದಾಗಿದೆ. **E-proc portal help desk: 080-22371090/22373788, Hphelpdesk.blr@intarvo.com**
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ
ವಾಸಾಇ/ಸನಿಉ/ಎಂಸಿಎ/177/ 22-23 ದಿ: 15.06.2022

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ) ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
No: EE/RWSS/Dvn/SMG/JE/JJM/E-Proc/2021-22/591 Date : 16.06.2022
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾ-ರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಇಂಡೆಂಟ್ ಸಂಖ್ಯೆ : (1) **41028** (2) **41040** (3) **41042** (4) **41049** (5) **41052** (6) **41048** (7) **41024** (8) **41031** (9) **41038** (10) **41037** (11) **41025** (12) **41026** (13) **41027**
ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು https: //www.eproc.karna-taka.gov.in ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.
ಟೆಂಡರ್‌ನ ಕೆಲವು ಷರತ್ತುಗಳು
(1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **29.06.2022ರ ಸಂಜೆ 5.30.** (2) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **01.07.2022ರ ಬೆಳಿಗ್ಗೆ 11.30.** (3) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **03.07.2022ರ ಬೆಳಿಗ್ಗೆ 11.30.** (4) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **ದ್ವಿಲಕೋಟೆ 3 ತಿಂಗಳು (90 ದಿನಗಳು).**
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ. ಮತ್ತು ನೈ. ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ./ಶಿ/ನಂ.92-06 ಝೇಂಕಾರ್/2022-23

IN THE COURT OF THE XCI ADDL. CITY CIVIL, SESSIONS AND SPECIAL JUDGE, BENGALURU
(K.P.I.D.F.E Act) (CCH:92)
Misc. No. 1073/2019
BETWEEN
The Competent Authority, For Injaz International & Associated group of companies 3rd Floor, Podium Block, V.V. Towers, Dr. B.R. Ambedkar Veedi, Bengaluru - 560 001.
....Petitioner
AND
M/s Injaz International & Associated group of companies and others
....Respondent
NOTICE to the Respondent No. 3:
M/s Biodiversity Conservation (India) Private Ltd, A Company incorporated under the provisions of Companies Act, 1956 having its registered office at R.K. Chambers, Ground Floor, No. 37-1/1, Aga Abbas Ali Road, Bengaluru-560 042.
Represented by its authorized signatory Mr. Selvaraj. B, AGM - Asset Management
.... Respondent No. 3
Whereas the Petitioner has filed the above Petitions under Section 5(2) of the KPIDFE Act 2004 against Respondent.
The Respondent No. 3 is hereby issued show cause notice under Section 12(1) of KPIDFE Act, 2004 to appear in court of the XCI Additional, City Civil and Sessions Judge (CCH-92) at Bengaluru in person or by a pleader duly instructed and able to answer all material questions relating to above Petitions on **04.07.2022 at 11 'O' Clock** in the forenoon to answer the petition.
Take notice that in default of your appearance on the date above mentioned the Misc. Petition will be heard and determined in your absence.
Given under my hand and seal of the court on this day of 09.06.2022.
By Order of the Court
Sd/- **Assistant Registrar**
City Civil Court, Bangalore.
Venkatesh P. Dalwai
Special Public Prosecutor
Under KPID Act & BUDS Act.
DIPR/CP/BCPL/939/2022-23

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ಇಲಾಖೆ ಹುಬ್ಬಳ್ಳಿ.
ಸಂ:ವಾಕರಸಾಸಂ:ಕಾನಿಅ:ನಕ್ಷೆ:ಹು:229:2022-23 ದಿ: 16-06-2022
ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ಸಂಖ್ಯೆ: 4&5/2022-23
e-proc ಪದ್ಧತಿಯಲ್ಲಿ ಕೆ.ಪಿ.ಡಬ್ಲೂ.ಡಿ/ಸಿ.ಪಿ.ಡಬ್ಲೂ.ಡಿ/ಎಂ.ಇ.ಎಸ್ ನಲ್ಲಿ ನೋಂದಾಯಿತ ಅರ್ಹತೆಯುಳ್ಳ ಸಿವಿಲ್ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ **e-proc** ಸ್ಟ್ಯಾಂಡರ್ಡ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಈ ಕೆಳಕಂಡ ಕಾಮಗಾರಿಗಳಿಗೆ **e-proc** ನಲ್ಲಿ ಬಿಡುಗಡೆಯಾಗುವ ದಿನಾಂಕ: 21/06/2022 ರ ನಂತರ ಅರ್ಹ ದರ್ಜೆ 1 ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **http://eproc.karnataka.gov.in** ನಲ್ಲಿ ಪ್ರಕಟಿಸಿದಂತೆ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು.
ಟೆಂಡರನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ : 04/07/2022

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರಿಗೆ ಇಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)	ಕೆಲಸ ಪೂರ್ಣಗೊಳಿಸಲು ಕಾಲಾವಧಿ. (ಮಳೆಗಾಲ ಹೊರತುಪಡಿಸಿ)
1	ಹಾವೇರಿ ಜಿಲ್ಲೆ ಶಿಗ್ಗಾಂವಿ ಪಟ್ಟಣದಲ್ಲಿ ನೂತನ ಬಸ್ ಘಟಕವನ್ನು ಉಪ ಕೆಲಸಗಳೊಂದಿಗೆ ನಿರ್ಮಿಸುವುದು. (04/22-23)	700=00	10,50,000/-	9 ತಿಂಗಳು
2	ಹಾವೇರಿ ಜಿಲ್ಲೆ ಶಿಗ್ಗಾಂವಿ ಪಟ್ಟಣದಲ್ಲಿ ಚಾಲನಾ ಮತ್ತು ಮೆಕ್ಯಾನಿಕ್ ತರಬೇತಿ ಕೇಂದ್ರವನ್ನು ನಿರ್ಮಿಸುವುದು. (05/22-23)	1740=00	17,40,000/-	12 ತಿಂಗಳು

ಹೆಚ್ಚಿನ ವಿವರಗಳಿಗೆ ಸಹಾಯವಾಣಿ (help desk) **91-8046010000, 91-8068948777, 0836-2332383** ಗೆ ಸಂಪರ್ಕಿಸಬಹುದಾಗಿದೆ.
ಸೂಚನೆ: ಈ ಹಿಂದೆ ಮೇಲೆ ತಿಳಿಸಿರುವ 2 ಕಾಮಗಾರಿಗಳಿಗೆ ಪತ್ರಿಕಾ ಪ್ರಕಟಣೆಯನ್ನು ದಿ:19.02.2022 ರಂದು ಉಲ್ಲೇಖಿತ ಪತ್ರ ಸಂ: ವಾಕರಸಾಸಂ:ಕಾನಿಅ:ನಕ್ಷೆ:ಹು:951:2021-22 ದಿನಾಂಕ: 16.02.2022 ರಡಿಯಲ್ಲಿ ವಿಜಯವಾಣಿ ಹಾಗು ದ ಹಿಂದೂ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು, ಪ್ರಸ್ತುತ ಹಳೆಯ 2 ಟೆಂಡರ್‌ಗಳನ್ನು ಕಾರಣಾಂತರಗಳಿಂದ ರದ್ದುಪಡಿಸಲಾಗಿದೆ ಎಂದು ಈ ಮೂಲಕ ತಿಳಿಸಲಾಗಿದೆ.
ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾಸಂಸ್ಥೆ, ಕಾಮಗಾರಿ ಇಲಾಖೆ,
ಕೇಂದ್ರ ಕಛೇರಿ, ಹುಬ್ಬಳ್ಳಿ.
ವಾ.ಸಾ.ಇ/ಧಾ/225/2022-23/ದೇಶಪಾಂಡೆಪಬ್ಲಿಸಿಟಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ, ದಾಸರಹಳ್ಳಿ ವಲಯ, #2ನೇ ಮತ್ತು 4ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, 3ನೇ ಬ್ಲಾಕ್ ಹೆಚ್‌ಎಂಟಿ ಬಡಾವಣೆ, ಬಿಡಬ್ಲ್ಯೂಎಸ್‌ಎಸ್‌ಬಿ ವಾಟರ್ ಟ್ಯಾಂಕರ್ ಹತ್ತಿರ, ನಾಗಸಂದ್ರ (ಪೋ) ಬೆಂಗಳೂರು - 560 073.
ಸಂಖ್ಯೆ: ಬೃ.ಬೆಂ.ಮ.ಪಾ/ಕಾ.ಅ/ದಾ.ವಿ/ಟೆಂಪ್ರ/20/2022-23 ದಿನಾಂಕ: 15.06.2022
ಟೆಂಡರ್ ಮುಂದೂಡಿಕೆ ಪ್ರಕಟಣೆ
ವಿಷಯ: ಟೆಂಡರ್ ಪ್ರಕಟಣೆಯನ್ನು ಮುಂದೂಡುವ ಬಗ್ಗೆ
ಉಲ್ಲೇಖ: 1. ಈ ಕಚೇರಿಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ: ಬೃಬೆಂಮಪಾ/ಕಾ.ಅ/ದಾ.ವಿ/ಟೆಂ.ಪ್ರೊ/20/2021-22, ದಿನಾಂಕ: 24.01.2022
ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ ರೀತ್ಯಾ ಟೆಂಡರ್ ಕರೆಯಲಾಗಿದ್ದು, ಐಟಂ ಸಂಖ್ಯೆ: 27ನ್ನು ತಾಂತ್ರಿಕ ಕಾರಣಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರೀಬಿಡ್ ಬಿಡ್ಡನ್ನು ಟೆಂಡರನ್ನು ಸಲ್ಲಿಸುವ ಅಂತಿಮ ದಿನಾಂಕ ಹಾಗೂ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡನ್ನು ಮುಂದೂಡಿದ್ದು ಈ ಕೆಳಕಂಡಂತಿದೆ.
ಮಾರ್ಪಾಡಾದ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **22.06.2022**ರ ಬೆಳಿಗ್ಗೆ **11:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ದಾಸರಹಳ್ಳಿ ವಲಯ, ಇಲ್ಲಿ ನಡೆಸಲಾಗುವುದು. (2) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **28.06.2022**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ ಬೃ.ಬೆಂ.ಮ.ಪಾಲಿಕೆ ಇಲ್ಲಿ ದಿನಾಂಕ **29.06.2022** ರ ಸಂಜೆ **4:30** ಗಂಟೆಗೆ ಅಥವಾ ನಂತರ ತೆರೆಯಲಾಗುವುದು. (4) ಆರ್ಥಿಕ ಬಿಡ್‌ಗಳನ್ನು ದಿನಾಂಕ: **30.06.2022**ರ ಸಂಜೆ **4:30** ಗಂಟೆಗೆ ಅಥವಾ ನಂತರ ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ, ಬೃ.ಬೆಂ.ಮ.ಪಾಲಿಕೆ ಇಲ್ಲಿ ತೆರೆಯಲಾಗುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/2022-23/14028-32 ದಿನಾಂಕ: 15.06.2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರಮೆಂಟ ಮುಖಾಂತರ)
ಪಿ.ಸಿ-1190: ಗು.ವಿ.ಸ.ಕಂ.ನಿ ತಾಂತ್ರಿಕ ನಿರ್ದಿಷ್ಟತೆಯಂತೆ ವಿವಿಧ ಬಗೆಯ ಕಂಬಗಳನ್ನು ತಯಾರು ಮಾಡಿ ಬಳ್ಳಾರಿ ಗ್ರಾಮೀಣ ವಿಭಾಗಕ್ಕೆ ಸರಬರಾಜು ಮಾಡುವದು. **ಪಿ.ಸಿ-1191 :** ಟೈಪ್-2 ಅನ್‌ಇನ್‌ಹೆಬಿಟೆಡ್ ವಿದ್ಯುತ್ ಪರಿವರ್ತಕದ ತೈಲವನ್ನು ಗು.ವಿ.ಸ.ಕಂ.ನಿ ತಾಂತ್ರಿಕ ನಿರ್ದಿಷ್ಟತೆಯಂತೆ ತಯಾರು ಮಾಡಿ ಸರಬರಾಜು ಮಾಡುವದು.
ದಿನಾಂಕ: ಇ-ಪ್ರೊಕ್ಯೂರಮೆಂಟನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **17.06.2022** ರಂದು ಅಥವಾ ನಂತರ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **27.06.2022** ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ: **29.06.2022 / 30.06.2022.** ಟೆಂಡರ್ ಮೊತ್ತ: ರೂ. **539.98** ಲಕ್ಷ ಮತ್ತು ರೂ. **683.06** ಲಕ್ಷ ಕ್ರಮವಾಗಿ. **ಬಿಡ್ಡುದಾರರ ಅರ್ಹತೆ ವಿವರ:** ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ,: ಕಾರ್ಯನಿರ್ವಾಹಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ-585 102. ಮೊ.ಸಂ: 9448359006: ಅಂತರ್ಜಾಲ ತಾಣದ ವಿಳಾಸ: www.eproc.karnataka.gov.in.
ಸಹಿ/- ಅಧೀಕ್ಷಕ ಅಭಿಯಂತರರು (ವಿ),
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/265/ಎಂ.ಸಿ.&ಎ/2022-23

राष्ट्रीय फैशन प्रौद्योगिकी संस्थान
NATIONAL INSTITUTE OF FASHION TECHNOLOGY
(Ministry of Textiles, Govt. of India)
NIFT, HSR Layout, Bengaluru - 560 102. Ph. 080 2255 2550 – 55
TENDER NOTIFICATION – 01/2022-23 dated 17.06.2022
NIFT Bengaluru invites sealed tenders under two bid systems from the reputed service providers for the following Services:

S. No.	Name of the Service	Last date of submission
1	Canteen Service	04.07.2022
2	Security Service	07.07.2022
3	Housekeeping Service	08.07.2022
4	Manpower Service	12.07.2022

For tender details, kindly visit to NIFT Bengaluru website: http://www.nift.ac.in/bengaluru/tenders
Director

ವಿಮಾನ ನಿಲ್ದಾಣದಲ್ಲಿ ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲೆ ನಿಗಾ ● ಆರೋಗ್ಯ ಇಲಾಖೆ ಸೂಚನೆ

ಕೋವಿಡ್: ಹೊಸ ತಳಿ ಪತ್ತೆಗಾಗಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಹೊಸ ತಳಿ ಪತ್ತೆಗಾಗಿ, ವಿಮಾನ ನಿಲ್ದಾಣದಲ್ಲಿ ಸೋಂಕು ದೃಢಪಟ್ಟವರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ (ಜಿನೋಮಿಕ್ ಸಿಕ್ವೆನ್ಸಿಸ್) ಪರೀಕ್ಷೆಗೆ ಒಳಪಡಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ಇಲಾಖೆಯ ಆಯುಕ್ತ ಡಿ. ರಂದೀಪ್ ಪರಿಷ್ಕೃತ ಮಾರ್ಗಸೂಚಿ ಹೊರಡಿಸಿದ್ದಾರೆ. 'ಕೋವಿಡ್ ಮೂರನೇ ಅಲೆಯ ಅವಧಿಯಲ್ಲಿ ಕೈಗೊಂಡ ಮುನ್ನೆಚ್ಚರಿಕಾ ಕ್ರಮಗಳಿಂದ ರೋಗದ ತೀವ್ರತೆ ಹೆಚ್ಚದಂತೆ ತಡೆಯಲು ಸಾಧ್ಯವಾಯಿತು. ಈಗ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ವೈರಾಣುವಿನ ರೂಪಾಂತರಿ ಪತ್ತೆ ಹಚ್ಚಿ, ಅದರ ಸ್ವರೂಪ ಹಾಗೂ ಪರಿಣಾಮದ ಬಗ್ಗೆ ಅಧ್ಯಯನ ನಡೆಸಿ, ನಿಗಾ ಇಡಬೇಕಾಗುತ್ತದೆ. ಆದ್ದರಿಂದ ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ ಪರೀಕ್ಷೆಗೆ ಆದ್ಯತೆ ನೀಡಬೇಕು' ಎಂದು ಹೇಳಿದ್ದಾರೆ.

'ವಿಮಾನ ನಿಲ್ದಾಣಗಳಲ್ಲಿ ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲೆ ನಿಗಾ ಇರಿಸಬೇಕು. ಹೊಸ ತಳಿ ಪತ್ತೆಗಾಗಿ ವಿದೇಶಗಳಿಂದ ಬರುವ ಶೇ 2 ರಷ್ಟು ಪ್ರಯಾಣಿಕರನ್ನು ಸಾಮೂಹಿಕ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು. ವರದಿಯಲ್ಲಿ ಸೋಂಕು ದೃಢಪಟ್ಟರೆ, ಆ ಮಾದರಿಯನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ ಪರೀಕ್ಷೆಗೆ ಕಳುಹಿಸಬೇಕು' ಎಂದು ಸೂಚಿಸಿದ್ದಾರೆ.

'ಶೀತಜ್ವರ ಮಾದರಿ ಅನಾರೋಗ್ಯ ಸಮಸ್ಯೆ (ಐಎಲ್ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಈ ಸಮಸ್ಯೆ ಇರುವವರ ಮೇಲೆ ನಿಗಾ ಇರಿಸಬೇಕು. ಈ ಲಕ್ಷಣಗಳನ್ನು ಹೊಂದಿರುವ ಪ್ರತಿ 20 ಪ್ರಕರಣಗಳಲ್ಲಿ ಒಬ್ಬರ ಮಾದರಿಯನ್ನು ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸಬೇಕು' ಎಂದು ಹೇಳಿದ್ದಾರೆ.

ಬೂಸ್ಟರ್ ಡೋಸ್‌ಗೆ 6 ತಿಂಗಳ ಅಂತರ? (ದೆಹಲಿ ವರದಿ): ಕೋವಿಡ್–19ರ ವಿರುದ್ಧ ನೀಡಲಾಗುತ್ತಿರುವ ಲಸಿಕೆಯ ಎರಡನೇ ಡೋಸ್ ಮತ್ತು ಬೂಸ್ಟರ್ ಡೋಸ್ ನಡುವಿನ ಅಂತರವನ್ನು ಒಂಬತ್ತು ತಿಂಗಳಿಂದ ಆರು ತಿಂಗಳಿಗೆ ಇಳಿಸಲು ಕೋವಿಡ್–19ರ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯ (ಎನ್‌ಟಿಎಜಿಐ) ಸದಸ್ಯರು ಒಪ್ಪಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಸಂಬಂಧ ಶೀಘ್ರದಲ್ಲೇ ಆರೋಗ್ಯ ಸಚಿವಾಲಯಕ್ಕೆ ಎನ್‌ಟಿಎಜಿಐ ಶಿಫಾರಸು ಮಾಡಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ 4,255 ಪ್ರಕರಣ ದೃಢ



ಮುಂಬೈ (ಪಿಟಿಐ): ಮುಂಬೈನಲ್ಲಿ 2,366 ಜನರೂ ಸೇರಿದಂತೆ ಮಹಾರಾಷ್ಟ್ರದಲ್ಲಿ ಗುರುವಾರ 4,359 ಮಂದಿಯಲ್ಲಿ ಕೋವಿಡ್–19ರ ಹೊಸ ಪ್ರಕರಣಗಳು ದೃಢಪಟ್ಟಿವೆ. ಇದು ಮಹಾರಾಷ್ಟ್ರದಲ್ಲಿ ಈ ವರ್ಷದ ಫೆಬ್ರುವರಿ 12ರ ನಂತರ ದಾಖಲಾದ ಅತಿ ಹೆಚ್ಚು ಪ್ರಕರಣಗಳಾಗಿವೆ.

ಸೋಂಕಿನಿಂದ ಗುರುವಾರ ರಾಜ್ಯದಲ್ಲಿ ಮೂವರು ಮೃತಪಟ್ಟಿದ್ದಾರೆ. ಈ ಪೈಕಿ ಇಬ್ಬರು ಮುಂಬೈನವರು. ರಾಜ್ಯದಲ್ಲಿ ಬುಧವಾರ 4,024 ಜನರಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗಿತ್ತು. ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 20,634ಕ್ಕೆ ಏರಿಕೆಯಾಗಿದೆ ಎಂದು ರಾಜ್ಯ ಆರೋಗ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

ದೆಹಲಿ ಮೆಟ್ರೊ: ಕೋವಿಡ್ ನಿಯಮ ಪಾಲನೆಗೆ ಸಿಬ್ಬಂದಿ ನಿಯೋಜನೆ ಕೊರೊನಾ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವ ನಡುವೆಯೇ, ಮೆಟ್ರೊ ಪ್ರಯಾಣಿಕರು ಸಾಮಾಜಿಕ ಅಂತರ, ಮುಖಕ್ಕೆ ಮಾಸ್ಕ್ ಸೇರಿದಂತೆ ಇನ್ನಿತರ ಕೊರೊನಾ ನಿಯಮಗಳನ್ನು ಪಾಲಿಸುವಂತೆ ಕ್ರಮ ಕೈಗೊಳ್ಳಲು ದೆಹಲಿ ಮೆಟ್ರೊ ರೈಲು ಕಾರ್ಪೊರೇಷನ್(ಡಿಎಂಆರ್‌ಸಿ) ಸಿಬ್ಬಂದಿ ನಿಯೋಜನೆ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿಯಲ್ಲಿ ಕಳೆದ 10 ದಿನಗಳಲ್ಲಿ ದೆಹಲಿಯಲ್ಲಿ 7,100 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಜೂನ್ 7ರಂದು 1.91ರಷ್ಟಿದ್ದ ಪಾಸಿಟಿವಿಟಿ ದರವು 7.01ಕ್ಕೆ ಏರಿದೆ. ಅಲ್ಲದೆ, ಬುಧವಾರ ಒಂದೇ ದಿನ 1375 ಮಂದಿಗೆ ಕೋವಿಡ್ ದೃಢಪಟ್ಟಿದ್ದು, ಕಳೆದೊಂದು ತಿಂಗಳಲ್ಲಿ ದಾಖಲಾದ ದೈನಂದಿನ ಗರಿಷ್ಠ ಸಂಖ್ಯೆ ಇದು. ಈ ಹಿನ್ನೆಲೆಯಲ್ಲಿ ಜನರು ಕೋವಿಡ್ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ವೈದ್ಯರು ಹಾಗೂ ಆರೋಗ್ಯ ತಜ್ಞರು ಕಟ್ಟೆಚ್ಚರ ನೀಡಿದ್ದಾರೆ.

ಮಕ್ಕಳ ಸೆರೋ ಸಮೀಕ್ಷೆ ಪೂರ್ಣ

ಬೆಂಗಳೂರು: ಮಕ್ಕಳ ಮೇಲೆ ಕೊರೊನಾ ಸೋಂಕಿನ ತೀವ್ರತೆ ಹಾಗೂ ಪರಿಣಾಮದ ಬಗ್ಗೆ ತಿಳಿಯಲು ಆರೋಗ್ಯ ಇಲಾಖೆ ಹಮ್ಮಿಕೊಂಡಿದ್ದ ಸೆರೋ ಸಮೀಕ್ಷೆ ಪೂರ್ಣಗೊಂಡಿದೆ. ಈ ಸಮೀಕ್ಷೆಗೆ 6 ರಿಂದ 14 ವರ್ಷದ 5,360 ಮಕ್ಕಳ ಗಂಟಲ ದ್ರವದ ಮಾದರಿಗಳನ್ನು ಸಂಗ್ರಹಿಸಲಾಗಿದೆ.

ಸಮುದಾಯ ಮಟ್ಟದಲ್ಲಿ ರೋಗನಿರೋಧಕ ಶಕ್ತಿ ಗುರುತಿಸುವುದು ಸಮೀಕ್ಷೆಯ ಮುಖ್ಯ ಉದ್ದೇಶ. ಆರೋಗ್ಯ ಇಲಾಖೆಯು 5,072 ಮಂದಿಯನ್ನು ಸಮೀಕ್ಷೆಗೆ ಒಳಪಡಿಸುವ ಗುರಿ ಹಾಕಿಕೊಂಡಿತ್ತು. ಶೇ 106 ರಷ್ಟು ಗುರಿ ಸಾಧಿಸಲಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳ ಮಕ್ಕಳನ್ನೂ ಸಮೀಕ್ಷೆಗೆ ಒಳಪಡಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಗರಿಷ್ಠ (759) ಮಕ್ಕಳು ಹಾಗೂ ಕೊಡಗಿನಲ್ಲಿ ಕನಿಷ್ಠ (40) ಮಕ್ಕಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

'ಮಕ್ಕಳ ಮೇಲೆ ನಡೆಸಲಾದ ಸೆರೋ ಸಮೀಕ್ಷೆ ಪೂರ್ಣಗೊಂಡಿದೆ. ಕೊರೊನಾ ಸೋಂಕು ತಗುಲದಂತೆ ಮುಖಗವಸು ಧರಿಸುವಿಕೆ ಸೇರಿದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು. ಪಾಲಕರು ಮಕ್ಕಳಿಗೆ ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಬೇಕು' ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

ಕೋವಿಡ್ ಸಾವಿನ ಸಂಖ್ಯೆಯಲ್ಲಿ ಹೆಚ್ಚಳ

ಜಿನೇವಾ (ಎಪಿ): ಜಗತ್ತಿನಲ್ಲಿ ಕಳೆದ ಐದು ವಾರಗಳಿಂದ ಇಳಿಕೆಯಾಗಿದ್ದ ಕೋವಿಡ್ ಸಾವಿನ ಪ್ರಮಾಣ ಇದೀಗ ಮತ್ತೆ ಏರಿಕೆಯಾಗಿದೆ, ಅದರ ಪ್ರಮಾಣ ಶೇ 4ರಷ್ಟಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ತಿಳಿಸಿದೆ. 'ಕಳೆದ ವಾರ 8,700 ಕೋವಿಡ್ ಸೋಂಕಿತರು ಸಾವಿಗೀಡಾಗಿದ್ದಾರೆ. ಸಾವಿನ ಪ್ರಮಾಣವು ಅಮೆರಿಕದಲ್ಲಿ ಶೇಕಡ 21ರಷ್ಟು ಹಾಗೂ ಪಶ್ಚಿಮ ಪೆಸಿಫಿಕ್‌ನಲ್ಲಿ ಶೇಕಡ 17ರಷ್ಟು ಹೆಚ್ಚಳವಾಗಿದೆ' ಎಂದು ಡಬ್ಲ್ಯುಎಚ್‌ಒದ ವಾರದ ವರದಿಯಲ್ಲಿ ತಿಳಿಸಲಾಗಿದೆ.

ಕೋವಿಡ್: ಸಕ್ರಿಯ ಪ್ರಕರಣ 4 ಸಾವಿರಕ್ಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಬೆಂಗಳೂರಿನಲ್ಲಿ 791 ಸೇರಿದಂತೆ ರಾಜ್ಯದಲ್ಲಿ 833 ಮಂದಿ ಹೊಸದಾಗಿ ಕೋವಿಡ್ ಪೀಡಿತರಾಗಿದ್ದಾರೆ. ಇದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 4 ಸಾವಿರದ ಗಡಿ (4,371) ದಾಟಿದೆ.

ಇಷ್ಟು ಸಂಖ್ಯೆಯಲ್ಲಿ ದೈನಂದಿನ ಪ್ರಕರಣಗಳು ಮೂರೂವರೆ ತಿಂಗಳ ಹಿಂದೆ ವರದಿಯಾಗಿದ್ದವು. ಒಂದು ದಿನದ ಅವಧಿಯಲ್ಲಿ 23,990 ಮಂದಿಗೆ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 3.47 ರಷ್ಟು ವರದಿಯಾಗಿದೆ. ಸೋಂಕಿತರಲ್ಲಿ ಬೆಳಗಾವಿಯ 35 ವರ್ಷದ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಅವರಿಗೆ ಕ್ಷಯ ರೋಗವಿತ್ತು.

'ಪಕೋಡ ಮಾರಲು ಹೇಳಿದ್ದ ಮೋದಿಗೆ ಪದವೀಧರರಿಂದ ಪಾಠ'

ಪ್ರಜಾವಾಣಿ ವಾರ್ತೆ

ಮೈಸೂರು: 'ಉದ್ಯೋಗ ಸೃಷ್ಟಿಸದೇ ಪಕೋಡ ಮಾರಲು ಹೇಳಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪದವೀಧರರು ಸೋಲಿನ ಉಡುಗೊರೆ ನೀಡಿದ್ದಾರೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ವ್ಯಂಗ್ಯವಾಡಿದರು.

'ದಕ್ಷಿಣ ಪದವೀಧರರ ಕ್ಷೇತ್ರದ ಪ್ರಜ್ಞಾವಂತ ಮತದಾರರು ಬಿಜೆಪಿಯ ಭ್ರಷ್ಟಾಚಾರ, ದುರಾಡಳಿತಕ್ಕೆ ತಕ್ಕ ಪಾಠ ಕಲಿಸಿದ್ದಾರೆ. ಚುನಾವಣೆಯ ಗೆಲುವು ಮುಂಬರುವ ವಿಧಾನಸಭೆ- ಲೋಕಸಭಾ ಚುನಾವಣೆಗೆ ದಿಕ್ಸೂಚಿಯಾಗಲಿದೆ' ಎಂದು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು ಎಂಟು ತಿಂಗಳ ಹಿಂದೆಯೇ ಕಾರ್ಯಕರ್ತರೊಂದಿಗೆ ಸಭೆ ನಡೆಸಿ ಅಭ್ಯರ್ಥಿ ಘೋಷಿಸಿದ್ದರು. ಪ್ರತಿ ಗ್ರಾಮಕ್ಕೂ ಕಾರ್ಯಕರ್ತರು ತೆರಳಿ ಮತದಾರರನ್ನು ಮನವೊಲಿಸಿದ್ದರು. ಸಂಘಟಿತ ಹೋರಾಟಕ್ಕೆ ಗೆಲುವು ಸಿಕ್ಕಿದೆ' ಎಂದು ಸಂತಸ ವ್ಯಕ್ತಪಡಿಸಿದರು.

'ರಾಹುಲ್ ಗಾಂಧಿ ಬಿಜೆಪಿಗರಿಗೆ ಸಿಂಹಸ್ವಪ್ನವಾಗಿದ್ದಾರೆ. ಭಾರತ್ ಜೋಡೋ ಪಾದಯಾತ್ರೆ ಆರಂಭಕ್ಕೆ ಬಿಜೆಪಿ ಹೆದರಿ ಇ.ಡಿ ಮೂಲಕ ದ್ವೇಷ ರಾಜಕಾರಣ ನಡೆಸುತ್ತಿದೆ. ದೆಹಲಿಯಲ್ಲಿ ಪ್ರತಿಭಟಿಸುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಪೊಲೀಸ್ ದೌರ್ಜನ್ಯ ನಡೆದಿರುವುದು ಖಂಡನೀಯ. ದೇಶವೇ ಗೂಂಡಾರಾಜ್ಯವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಪ್ರತಿಭಟನೆಯಿಂದ ಕೊರೊನಾ ಸೋಂಕು ಹೆಚ್ಚಿದರೆ ಕಾಂಗ್ರೆಸ್ ಹೊಣೆಯೆಂದು ಸಚಿವ ಡಾ.ಸುಧಾಕರ್ ಹೇಳಿದ್ದಾರೆ. ಮೈಸೂರಿನಲ್ಲಿ 16 ಸಾವಿರ ಜನರನ್ನು ಸೇರಿಸಿ ಯೋಗ ಮಾಡುತ್ತಿರುವ ಪ್ರಧಾನಿ ಮೋದಿ ಅವರಿಂದ ಕೊರೊನಾ ಹೆಚ್ಚಾಗುವುದಿಲ್ಲವೇ? ಸಚಿವರಿಗೆ ಸಾಮಾನ್ಯ ಜ್ಞಾನವಿಲ್ಲ' ಎಂದು ಟೀಕಿಸಿದರು.

ಕೇಂದ್ರದಿಂದ ₹9,675 ಕೋಟಿ ನೆರವು

ಭದ್ರಾ ಮೇಲ್ದಂಡೆಗೆ ರಾಷ್ಟ್ರೀಯ ಯೋಜನೆಯ ಮಾನ್ಯತೆ ಶೀಘ್ರ: ಕಾರಜೋಳ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಯೋಜನೆ ಎಂದು ಪರಿಗಣಿಸಲು ಕೇಂದ್ರ ಹಣಕಾಸು ಸಚಿವಾಲಯ ಒಪ್ಪಿಗೆ ನೀಡಿದೆ. ಈ ಯೋಜನೆಗೆ ಕೇಂದ್ರ ಸರ್ಕಾರವು ₹9,675 ಕೋಟಿ ಮೊತ್ತವನ್ನು ನೀಡಲಿದೆ' ಎಂದು ಕರ್ನಾಟಕದ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ಇಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಭೇಟಿ ಮಾಡಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಈ ಯೋಜನೆಗೆ ರಾಷ್ಟ್ರೀಯ ಯೋಜನೆಯ ಮಾನ್ಯತೆ ಸಿಗಲು ಕೇಂದ್ರ ಸಚಿವ ಸಂಪುಟದ ಅನುಮೋದನೆಯಷ್ಟೇ ಬಾಕಿ ಇದೆ. ಅದು ಕೆಲವೇ ದಿನಗಳಲ್ಲಿ ಸಿಗುವ ನಿರೀಕ್ಷೆ ಇದೆ' ಎಂದು ಅವರು ಹೇಳಿದರು.

'ಭದ್ರಾ ಮೇಲ್ದಂಡೆ ಯೋಜನೆಯಲ್ಲಿ 29.90 ಟಿಎಂಸಿ ಅಡಿ ನೀರು (ತುಂಗಾ ನದಿಯಿಂದ 17.40 ಟಿಎಂಸಿ ಅಡಿ ಹಾಗೂ ಭದ್ರಾ ಜಲಾಶಯದಿಂದ 12.50 ಟಿಎಂಸಿ ಅಡಿ) ಬಳಕೆ ಮಾಡಲಾಗುತ್ತದೆ. ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳ 2,25,515 ಹೆಕ್ಟೇರ್ (5,57,022 ಎಕರೆ) ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲು ಹಾಗೂ ಈ ಜಿಲ್ಲೆಗಳ 367 ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇಕಡಾ 50 ರಷ್ಟನ್ನು ತುಂಬಿಸುವ ಯೋಜನೆ' ಎಂದು ಅವರು ಮಾಹಿತಿ ನೀಡಿದರು.

'ಈ ಯೋಜನೆಗೆ ತಗಲುವ ಒಟ್ಟಾರೆ ವೆಚ್ಚ ₹21,473.67 ಕೋಟಿ. ರಾಷ್ಟ್ರೀಯ ಯೋಜನೆಯಾಗಿ ಪರಿಗಣಿತವಾದ ನಂತರ ಕೇಂದ್ರ ಸರ್ಕಾರ ಈ ಯೋಜನೆಗೆ ₹9,675.29 ಕೋಟಿ ನೀಡಲಿದೆ' ಎಂದರು.

'ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ನಿರ್ಮಲಾ ಸೀತಾರಾಮನ್ ಒಪ್ಪಿಗೆ ಸೂಚಿಸಿದ್ದಾರೆ. ಇದು ಕರ್ನಾಟಕದ ಮೊದಲನೆಯ ರಾಷ್ಟ್ರೀಯ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ' ಎಂದರು.

'ಮಹದಾಯಿ ಯೋಜನೆಯ ಕುರಿತು ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಯೋಜನೆಗೆ ಅನುಮೋದನೆ ನೀಡುವ ಕುರಿತು ಸಚಿವರು ಸಕಾರಾತ್ಮಕ ಪ್ರತಿಕ್ರಿಯೆ ನೀಡಿದರು. ಕೂಡಲೇ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದರು' ಎಂದು ಕಾರಜೋಳ ಹೇಳಿದರು.

'ಮೇಕೆದಾಟು ಯೋಜನೆಯ ಕುರಿತು ಪ್ರಸ್ತಾಪಿಸಲಾಯಿತು. ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಇದೇ 23ರಂದು ಈ ವಿಷಯದ ಬಗ್ಗೆ ಚರ್ಚೆಯಾಗಲಿದೆ. ಅಂದಿನ ಸಭೆಯಲ್ಲಿ ಯೋಜನೆಗೆ ಅನುಮೋದನೆ ಸಿಗಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

'ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಕಾಮಗಾರಿಗಳಿಗೆ ₹13 ಸಾವಿರ ಕೋಟಿಯನ್ನು ಈಗಾಗಲೇ ವೆಚ್ಚ ಮಾಡಲಾಗಿದೆ. ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿ ಕೃಷ್ಣಾ ಜಲ ವಿವಾದ ಎರಡನೇ ನ್ಯಾಯಾಧೀಕರಣದ ಐತೀರ್ಪನ್ನು ಪ್ರಕಟಿಸುವ ಮೂಲಕ ಈ ಯೋಜನೆಗೆ ನ್ಯಾಯ ಒದಗಿಸಬೇಕೆಂದು ವಿನಂತಿಸಲಾಯಿತು' ಎಂದರು.

'ಮೇಕೆದಾಟುಗೆ 'ಸುಪ್ರೀಂ' ತಡೆಯಾಜ್ಞೆ ಇಲ್ಲ'

ದಾವಣಗೆರೆ: 'ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿಲ್ಲ. ಪ್ರಕರಣ ಕುರಿತು ಸುಪ್ರೀಂ ಕೋರ್ಟ್ ಅಂತಿಮ ಆದೇಶ ನೀಡುವವರೆಗೂ ಕರ್ನಾಟಕವು ಯೋಜನೆ ಕಾಮಗಾರಿ ಆರಂಭಿಸಬಾರದು ಎಂದು ತಮಿಳುನಾಡಿನ ಜಲಸಂಪನ್ಮೂಲ ಸಚಿವ ಮುರುಗನ್ ಹೇಳಿರುವುದರಲ್ಲಿ ಯಾವುದೇ ಅರ್ಥ ಇಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ನಗರಕ್ಕೆ ಗುರುವಾರ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಈಗಾಗಲೇ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀರು ಬಳಕೆ ಕುರಿತು 15 ಸಭೆಗಳನ್ನು ನಡೆಸಿದೆ. ಮುಂದಿನ ವಾರ ಮತ್ತೆ ಸಭೆ ನಡೆಯುವ ಸಾಧ್ಯತೆ ಇದೆ. ನೀರು ಬಳಕೆ ಕುರಿತಂತೆ ಈಗಾಗಲೇ ನಾವು ವಾದ ಮಂಡಿಸಿದ್ದೇವೆ. ಮೇಕೆದಾಟು ಯೋಜನೆ ಕುರಿತು ಕರ್ನಾಟಕ ಸಿದ್ಧಪಡಿಸಿರುವ ವಿಸ್ತೃತ ಯೋಜನಾ ವರದಿ (ಡಿಪಿಆರ್)ಗೆ ಕೇಂದ್ರ ಸರ್ಕಾರ ಅನುಮೋದನೆ ನೀಡುವ ವಿಶ್ವಾಸ ಇದೆ' ಎಂದು ಅವರು ತಿಳಿಸಿದರು.

'ಭಕ್ತವತ್ಸಲಂ ನೇತೃತ್ವದ ಸಮಿತಿಯು ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣ ಅಂತಿಮಗೊಳಿಸಲು ಸಂಬಂಧಿಸಿದ ವರದಿ ನೀಡಲು ತಯಾರಿ ನಡೆಸಿದೆ. ಆ ವರದಿಯು ಮೊದಲ ಹಂತದಲ್ಲಿ ಬಿಬಿಎಂಪಿ ಚುನಾವಣೆಗೆ ಅನ್ವಯವಾಗಲಿದೆ. ನಂತರ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳಿಗೂ ಮೀಸಲಾತಿ ನಿಗದಿಪಡಿಸಲು ಪರಿಗಣಿಸಲಾಗುವುದು' ಎಂದು ಬೊಮ್ಮಾಯಿ ಸ್ಪಷ್ಟಪಡಿಸಿದರು.

'ಕಾಂಗ್ರೆಸ್ ಮುಖಂಡರು ಕಾನೂನು ಬಾಹಿರವಾಗಿರುವ ಭ್ರಷ್ಟಾಚಾರದ ಪರವಾಗಿ ಹೋರಾಟ ಮಾಡುತ್ತಿರುವುದು ದುರಂತ. ಅವರು ಈ ರೀತಿ 'ರಾಜಭವನ ಚಲೋ' ಮಾಡಿದರೆ ಜನರು ಅವರನ್ನು 'ಮನೆಗೆ ಚಲೋ' ಎನ್ನುತ್ತಾರೆ' ಎಂದು ಅವರು ವ್ಯಂಗ್ಯವಾಡಿದರು.

'ವಿದ್ಯಾರ್ಥಿಗಳಿಗೆ ಹಿಂದಿ ಭಾಷೆ ಕಡ್ಡಾಯ ಎಂದು ಸುತ್ತೋಲೆ ಹೊರಡಿಸಿರುವ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಿಕ್ಷಣ ಸಚಿವರಿಗೆ ತಿಳಿಸಿದ್ದೇನೆ. ಹಿಂದಿ ಭಾಷೆ ಕಡ್ಡಾಯ ಸರಿಯಲ್ಲ. ಅದು ನಮ್ಮ ಸರ್ಕಾರದ ನೀತಿ ಅಲ್ಲ' ಎಂದು ಅವರು ಹೇಳಿದರು.

ಸುದ್ದಿ 2 ನಿಮಿಷ

ಒಂದು ಮನೆಗೆ ಒಂದೇ ಟಿಕೆಟ್ ನಮಗೆ ಅನ್ವಯವಾಗಲ್ಲ: ಶಾಮನೂರು

ದಾವಣಗೆರೆ: 'ಕಾಂಗ್ರೆಸ್‌ನಲ್ಲಿ ಒಂದು ಮನೆಗೆ ಒಂದೇ ಟಿಕೆಟ್ ಎಂಬ ನಿಯಮ ನಮ್ಮ ಮನೆಗೆ ಅನ್ವಯವಾಗುವುದಿಲ್ಲ. ಗೆಲ್ಲುವವರು ಬೇಕು ಅಷ್ಟೇ. ಕೇಳಿದರೆ ನಮ್ಮ ಮನೆಯಲ್ಲೇ ನಾಲ್ವರಿಗೆ ಟಿಕೆಟ್ ಕೊಡುತ್ತಾರೆ' ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

'ನಾನು ಮುಂದಿನ ಚುನಾವಣೆಯಲ್ಲೂ ಸ್ಪರ್ಧಿಸುತ್ತೇನೆ. ಮುಖ್ಯಮಂತ್ರಿ ಆಗುತ್ತೇನೋ ಇಲ್ಲವೋ ಎಂಬುದು ಗೊತ್ತಿಲ್ಲ. ಬೇಕಿದ್ದರೆ ನೀವು ಈ ಬಗ್ಗೆ ಕೋಡಿಮಠದ ಸ್ವಾಮೀಜಿಯವರ ಬಳಿ ಭವಿಷ್ಯ ಕೇಳಬಹುದು' ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ಶಾಸಕ ಜಗದೀಶ ಶೆಟ್ಟರ್ ಅವರು ನಮ್ಮ ಮನೆಯ ಮದುವೆಗೆ ಬಂದಿದ್ದರಲ್ಲಿ ತಪ್ಪೇನು, ನನ್ನ ಮನೆ ರಾಜಕೀಯ ಶಕ್ತಿ ಕೇಂದ್ರ ಆಗಬಾರದೇಕೆ' ಎಂದು ಪ್ರಶ್ನಿಸಿದ ಅವರು, 'ನಾವೆಲ್ಲ ವೀರಶೈವ ಲಿಂಗಾಯತರು' ಎಂದು ಸ್ಪಷ್ಟಪಡಿಸಿದರು.

ಹಿಜಾಬ್: 21 ವಿದ್ಯಾರ್ಥಿನಿಯರು ಮೂರು ತಿಂಗಳಿಂದ ಗೈರು

ಮಂಗಳೂರು: ಹಳೆಯಂಗಡಿ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ಒತ್ತಾಯಿಸುತ್ತಿದ್ದ 21 ವಿದ್ಯಾರ್ಥಿನಿಯರು ಮೂರು ತಿಂಗಳಿನಿಂದ ತರಗತಿಗಳಿಗೆ ಹಾಜರಾಗುತ್ತಿಲ್ಲ.

ಇವರಲ್ಲಿ ಪ್ರಥಮ ವರ್ಷದ ಪದವಿಯ ಒಬ್ಬ ವಿದ್ಯಾರ್ಥಿನಿ, ಅಂತಿಮ ವರ್ಷದ ಪದವಿ ಅಧ್ಯಯನ ಮಾಡುತ್ತಿರುವ 19 ವಿದ್ಯಾರ್ಥಿನಿಯರು ಹಾಗೂ ಸ್ನಾತಕೋತ್ತರ ಅಧ್ಯಯನ ಮಾಡುತ್ತಿರುವ ಒಬ್ಬ ವಿದ್ಯಾರ್ಥಿನಿ ಇದ್ದಾರೆ ಎಂದು ಪ್ರಾಂಶುಪಾಲ ಕೆ. ಶ್ರೀಧರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬರುವ ಆಗಸ್ಟ್ ತಿಂಗಳಲ್ಲಿ ನಡೆಯಲಿರುವ ಪರೀಕ್ಷೆಗೆ ಹಾಜರಾಗಬೇಕಾದರೆ ಶೇ 75ರಷ್ಟು ಹಾಜರಾತಿ ಇರುವುದು ಕಡ್ಡಾಯ. ಈ ವಿದ್ಯಾರ್ಥಿನಿಯರಿಗೆ ಹಾಜರಾತಿಯ ಕೊರತೆ ಆಗಲಿದ್ದು, ಪರೀಕ್ಷೆ ಬರೆಯಲು ಸಾಧ್ಯವಾಗದು' ಎಂದರು.

'ತರಗತಿಗೆ ಹಾಜರಾಗುವಂತೆ ವಿದ್ಯಾರ್ಥಿನಿಯರು ಹಾಗೂ ಅವರ ಪಾಲಕರ ಮನವೊಲಿಸುವ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ. ಪಾಲಕರು ತಮ್ಮ ನಿಲುವಿನಲ್ಲಿ ಬದಲಾವಣೆ ಮಾಡಲು ನಿರಾಕರಿಸಿದ್ದರಿಂದ ನಮ್ಮ ಪ್ರಯತ್ನಗಳೆಲ್ಲ ವಿಫಲವಾದವು' ಎಂದು ಶ್ರೀಧರ್ ತಿಳಿಸಿದರು.

'ಶಿಕ್ಷಕರು, ಪದವೀಧರರು ಬದಲಾವಣೆ ಬಯಸಿದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರು ಮತ್ತು ಪದವೀಧರರು ರಾಜ್ಯದಲ್ಲಿ ಬದಲಾವಣೆ ಬಯಸಿದ್ದಾರೆ ಎಂಬುದು ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳ ಚುನಾವಣಾ ಫಲಿತಾಂಶದಿಂದ ಸ್ಪಷ್ಟವಾಗುತ್ತದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ನಾಲ್ಕೂ ಕ್ಷೇತ್ರಗಳಲ್ಲಿ ಗೆಲ್ಲುವುದಾಗಿ ಬಿಜೆಪಿಯವರು ಜಂಭ ಕೊಚ್ಚಿಕೊಳ್ಳುತ್ತಿದ್ದರು. ಹಳೆ ಮೈಸೂರು ಭಾಗದಲ್ಲಿ ನಮ್ಮದೇ ಪ್ರಾಬಲ್ಯ ಎಂದು ಜೆಡಿಎಸ್‌ನವರು ಹೇಳುತ್ತಿದ್ದರು. ಎಲ್ಲವೂ ಈಗ ಸುಳ್ಳಾಗಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲು ಜನರು ಸಜ್ಜಾಗಿರುವುದು ಈ ಫಲಿತಾಂಶದಲ್ಲಿ ವ್ಯಕ್ತವಾಗಿದೆ' ಎಂದರು.

'ಬಸವರಾಜ ಹೊರಟ್ಟಿ ವೈಯಕ್ತಿಕ ವರ್ಚಸ್ಸಿನಿಂದ ಗೆದ್ದಿದ್ದಾರೆ. ಆ ಕ್ಷೇತ್ರದಲ್ಲೂ ಕಾಂಗ್ರೆಸ್ ಒಳ್ಳೆಯ ಸ್ಪರ್ಧೆ ನೀಡಿದೆ. ದಕ್ಷಿಣ ಪದವೀಧರರ ಕ್ಷೇತ್ರ ಮತ್ತು ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ದೊಡ್ಡ ಅಂತರದ ಗೆಲುವು ದೊರಕಿದೆ. ನಾಲ್ಕರಲ್ಲಿ ಯಾವ ಕ್ಷೇತ್ರವೂ ನಮ್ಮ ಪಕ್ಷದ ಹಿಡಿತದಲ್ಲಿರಲಿಲ್ಲ. ಈಗ ಎರಡು ಕ್ಷೇತ್ರಗಳಲ್ಲಿ ಗೆದ್ದಿರುವುದು ಉತ್ತಮ ಬೆಳವಣಿಗೆ' ಎಂದು ಹೇಳಿದರು.

ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಜೆಡಿಎಸ್‌ಗೆ ಮೊದಲೇ ಸೋಲಿನ ಭಯ ಇತ್ತು. ಈ ಕಾರಣಕ್ಕಾಗಿಯೇ ಕೆ.ಟಿ. ಶ್ರೀಕಂಠೇಗೌಡ ಸ್ಪರ್ಧಿಸಿರಲಿಲ್ಲ. ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ಸಂಘಟಿತ ಹೋರಾಟವೇ ಪಕ್ಷದ ಅಭ್ಯರ್ಥಿ ಮಧು ಜಿ. ಮಾದೇಗೌಡ ಅವರ ಗೆಲುವಿಗೆ ಕಾರಣ ಎಂದರು.

ಸಂದಲ್ ಮೆರವಣಿಗೆ

ಕಲಬುರಗಿಯ ಹಜರತ್ ಖಾಜಾ ಬಂದಾ ನವಾಜ್ ಅವರ 618ನೇ ಉರುಸ್ ಅಂಗವಾಗಿ ಸಾರ್ವಜನಿಕ ಉದ್ಯಾನದಲ್ಲಿ ಗುರುವಾರ ಸಂದಲ್ (ಗಂಧ) ಮೆರವಣಿಗೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಮೊದಲ ದಿನ ಸಿಇಟಿ ಪರೀಕ್ಷೆ ಸುಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾನಾ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ರಾಜ್ಯದಲ್ಲಿ ಗುರುವಾರ ಸಾಮಾನ್ಯ ಪ್ರವೇಶ ಪರೀಕ್ಷೆಯು (ಸಿಇಟಿ) ಆರಂಭವಾಗಿದ್ದು, ಮೊದಲ ದಿನ ಸುಗಮವಾಗಿ ನಡೆಯಿತು.

ಮೊದಲ ದಿನ 1,75,305 ವಿದ್ಯಾರ್ಥಿಗಳು ಜೀವಶಾಸ್ತ್ರ ಮತ್ತು 2,08,032 ವಿದ್ಯಾರ್ಥಿಗಳು ಗಣಿತ ಪರೀಕ್ಷೆ ಬರೆದರು. ಒಟ್ಟು 2,16,559 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು.

ಶುಕ್ರವಾರ ಭೌತವಿಜ್ಞಾನ ಮತ್ತು ರಸಾಯನ ವಿಜ್ಞಾನ ಪರೀಕ್ಷೆಗಳು ನಡೆಯಲಿವೆ. ಶನಿವಾರ ಹೊರನಾಡು ಮತ್ತು ಗಡಿನಾಡು ಕನ್ನಡ ವಿದ್ಯಾರ್ಥಿಗಳಿಗೆ ಆಯ್ದ ಆರು ಕೇಂದ್ರಗಳಲ್ಲಿ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ.

'ವೃತ್ತಿಪರ ಕೋರ್ಸ್‌ಗಳಿಗೆ ನಡೆಸುತ್ತಿರುವ ಸಿಇಟಿ ಗುರುವಾರ ಸುಗಮವಾಗಿ ನಡೆದಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಪರೀಕ್ಷೆಗೆ ಸಂಪೂರ್ಣ ಕ್ಯಾಮೆರಾ ಕಣ್ಗಾವಲಿತ್ತು. ವಿಡಿಯೊ ಚಿತ್ರೀಕರಣ ಮಾಡಲಾಯಿತು. ಅಕ್ರಮ ನಡೆಯದಂತೆ ತೀವ್ರ ನಿಗಾ ವಹಿಸಲಾಗಿತ್ತು. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಸಹಾಯಕ ಆಯುಕ್ತ ದರ್ಜೆಯ ಅಧಿಕಾರಿಯನ್ನು ಪರೀಕ್ಷಾ ವೀಕ್ಷಕರನ್ನಾಗಿ ನೇಮಿಸಲಾಗಿತ್ತು.

ವಿದ್ಯುತ್ ಯೋಜನೆ: ಉದ್ಯೋಗ ನೀಡಲು ಹೈಕೋರ್ಟ್ ಆದೇಶ

ಬೆಂಗಳೂರು: 'ಯರಮರಸ್ ಉಷ್ಣ ವಿದ್ಯುತ್ ಸ್ಥಾವರ ಮತ್ತು ರಾಯಚೂರು ಪವರ್ ಕಾರ್ಪೊರೇಷನ್ ಲಿಮಿಟೆಡ್ ವಿದ್ಯುತ್ ಯೋಜನೆಗಾಗಿ ಜಮೀನು ಬಿಟ್ಟುಕೊಟ್ಟಿರುವ ಭೂ-ನಷ್ಟದಾರರ ಉದ್ಯೋಗ ಅರ್ಜಿಗಳನ್ನು ಮೂರು ತಿಂಗಳ ಒಳಗಾಗಿ ಪರಿಶೀಲಿಸಿ' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ರಾಯಚೂರು ಜಿಲ್ಲೆಯ ಚಿಕ್ಕಸೂಗೂರಿನ ಜಿ.ಗುರುರಾಜ್ ಪಾಟೀಲ್ ಮತ್ತು ಜಿ.ಸುರೇಶ್ ಪಾಟೀಲ್ ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಕಲಬುರ್ಗಿ ಪೀಠವು ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿದ್ಯುತ್ ಯೋಜನೆಗಾಗಿ ಭೂಮಿ ಕಳೆದುಕೊಂಡಿರುವ ಅರ್ಜಿದಾರರಿಗೆ ಉದ್ಯೋಗ ನೀಡುವ ಕುರಿತಂತೆ ಕಂಪನಿ ಸೂಕ್ತ ಆದೇಶ ಹೊರಡಿಸಲು ನ್ಯಾಯಪೀಠ, ಮೂರು ತಿಂಗಳ ಕಾಲಾವಕಾಶ ನೀಡಿದೆ.

ಪ್ರಕರಣವೇನು?: ರಾಯಚೂರಿನಲ್ಲಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಮತ್ತು ಯರಮರಸ್ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗಾಗಿ ಇಂಧನ ಇಲಾಖೆ ಮತ್ತು ಕಂಪನಿಗಳು ರೈತರ ಜಮೀನು ಸ್ವಾಧೀನಪಡಿಸಿಕೊಂಡಿದ್ದವು. ನಂತರ ಕಂಪನಿ ರೂಪಿಸಿದ ಸ್ಕೀಂ ಅಡಿಯಲ್ಲಿ ಜಮೀನು ನೀಡಿದವರ ಕುಟುಂಬಗಳ ಸದಸ್ಯರಿಗೆ ಅವರ ಅರ್ಹತೆಯ ಆಧಾರದಲ್ಲಿ ಉದ್ಯೋಗ ನೀಡುವುದಾಗಿ ಪ್ರಕಟಿಸಲಾಗಿತ್ತು. ಇದರನ್ವಯ ಅರ್ಜಿದಾರರು 2015 ಮತ್ತು 2016ರಲ್ಲಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಆದರೆ, ಈ ತನಕ ಅವುಗಳನ್ನು ಪರಿಗಣಿಸಿಲ್ಲ ಎಂದು ಆಕ್ಷೇಪಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಲೇವಾರಿ ಮಾಡಿರುವ ನ್ಯಾಯಪೀಠ, 'ಕಾನೂನು ಪ್ರಕಾರ ಅರ್ಜಿದಾರರ ಮನವಿಯನ್ನು ಸೂಕ್ತ ರೀತಿಯಲ್ಲಿ ಪರಿಗಣಿಸುವಂತೆ ಆದೇಶಿಸಿದೆ.

'ಪ್ರತೀಕಾರಕ್ಕಾಗಿ ನೆಲಸಮ ಬೇಡ'

ಒಂದನೇ ಪುಟದಿಂದ...

'ಕಾರ್ಯಾಚರಣೆಯನ್ನು ಕಾನೂನುಬದ್ಧವಾಗಿಯೇ ನಡೆಸಲಾಗಿದೆ. ಸಂಬಂಧಿಸಿದವರಿಗೆ ಈ ಹಿಂದೆಯೇ ನೋಟಿಸ್ ನೀಡಲಾಗಿತ್ತು. ಒಂದು ಪ್ರಕರಣದಲ್ಲಂತೂ 2020ರ ಆಗಸ್ಟ್‌ನಲ್ಲಿಯೇ ನೋಟಿಸ್ ನೀಡಲಾಗಿತ್ತು' ಎಂದು ಪೀಠದ ಎದುರು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಹಿರಿಯ ವಕೀಲ ಹರೀಶ್ ಸಾಳ್ವೆ ಅವರು ಪ್ರತಿಪಾದಿಸಿದರು.

ಆಗ ಅರ್ಜಿದಾರರ ಪರ ವಕೀಲರು, 'ಉತ್ತರ ಪ್ರದೇಶ ಸರ್ಕಾರವು ಗಲಭೆ, ಪ್ರತಿಭಟನೆ ಮತ್ತು ಅಪರಾಧ ಕೃತ್ಯಗಳಲ್ಲಿ ಭಾಗಿಯಾದವರ ಸ್ವತ್ತುಗಳನ್ನು ನೆಲಸಮ ಮಾಡುತ್ತಿದೆ. ಕೇವಲ ಆರೋಪ ಹೊತ್ತವರ ಮನೆಗಳನ್ನೂ ನೆಲಸಮ ಮಾಡುತ್ತಿರುವುದು ಆತಂಕಕಾರಿ. ತುರ್ತುಸ್ಥಿತಿಯ ಸಂದರ್ಭದಲ್ಲೂ ದೇಶ ಇಂತಹದ್ದನ್ನು ಕಂಡಿಲ್ಲ. ಒಂದು ಸಮುದಾಯದ ಜನರನ್ನು ಮಾತ್ರ ಇಂತಹ ಕಾರ್ಯಾಚರಣೆಗಳಲ್ಲಿ ಗುರಿ ಮಾಡಲಾಗುತ್ತಿದೆ' ಎಂದು ಅರ್ಜಿದಾರರ ಪರ ವಕೀಲರು ಆರೋಪಿಸಿದರು.

'ಗಲಭೆಗಳಲ್ಲಿ ಭಾಗಿಯಾದ ಆರೋಪ ಹೊತ್ತವರ ಸ್ವತ್ತುಗಳನ್ನು ನೆಲಸಮ ಮಾಡುತ್ತೇವೆ ಎಂದು ನಗರ ಪ್ರಾಧಿಕಾರಗಳ ಅಧಿಕಾರಿಗಳು ಬಹಿರಂಗವಾಗಿಯೇ ಘೋಷಿಸಿದ್ದಾರೆ. ರಾಜ್ಯದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, 'ಆರೋಪಿಗಳ ಮನೆಗಳ ಮೇಲೆ ಬುಲ್ಡೋಜರ್ ಚಲಾಯಿಸುತ್ತೇವೆ' ಎಂದು ಘೋಷಿಸಿದ್ದಾರೆ. ಇದು ಸಹಜ ನ್ಯಾಯದಾನ ವ್ಯವಸ್ಥೆಗೆ ವಿರುದ್ಧವಾದ ಕ್ರಮ' ಎಂದು ಆರೋಪಿಸಿದರು.

ಎರಡೂ ಕಡೆಯ ವಾದಗಳನ್ನು ಆಲಿಸಿದ ಪೀಠವು, 'ಈ ಆರೋಪಗಳ ಬಗ್ಗೆ ಮೂರು ದಿನಗಳ ಒಳಗೆ ಪ್ರತಿಕ್ರಿಯೆ ನೀಡಿ' ಎಂದು ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚಿಸಿತು.

'ತೊಂದರೆಗೆ ಸಿಲುಕಿದವರಿಗೆ ರಕ್ಷಣೆ ಕೊಡಬೇಕು'

'ನಾವೂ ಸಮಾಜದ ಭಾಗವಾಗಿದ್ದೇವೆ. ಸಮಾಜದಲ್ಲಿ ಏನಾಗುತ್ತಿದೆ ಎಂಬುದನ್ನು ನಾವೂ ನೋಡುತ್ತಿದ್ದೇವೆ. ಎಲ್ಲವೂ ನ್ಯಾಯಸಮ್ಮತವಾಗಿ ಇರಬೇಕು' ಎಂದು ಪೀಠವು ಹೇಳಿದೆ.

'ತೊಂದರೆಗೆ ಒಳಗಾದವರ ಭದ್ರತೆಯನ್ನು ನಾವು ದೃಢಪಡಿಸಬೇಕಲ್ಲವೇ? ಅದು ನಮ್ಮ ಕರ್ತವ್ಯ. ಅವರೂ ನಮ್ಮ ಸಮಾಜದ ಭಾಗ ಎಂಬುದರ ಬಗ್ಗೆ ನಮಗೆ ಸ್ಪಷ್ಟತೆಯಿರಬೇಕು. ಅಂತಿಮವಾಗಿ ಯಾರೋ ತೊಂದರೆಯಲ್ಲಿ ಇದ್ದಾರೆ ಎಂದರೆ, ಅದನ್ನು ಪರಿಹರಿಸಿಕೊಳ್ಳುವ ಅವಕಾಶ ಅವರಿಗೆ ಸಿಗಲೇಬೇಕು. ಈ ನ್ಯಾಯಾಲಯವು ಅವರ ರಕ್ಷಣೆಗೆ ಬರದೇ ಇದ್ದರೆ, ಅದು ಸರಿಯಲ್ಲ' ಎಂದು ಪೀಠವು ಹೇಳಿದೆ.

ಜೀವರಾಜ್ ವಿರುದ್ಧ ಜಾಮೀನುರಹಿತ ವಾರೆಂಟ್ ಜಾರಿ

ನರಸಿಂಹರಾಜಪುರ (ಚಿಕ್ಕಮಗಳೂರು): ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಪದೇ ಪದೇ ಗೈರುಹಾಜರಾಗಿದ್ದ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಡಿ.ಎನ್. ಜೀವರಾಜ್ ವಿರುದ್ಧ ಇಲ್ಲಿನ ಸಿವಿಲ್ ನ್ಯಾಯಾಲಯ ಗುರುವಾರ ಜಾಮೀನುರಹಿತ ವಾರೆಂಟ್ ಜಾರಿಗೊಳಿಸಿದೆ.

ತಮಗೆ ಹಣದ ಬೇಡಿಕೆ ಇಟ್ಟು, ಬ್ಲ್ಯಾಕ್‌ಮೇಲ್ ಮಾಡಿದ್ದಾರೆ ಎಂದು ಜೀವರಾಜ್ ದೂರು ನೀಡಿದ್ದರು. ಆ ಪ್ರಕರಣದ ಬಗ್ಗೆ ಸಾಕ್ಷಿ ಹೇಳಲು ನ್ಯಾಯಾಲಯದ ವಿಚಾರಣೆಗೆ ಬರಬೇಕಿತ್ತು. 2020ರಿಂದಲೂ ನ್ಯಾಯಾಲಯದ ವಿಚಾರಣೆಗೆ ಗೈರು ಹಾಜರಾಗಿದ್ದರು. ಗುರುವಾರ ಸಹ ವಿಚಾರಣೆಗೆ ಗೈರು ಹಾಜರಾಗಿದ್ದರಿಂದ ಪೊಲೀಸರನ್ನು ನ್ಯಾಯಾಧೀಶರು ವಿಚಾರಿಸಿದರು. ಬೆಂಗಳೂರಿಗೆ ಹೋಗಿದ್ದರಿಂದ ಹಾಜರಾಗಿಲ್ಲ ಎಂದಾಗ, ಇದಕ್ಕೆ ಒಪ್ಪದ ನ್ಯಾಯಾಲಯ ಜಾಮೀನುರಹಿತ ವಾರೆಂಟ್ ಹೊರಡಿಸಿದೆ.

ಮೂರು ಕ್ಷೇತ್ರಗಳಲ್ಲಿ 11,499 ಮತಗಳು ತಿರಸ್ಕೃತ

ಮತದಾನ ಹಕ್ಕು: ಎಡವಿದ ಪದವೀಧರರು, ಶಿಕ್ಷಕರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮತದಾನದ ಬಗ್ಗೆ ಚುನಾವಣೆ ಆಯೋಗ ಹಾಗೂ ಆಯಾ ಜಿಲ್ಲಾಡಳಿತಗಳು ಎಷ್ಟೇ ಜಾಗೃತಿ ಮೂಡಿಸಿದ್ದರೂ, ಈ ಬಾರಿ ಚುನಾವಣೆಯಲ್ಲಿ ತಿರಸ್ಕೃತ ಮತಗಳ ಸಂಖ್ಯೆ 10 ಸಾವಿರಕ್ಕೂ ಹೆಚ್ಚು! ಅದರಲ್ಲೂ ಪ್ರಜ್ಞಾವಂತರು ಎಂದು ಕರೆಸಿಕೊಳ್ಳುವವರೇ ಹಕ್ಕು ಚಲಾಯಿಸುವಲ್ಲಿ ಎಡವಿದ್ದು ಅಚ್ಚರಿಗೆ ಕಾರಣವಾಗಿದೆ.

ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ವ್ಯಾಪ್ತಿ ಒಳಗೊಂಡ ವಾಯವ್ಯ ಶಿಕ್ಷಕರು, ಪದವೀಧರರ ಕ್ಷೇತ್ರಗಳು ಹಾಗೂ ಧಾರವಾಡ, ಗದಗ, ಉತ್ತರ ಕನ್ನಡ, ಹಾವೇರಿ ಜಿಲ್ಲೆ ಒಳಗೊಂಡ ಪಶ್ಚಿಮ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಈ ಬಾರಿ ದಾಖಲೆ ಪ್ರಮಾಣದಲ್ಲಿ ಮತದಾನವಾಗಿತ್ತು. ಪದವೀಧರರು, ಶಿಕ್ಷಕರು ಸೇರಿ ಮೂರು ಕ್ಷೇತ್ರಗಳಲ್ಲಿ ಒಟ್ಟು 1,02,907 ಜನರು ಮತ ಚಲಾಯಿಸಿದ್ದರು. ಈ ಪೈಕಿ 91,408 ಮತಗಳು ಸಿಂಧುವಾಗಿವೆ. 11,499 ಮತಗಳು ತಿರಸ್ಕೃತವಾಗಿವೆ.

ಪದವೀಧರ ಕ್ಷೇತ್ರದಲ್ಲೇ ಅಧಿಕ: ಪದವೀಧರ ಕ್ಷೇತ್ರದಲ್ಲಿ ಈ ಬಾರಿ 65,922 ಮತಗಳು ಚಲಾವಣೆಯಾಗಿದ್ದವು. ಈ ಪೈಕಿ 56,916 ಮತಗಳು ಸಿಂಧುವಾಗಿದ್ದರೆ, 9,006 ಮತಗಳು ತಿರಸ್ಕೃತಗೊಂಡಿವೆ. ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ 21,402 ಮತ ಚಲಾವಣೆಯಾಗಿವೆ. ಇದರಲ್ಲಿ 20,132 ಮತಗಳು ಸಿಂಧುವಾಗಿದ್ದು, 1,270 ಮತ ತಿರಸ್ಕೃತಗೊಂಡಿವೆ. ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ 15,583 ಮತಗಳು ಚಲಾವಣೆಗೊಂಡಿದ್ದು, 14,360 ಮತಗಳು ಸಿಂಧುವಾಗಿವೆ. 1,223 ತಿರಸ್ಕೃತವಾಗಿವೆ.

2016ರಲ್ಲಿ ನಡೆದ ವಾಯವ್ಯ ಶಿಕ್ಷಕರು ಹಾಗೂ ಪದವೀಧರ ಕ್ಷೇತ್ರಗಳ ಚುನಾವಣೆಯಲ್ಲೂ 11,402 ಮತಗಳು ತಿರಸ್ಕೃತಗೊಂಡಿದ್ದವು. ಅದರಲ್ಲೂ ಪದವೀಧರ ಕ್ಷೇತ್ರವೊಂದರಲ್ಲೇ 10,455 ಮತ ತಿರಸ್ಕೃತವಾಗಿದ್ದವು. ಶಿಕ್ಷಕರ ಕ್ಷೇತ್ರದಲ್ಲಿ 947 ಮತಗಳು ಅಸಿಂಧುವಾಗಿದ್ದವು. ಈ ಬಾರಿ ಪದವೀಧರ ಮತಗಳ ತಿರಸ್ಕೃತ ಸಂಖ್ಯೆ ತುಸು ಕಡಿಮೆಯಾಗಿದ್ದರೆ, ಶಿಕ್ಷಕರ ತಿರಸ್ಕೃತ ಮತಗಳ ಸಂಖ್ಯೆ ಹೆಚ್ಚಿದೆ.

ತಿರಸ್ಕೃತವಾಗಲು ಕಾರಣವೇನು?: 'ಇತ್ತೀಚೆಗೆ ನಡೆಯುತ್ತಿರುವ ಹಲವು ಚುನಾವಣೆಗಳಲ್ಲಿ ಇವಿಎಂ ಯಂತ್ರ ಬಳಸಲಾಗುತ್ತಿದೆ. ಆದರೆ, ವಿಧಾನ ಪರಿಷತ್ ಚುನಾವಣೆಯಲ್ಲಿ ಇಂದಿಗೂ ಬ್ಯಾಲೆಟ್ ಪೇಪರ್ ಬಳಸಲಾಗುತ್ತದೆ. ಮತದಾರರು ತಾವು ಆಯ್ಕೆ ಮಾಡಲು ಇಚ್ಛಿಸುವ ಅಭ್ಯರ್ಥಿ ಹೆಸರಿನ ಮುಂದೆ '1' ಅಂಕಿಯನ್ನು ಬರೆಯಬೇಕು. ಇದನ್ನು ಪ್ರಥಮ ಪ್ರಾಶಸ್ತ್ಯದ ಮತ ಎಂದು ಗುರುತಿಸಲಾಗುತ್ತದೆ. ಆದರೆ, ಸಾವಿರಾರು ಅಭ್ಯರ್ಥಿಗಳು ಮತದಾನ ವೇಳೆ ನಿಯಮ ಸರಿಯಾಗಿ ಪಾಲಿಸಿಲ್ಲ. ಕೆಲವರು ಒಂದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳ ಹೆಸರಿನ ಮುಂದೆ 1 ಅಂಕಿ ಬಳಸಿದ್ದರೆ, ಇನ್ನೂ ಕೆಲವರು ರೈಟ್ ಮಾರ್ಕ್ ಹಾಕಿದ್ದಾರೆ. ಇವೆಲ್ಲ ಕಾರಣಗಳಿಂದ ಮತ ತಿರಸ್ಕೃತಗೊಂಡಿವೆ' ಎಂದು ಚುನಾವಣೆ ಕರ್ತವ್ಯಕ್ಕೆ ನಿಯೋಜನೆಯಾಗಿದ್ದ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮೂರಂಕಿ ತಲುಪದ 11 ಮಂದಿ

ಮೂರು ಕ್ಷೇತ್ರಗಳಲ್ಲಿ 30 ಅಭ್ಯರ್ಥಿಗಳು ಕಣದಲ್ಲಿದ್ದರು. ಈ ಪೈಕಿ 11 ಅಭ್ಯರ್ಥಿಗಳ ಮತ ಮೂರಂಕಿಯನ್ನೇ ತಲುಪಿಲ್ಲ. ಅದರಲ್ಲೂ ಮೂವರು ಬೆರಳೆಣಿಕೆಯಷ್ಟು ಮತ ಗಳಿಸಿದ್ದಾರೆ.

ಪದವೀಧರ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಘಟಿಗೆಪ್ಪ ಮಗದುಮ್ಮ 68 ಮತ ಪಡೆದಿದ್ದಾರೆ. ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಸಪ್ಪ ಮಣಿಗಾರ 39, ಶ್ರೀಕಾಂತ ಪಾಟೀಲ 19, ಜಯಪಾಲ ದೇಸಾಯಿ 10, ಅಪ್ಪಾಸಾಹೇಬ ಕುರಣೆ 9, ಶ್ರೇನಿಕ್ ಜಾಂಗಟೆ 8, ಸಂಗಮೇಶ ಚಿಕ್ಕನರಗುಂದ 4 ಮತ ಪಡೆದಿದ್ದಾರೆ. ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ವೆಂಕನಗೌಡ ಗೋವಿಂದಗೌಡರ 79, ಎಂ.ಪಿ. ಕರಿಬಸಪ್ಪ 60, ಕೃಷ್ಣವೇಣಿ 58 ಹಾಗೂ ಪ್ರೊ.ಎಫ್.ವಿ.ಕಲ್ಲನಗೌಡರ 27 ಮತ ಗಳಿಸಿದ್ದಾರೆ.

ದಿಲ್‌ಪಸಂದ್
ಡಾರ್ಲಿಂಗ್ ಕೃಷ್ಣ, ನಿಶ್ವಿಕಾ ನಾಯ್ಡು

‘ನಟನೆ ಪ್ರೀತಿಯ ಕಾಯಕ

ಎಂಜಿನಿಯರಿಂಗ್ ಪದವಿ, ಸರ್ಕಾರಿ ಕೆಲಸ, ಆರಾಮದಾಯಕ ಜೀವನ ಎಲ್ಲವನ್ನೂ ಬಿಟ್ಟು ತಾನು ಪ್ರೀತಿಸುವ ಕಲಾ ಕ್ಷೇತ್ರದತ್ತ ಬಂದವರು ನಾಗಭೂಷಣ್. ನಾಯಕ ಎನ್ನುವ ಕಲ್ಪನೆಯನ್ನೇ ಬದಲಾಯಿಸಿ ಸರಳ ಪಾತ್ರಗಳ ಮೂಲಕ ಗಮನ ಸೆಳೆದವರು. ಕೋವಿಡ್ ಕಾಲಘಟ್ಟದ ಕತೆಯ ‘ಮೇಡ್ ಇನ್ ಚೈನಾ’ ಇಂದು ಬಿಡುಗಡೆಯಾಗುವ ಹೊತ್ತಿನಲ್ಲಿ ನಾಗಭೂಷಣ್ ಅವರ ಜೊತೆ ಮಾತುಕತೆ...

ಶರತ್ ಹೆಗ್ಡೆ

- **ಎಂಜಿನಿಯರಿಂಗ್ ಓದಿ, ಸರ್ಕಾರಿ ನೌಕರಿ ಪಡೆದವರು ಕಲಾ ಕ್ಷೇತ್ರಕ್ಕೆ ಹೊರಳಿದ ಬಗೆ?**

ನಮಗೆ ಬೇಕಾದದ್ದು, ಇಷ್ಟಪಟ್ಟದ್ದು ನಮ್ಮ ಆಯ್ಕೆ ಆಗಿರಬೇಕಲ್ವಾ? ಕಲಾ ಕ್ಷೇತ್ರ ನನ್ನ ಆಸಕ್ತಿ. ಹಾಗಾಗಿ ರಂಗಭೂಮಿ, ಸಾಹಿತ್ಯ ಎಂದು ಈ ಕಡೆಗೆ ಬಂದೆ. ಇದೀಗ ಪೂರ್ಣಕಾಲಿಕ ಕಾಯಕವಾಗಿಬಿಟ್ಟಿದೆ. ಈ ಕ್ಷೇತ್ರಕ್ಕೆ ಬಂದಾಗ ಆರಂಭದಲ್ಲಿ ಆರ್ಥಿಕವಾಗಿ ಸ್ವಲ್ಪ ಕಷ್ಟವಾಯಿತು. ಈಗ ಪರ್ವಾಗಿಲ್ಲ. ಕಥೆಗಳೇ ನನ್ನನ್ನು ಹುಡುಕಿಕೊಂಡು ಬರುತ್ತಿರುವಾಗ ಖುಷಿ ಅನಿಸುತ್ತಿದೆ. ಇಲ್ಲಿ ಬದುಕುತ್ತೇನೆ ಎಂಬ ಧೈರ್ಯ ಮತ್ತು ಸಾಮರ್ಥ್ಯದ ಮೇಲೆ ನಂಬಿಕೆ ಇತ್ತು. ಹಾಗಾಗಿ ನಾನು ಈ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡೆ.

- **ಕಲಾ ಬದುಕಿನ ಪ್ರಯಾಣ ಹೇಗಿದೆ?**

ಹಂತಹಂತವಾಗಿ ಬೆಳೆಯುತ್ತಿದ್ದೇನೆ. ಸದ್ಯ ಚೆನ್ನಾಗಿದೆ. ಸಹನಟನಾಗಿ ಹಲವಾರು ಚಿತ್ರಗಳಲ್ಲಿ ನಟಿಸಿದ್ದೇನೆ. ಲಘು, ಹಾಸ್ಯ ಪಾತ್ರಗಳು ಇಷ್ಟ. ‘ಇಕ್ಕಟ್’ ಮತ್ತು ‘ಮೇಡ್ ಇನ್ ಚೈನಾ’ ಚಿತ್ರಗಳಲ್ಲಿ ನಾಯಕನಾಗಿ ಅಭಿನಯಿಸಿದ್ದೇನೆ. ‘ಹನಿಮೂನ್’ ಎಂಬ ವೆಬ್ ಸಿರೀಸ್‌ನಲ್ಲಿಯೂ ನಾಯಕನಾಗಿದ್ದೇನೆ. ಕುಟುಂಬ ಸಮೇತವಾಗಿ ಕುಳಿತು ನೋಡುವ, ನಗಿಸುವ ಕಂಟೆಂಟ್ ಕೊಡುವುದರಲ್ಲೇ ಖುಷಿ ಮತ್ತು ಸಾರ್ಥಕತೆ ಇದೆ.

- **ನಾಯಕ ಅನ್ನುವ ಪರಿಕಲ್ಪನೆಯನ್ನೇ ಮೀರಿಸಿದ ಕೆಲವೇ ಜನರ ಪೈಕಿ ನೀವೂ ಒಬ್ಬರು. ಏನು ಹೇಳುತ್ತೀರಿ?**

ಪಾತ್ರ ಅಥವಾ ವ್ಯಕ್ತಿತ್ವ ಹೇಗಿದೆಯೋ ಹಾಗೇ ಪ್ರಸ್ತುತಪಡಿಸಬೇಕು. ನಾನು ಫಣಿ ರಾಮಚಂದ್ರ, ಅನಂತ್‌ನಾಗ್ ಅವರ ಚಿತ್ರಗಳನ್ನು ಈಗಲೂ ನೋಡುತ್ತೇನೆ. ಸಹಜವಾದ ಪಾತ್ರಗಳು ಮತ್ತು ಸನ್ನಿವೇಶಗಳ ಮೂಲಕವೇ ನಗಿಸುತ್ತಿದ್ದರಲ್ಲಾ. ಅದು ಸಾಧ್ಯವಾಗುವುದಾದರೆ ಒಂದು ಶಿಸ್ತುಬದ್ಧ ಆರೋಗ್ಯಕರ ಹಾಸ್ಯ ಏಕೆ ಸಾಧ್ಯವಾಗುವುದಿಲ್ಲ? ಇದನ್ನೇ ನಾನು ಮಾಡುತ್ತಿದ್ದೇನೆ.

- **ಹಾಸ್ಯಕ್ಕೆಂದೇ ಪ್ರತ್ಯೇಕ ಪಾತ್ರ ಸೃಷ್ಟಿಸುತ್ತಿರುವ ಕಥೆಗಳು ಮತ್ತು ಚಿತ್ರಗಳಿವೆ. ಇಲ್ಲಿ ನಾಯಕನೇ ಹಾಸ್ಯ ಮಾಡುತ್ತಿದ್ದಾನೆ. ನಾಯಕನ ಗಾಂಭೀರ್ಯ ಮಸುಕಾದಂತೆ ಅನಿಸುತ್ತಿಲ್ಲವೇ?**

ನೋಡಿ, ಹಾಸ್ಯಪಾತ್ರ ಸೃಷ್ಟಿಸಿ ಆ ಪಾತ್ರವನ್ನು ನಾಯಕ ಅಥವಾ ಇತರ ಪಾತ್ರಗಳು ಹಿಯಾಳಿಸುವುದು, ಅದನ್ನೇ ಮನೋರಂಜನೆ ಎಂಬಂತೆ ತೋರಿಸುವುದು ನಡೆದಿದೆ. ಒಟ್ಟಿನಲ್ಲಿ ಹಾಸ್ಯ ಎಂದರೆ ತುಂಬಾ ತಾತ್ಸಾರಕ್ಕೊಳಗಾದ ಪಾತ್ರ ಎಂಬಂತೆ ಬಿಂಬಿತವಾಗಿದೆ. ಈಗ ಅದೆಲ್ಲಾ ಬದಲಾಗಿದೆ. ಬದಲಾಗಲೂಬೇಕು. ನಾಯಕನಿಗೆ ಹಾಸ್ಯಪ್ರಜ್ಞೆ ಇರಬಾರದೇ? ಕಥೆ ಹೇಳುತ್ತಲೇ ಆತ ನಗಿಸಬಲ್ಲ ತಾನೆ? ಆ ಪ್ರಯೋಗ ನನ್ನ ಚಿತ್ರಗಳಲ್ಲಿದೆ.

- **‘ಇಕ್ಕಟ್’, ‘ಮೇಡ್ ಇನ್ ಚೈನಾ’ ಎರಡೂ ಕೋವಿಡ್ ಕಾಲಘಟ್ಟದ ಕಥೆಗಳು... ಇದು ನಿಮ್ಮ ಆಯ್ಕೆಯೇ?**

ಕೋವಿಡ್ ಕಾಲದಲ್ಲಿ ನಾವೆಲ್ಲಾ ಅನುಭವಿಸಿದ ಸನ್ನಿವೇಶಗಳೇ ಇವು. ಅದನ್ನು ತೆರೆಯ ಮೇಲೆ ತಂದಿದ್ದೇವೆ. ನನ್ನ ಆಯ್ಕೆಯೂ ಹೌದು. ಬಜೆಟ್ ಕೂಡಾ ನೋಡಬೇಕಲ್ವಾ. ಇವೆರಡರ ನಡುವೆ ಒಳ್ಳೆಯ ಕಥೆ ಹೇಳಬೇಕು. ಆ ಪ್ರಯತ್ನ ನಮ್ಮದು.

- **ಏನಿದು ‘ಮೇಡ್ ಇನ್ ಚೈನಾ’?**

ಕೋವಿಡ್ ಲಾಕ್ ಡೌನ್ ಆದಾಗ ನಾಲ್ಕು ಗೋಡೆಗಳ ನಡುವೆ ಬಂಧಿಗಳಾದ ನಾವು ವರ್ಚುವಲ್ ಮಾಧ್ಯಮದಲ್ಲೇ ಸಂವಹನ ಮಾಡಿದೆವು. ಅದೇ ರೀತಿಯ ಫ್ರೇಮ್‌ಗಳಲ್ಲಿ ಈ ಚಿತ್ರ ಕಾಣಿಸುತ್ತದೆ. ನನಗೂ ಇದು ಸ್ವಲ್ಪ ಸವಾಲೆನಿಸಿತ್ತು. ಆದರೆ, ನಿರ್ದೇಶಕ ಪ್ರೀತಂ ತಗ್ಗಿನಮನೆ ಅವರಿಗೆ ಸ್ಪಷ್ಟತೆ ಇತ್ತು. ಹಾಗಾಗಿ ಈ ಚಿತ್ರ ಚೆನ್ನಾಗಿ ಮೂಡಿಬಂದಿದೆ. ❖

ನಾಗಭೂಷಣ್

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯ

ಕನ್ನಡದ ಮೊದಲ ವರ್ಚುವಲ್ ಚಿತ್ರ

ಕನ್ನಡದ ಮೊದಲ ವರ್ಚುವಲ್ ಸಿನಿಮಾ, ನಾಗಭೂಷಣ್ ಹಾಗೂ ಪ್ರಿಯಾಂಕಾ ತಿಮ್ಮೇಶ್ ಅಭಿನಯದ ‘ಮೇಡ್ ಇನ್ ಚೈನಾ’ ಇಂದು ಮಲ್ಟಿಪ್ಲೆಕ್ಸ್‌ಗಳಲ್ಲಷ್ಟೇ ಬಿಡುಗಡೆಯಾಗಲಿದೆ. ‘ಅಯೋಗ್ಯ’, ‘ರತ್ನಮಂಜರಿ’ ಸಿನಿಮಾಗಳಿಗೆ ಸಿನಿಮಾಟೋಗ್ರಾಫರ್ ಆಗಿದ್ದ ಪ್ರೀತಮ್ ತೆಗ್ಗಿನಮನೆ ನಿರ್ದೇಶನದ ಚೊಚ್ಚಲ ಸಿನಿಮಾ ಇದಾಗಿದೆ.

ನಿರ್ದೇಶನದ ಜೊತೆಗೆ ಗ್ರಾಫಿಕ್ಸ್, ಸಂಕಲನ ಹಾಗೂ ಛಾಯಾಗ್ರಹಣದ ಜವಾಬ್ದಾರಿಯನ್ನೂ ಪ್ರೀತಮ್ ನಿಭಾಯಿಸಿದ್ದಾರೆ.

ಚಿತ್ರದ ಕುರಿತು ಮಾಹಿತಿ ನೀಡಿದ ಪ್ರೀತಮ್, ‘ಮಲಯಾಳಂನಲ್ಲಿ ‘ಸಿ ಯೂ ಸೂನ್’ ಹಾಗೂ ಹಾಲಿವುಡ್‌ನಲ್ಲಿ ‘ಸರ್ಚಿಂಗ್’ ಎನ್ನುವ ವರ್ಚುವಲ್ ಸಿನಿಮಾಗಳು ಬಂದಿದ್ದವು. ಇವೆರಡೂ ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನ ಸಿನಿಮಾಗಳಾಗಿದ್ದವು. ಇಂಥ ಸಿನಿಮಾಗಳು ಒಟಿಟಿಯಲ್ಲಿ ಬಿಡುಗಡೆ ಮಾಡಲು ಸೂಕ್ತವಾದುವು. ನಮ್ಮ ಸಿನಿಮಾವನ್ನು ಕೇವಲ ಮಲ್ಟಿಪ್ಲೆಕ್ಸ್‌ಗಳಲ್ಲಿ ಬಿಡುಗಡೆ ಮಾಡುತ್ತಿದ್ದೇವೆ. ಇದು ಫ್ಯಾಮಿಲಿ ಡ್ರಾಮಾ ಆಗಿದೆ. ನೈಜ ಘಟನೆಗಳನ್ನು ಆಧರಿಸಿ ಕಥೆ ಹೆಣೆಯಲಾಗಿದೆ’ ಎಂದರು.

ಎನ್. ಕೆ. ಸ್ಟುಡಿಯೋಸ್ ಬ್ಯಾನರ್‌ನಡಿ ನಂದಕಿಶೋರ್ ಸಿನಿಮಾಗೆ ಬಂಡವಾಳ ಹೂಡಿದ್ದು, ಕ್ರಿಸ್ಟಲ್ ಪಾರ್ಕ್ ಸಿನಿಮಾಸ್‌ನಡಿ ಟಿ.ಆರ್.ಚಂದ್ರಶೇಖರ್ ಸಿನಿಮಾವನ್ನು ಪ್ರಸ್ತುತಪಡಿಸುತ್ತಿದ್ದಾರೆ.

‘ದಿಲ್‌ಪಸಂದ್’ ಮಂಚದಲ್ಲಿ ಕೃಷ್ಣ ಕಳೆದುಕೊಂಡಿದ್ದೇನು?

ಡಾರ್ಲಿಂಗ್ ಕೃಷ್ಣ ಸುಪ್ರಭಾತ ಕೇಳುತ್ತಾ ಏಳುತ್ತಾರೆ. ‘ಕರಾಗ್ರೇ ವಸತೇ ಲಕ್ಷ್ಮೀ...’ ಎಂದು ಹೇಳುತ್ತಲೇ ಕಣ್ಣುಬಿಟ್ಟ ಕೃಷ್ಣ ಅವರಿಗೆ ತನ್ನ ಪಕ್ಕದಲ್ಲೇ ಸುಂದರವಾದ ಹುಡುಗಿ ಮಲಗಿದ್ದು ಗಮನಕ್ಕೆ ಬರುತ್ತದೆ.

ನೀವೇನ್ರೀ ಇಲ್ಲಿ ಎಂದು ಕೃಷ್ಣ ಕೇಳುತ್ತಾರೆ. ಅದಕ್ಕೆ ಆ ಹುಡುಗಿ (ನಿಶ್ವಿಕಾ ನಾಯ್ಡು) ನೀನೇನು ಇಲ್ಲಿ ಅನ್ನುತ್ತಾರೆ. ಏನಾದ್ರೂ ಮಾಡಿಬಿಟ್ಟಿಯೇನೋ... ಎಂದು ಪ್ರಶ್ನಿಸುತ್ತಾರೆ.

ಅದಕ್ಕೆ ಕೃಷ್ಣ, ‘ಅದೇ ನಂಗೂ ಗೊತ್ತಾಗ್ತಾ ಇಲ್ಲ’ ಎಂದು ಅಡ್ಡಗೋಡೆ ಮೇಲೆ ದೀಪ ಇಟ್ಟರು.

ನಿಶ್ವಿಕಾ, ‘ಅಯ್ಯೋ ಎಲ್ಲಾ ಕಳಕೊಂಡೇ ಎಂದು ಗೋಳಾಡುತ್ತಾರೆ’. ಇತ್ತ ಕೃಷ್ಣ ಕೂಡಾ, ‘ಅಯ್ಯೋ ಎಲ್ಲಾ ಕಳಕೊಂಡೇ’ ಎಂದೇ ಗೋಳಾಡುತ್ತಾರೆ.

ಹಾಗಾದರೆ ಡಾರ್ಲಿಂಗ್ ಕೃಷ್ಣ – ನಿಶ್ವಿಕಾ ನಾಯ್ಡು ಪರಸ್ಪರ ಕಳೆದುಕೊಂಡದ್ದು ಏನು? ಅದಕ್ಕೆ ಉತ್ತರ ನೀಡಿದೆ ‘ದಿಲ್ ಪಸಂದ್’ ಚಿತ್ರದ ಗ್ಲಿಂಪ್ಸ್.

ನಿಶ್ವಿಕಾ ಜೊತೆ ಕೃಷ್ಣನ ‘ದಿಲ್‌ಪಸಂದ್’ ಚಿತ್ರದ ಗ್ಲಿಂಪ್ಸ್‌ನಲ್ಲಿ ಮೇಲೆ ಹೇಳಿದ ಸನ್ನಿವೇಶ ಇದೆ. ದೃಶ್ಯಾವಳಿಗಳು ನವಿರಾಗಿದ್ದು, ಕಚಗುಳಿ ನೀಡುತ್ತವೆ. ಚಿತ್ರದ ಫಸ್ಟ್‌ಲುಕ್‌ಗೇ ಅಭಿಮಾನಿಗಳು ಮಾರುಹೋಗಿದ್ದಾರೆ. ಕೃಷ್ಣ ಹಾಗೂ ನಿಶ್ವಿಕಾ ನಾಯ್ಡು ಜೋಡಿ ಸುಂದರವಾಗಿ ಈ ಚಿತ್ರದಲ್ಲಿ ಕಾಣಿಸಿದೆ. ರಶ್ಮಿ ಫಿಲಂಸ್ ಲಾಂಛನದಲ್ಲಿ ಸುಮಂತ್ ಕ್ರಾಂತಿ ಅವರು ನಿರ್ಮಿಸುತ್ತಿರುವ ಈ ಚಿತ್ರವನ್ನು ಶಿವತೇಜಸ್ ನಿರ್ದೇಶಿಸಿದ್ದಾರೆ. ನಿಶ್ವಿಕಾ ನಾಯ್ಡು ಜೊತೆ ಮೇಘಾ ಶೆಟ್ಟಿ ಕೂಡಾ ಪ್ರಧಾನ ಪಾತ್ರದಲ್ಲಿದ್ದಾರೆ. ❖

‘ಮಾಫಿಯಾ’ದಲ್ಲಿ ಫುಟ್‌ಬಾಲ್ ಆಡಿದ ಶೈನ್ ಶೆಟ್ಟಿ

ಮಾಫಿಯಾ
ಶೈನ್ ಶೆಟ್ಟಿ

ಪ್ರಜ್ವಲ್ ದೇವರಾಜ್ ಅಭಿನಯದ ‘ಮಾಫಿಯಾ’ ಚಿತ್ರದ ಚಿತ್ರೀಕರಣ ಭರ್ಜರಿಯಾಗಿಯೇ ಸಾಗುತ್ತಿದೆ. ಇತ್ತೀಚೆಗೆ ಬಿಗ್ ಬಾಸ್ ಖ್ಯಾತಿಯ ಶೈನ್ ಶೆಟ್ಟಿ ಅವರು ಈ ಚಿತ್ರದ ದೃಶ್ಯವೊಂದರಲ್ಲಿ ಭರ್ಜರಿಯಾಗಿ ಫುಟ್‌ಬಾಲ್ ಆಡಿದ್ದಾರೆ.

ಪ್ರಜ್ವಲ್ ಅವರ ಜೊತೆಗೇ ಬೆರೆಯುವ ಪಾತ್ರ ಶೈನ್ ಅವರಿಗಿದೆ. ಪ್ರಜ್ವಲ್ ಪೊಲೀಸ್ ಅಧಿಕಾರಿ ಆಗಿರುವಂತೆಯೇ ಇವರೂ ಕೂಡಾ ಪೊಲೀಸ್ ಪಾತ್ರದಲ್ಲಿಯೇ ಇದ್ದಾರೆ.

‘ವಾಸ್ತವವಾಗಿ ನಾನು ಮತ್ತು ಪ್ರಜ್ವಲ್ ತುಂಬಾ ಆತ್ಮೀಯರಾಗಿದ್ದೇವೆ. ಸ್ಟಾರ್ ಸುವರ್ಣದ ರಿಯಾಲಿಟಿ ಶೋದಲ್ಲಿ ಪರಸ್ಪರ ಕಾಲೆಳೆಯುವ ಪ್ರಸಂಗವೊಂದಿತ್ತು. ಅದರಲ್ಲಿ ಪ್ರಜ್ವಲ್ ತುಂಬಾ ಮುಕ್ತವಾಗಿ ಇದ್ದರು. ಹೀಗಾಗಿ ಈ ಆತ್ಮೀಯತೆ ಇನ್ನಷ್ಟು ಗಟ್ಟಿಯಾಯಿತು. ಒಂದು ದಿನ ‘ಮಾಫಿಯಾ’ ನಿರ್ಮಾಪಕರು ಕರೆ ಮಾಡಿ ಈ ಪಾತ್ರದ ಬಗ್ಗೆ ಹೇಳಿದರು. ನಾನು ಒಪ್ಪಿದೆ. ಅಭಿನಯಿಸುವಾಗ ನನಗೆ ಹೊಸದೇನೂ ಅನಿಸಲಿಲ್ಲ. ಏಕೆಂದರೆ ಚಿತ್ರದ ಪಾತ್ರದಲ್ಲಿರುವಂತೆಯೇ ನಾನು ಮತ್ತು ಪ್ರಜ್ವಲ್ ನಿಜ ಜೀವನದಲ್ಲಿಯೂ ತುಂಬಾ ಆತ್ಮೀಯರಾಗಿದ್ದೇವೆ’ ಎಂದು ಒಂದೇ ಉಸಿರಿನಲ್ಲಿ ಹೇಳಿದರು ಶೈನ್.

‘ನನ್ನ ಪಾತ್ರವಿರುವ ಭಾಗದ ಶೇ 50ರಷ್ಟು ಶೂಟಿಂಗ್ ಮುಗಿದಿದೆ. ಚಿತ್ರೀಕರಣ ಇನ್ನೂ ಮುಂದುವರಿದಿದೆ’ ಎಂದರು ಅವರು.

ನಿರ್ದೇಶಕ ಲೋಹಿತ್‌ಕುಮಾರ್ ಪ್ರತಿಕ್ರಿಯಿಸಿ, ‘ಚಿತ್ರದ ಬಹುತೇಕ ಚಿತ್ರೀಕರಣ ಮುಗಿದಿದೆ. ಶೀಘ್ರವೇ ಚಿತ್ರ ನಿಮ್ಮ ಮುಂದೆ ಬರಲಿದೆ’ ಎಂದರು.

ಈ ಚಿತ್ರದಲ್ಲಿ ಅದಿತಿ ಪ್ರಭುದೇವ ನಾಯಕಿ. ದೇವರಾಜ್, ವಾಸುಕಿ ವೈಭವ್, ಸಿದ್ಲಿಂಗು ಶ್ರೀಧರ್, ಪ್ರಕಾಶ್ ಬೆಳವಾಡಿ, ಒರಟ ಪ್ರಶಾಂತ್, ರವಿ ಭಟ್ ತಾರಾಗಣದಲ್ಲಿ ಇದ್ದಾರೆ. ❖

ಕುದುರೆ ಬಾಯಿಗೆ ಜಿಲೇಬಿ; ಅನಾಮಿಕ ಪ್ರಯತ್ನ

ವಿಶಾಖ ಎನ್.

ಅನಾಮಿಕ ಹಕ್ಸರ್ 1980ರ ದಶಕದಲ್ಲಿ ಬಿ.ವಿ. ಕಾರಂತರ ಗರಡಿಯಲ್ಲಿ ರಾಷ್ಟ್ರೀಯ ನಾಟಕ ಶಾಲೆ (ಎನ್‌ಎಸ್‌ಡಿ)ಯಲ್ಲಿ ಪಳಗಿದ್ದವರು. ಚಿದಂಬರರಾವ್ ಜಂಬೆ ಅವರ ಸಹಪಾಠಿ. ಎಸ್. ರಘುನಂದನ್ ಅವರು ಎನ್‌ಎಸ್‌ಡಿಯಲ್ಲಿ ಇವರಿಗೂ ಮುಂಚಿನ ಬ್ಯಾಚ್‌ನಲ್ಲಿ ಕಲಿತವರು. ದಶಕಗಟ್ಟಲೆ ರಂಗಭೂಮಿಯಲ್ಲೇ ತೊಡಗಿಕೊಂಡಿದ್ದ ಅನಾಮಿಕ ತಾವು ಏಳು ವರ್ಷಗಳಿಂದ ದಾಖಲಿಸಿರುವ ದೃಶ್ಯಗಳನ್ನೆಲ್ಲ ಬೆಸೆದು, ‘ಘೋಡೆ ಕೋ ಜಲೇಬಿ ಖಿಲಾನೆ ಲೇ ಜಾ ರಿಯಾ ಹೂಂ’ ಎಂಬ ಹಿಂದಿ ಸಿನಿಮಾ ನಿರ್ದೇಶಿಸಿದ್ದಾರೆ. ಅದು ಶುಕ್ರವಾರ ಬೆಂಗಳೂರಿನಲ್ಲಿ ತೆರೆಕಾಣಲಿದೆ.

ಅನಾಮಿಕ ಹಳೆಯ ದೆಹಲಿಯವರು. ಅದಕ್ಕೇ ಹಳೆಯ ದೆಹಲಿಯ ಸಾವಯವ ಗುಣವನ್ನು ಅವರು ಹಲವು ಬಗೆಯ ಉಪಭಾಷೆಗಳನ್ನು ಯಥಾವತ್ತಾಗಿ ಬಳಸಿಕೊಂಡು ಪಾತ್ರಗಳಿಂದ ಅಭಿನಯ ತೆಗೆಸಿದ್ದಾರೆ. ಚಿತ್ರದಲ್ಲಿ ಪಳಗಿದ ನಟರಲ್ಲದೆ ಅಭಿನಯದ ಗಂಧ–ಗಾಳಿ ಇಲ್ಲದವರನ್ನೂ ದುಡಿಸಿಕೊಂಡಿದ್ದಾರೆ. ನೈಜ ಲೊಕೇಷನ್‌ಗಳನ್ನು ಒಳಗೊಳ್ಳುತ್ತಾ ದೃಶ್ಯಗಳನ್ನು ಮೂಡಿಸುವ ಚಿತ್ರವು ಪೇಂಟಿಂಗ್, ಅನಿಮೇಷನ್, ರಂಗತಂತ್ರ ಎಲ್ಲವನ್ನೂ ಬೆಸೆದುಕೊಂಡು ಹಲವು ಪದರಗಳಲ್ಲಿ ಚಿತ್ರಕಥೆಯನ್ನು ತುಳುಕಿಸುತ್ತದೆ. ಇದೇ ಕಾರಣಕ್ಕೆ ಇದೊಂದು ಮಹತ್ವದ ಪ್ರಯೋಗಾತ್ಮಕ ಸಿನಿಮಾ ಎಂದು ಕೆಲವು ಚಿತ್ರೋತ್ಸವಗಳನ್ನು ಇದನ್ನು ಕಂಡುಂಡ ಸಿನಿಮಾ ವಿದ್ಯಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ.

ಜೇಬುಗಳ್ಳ, ಸಿಹಿ ಮಾರುವವ, ಕಾರ್ಮಿಕ ಹೋರಾಟಗಾರ... ಈ ಮೂವರನ್ನೂ ಮುಖ್ಯ ಪಾತ್ರಗಳನ್ನಾಗಿಸಿ ಸಿದ್ಧಗೊಂಡಿರುವ ಚಿತ್ರವಿದು. ಹಳೆಯ ದೆಹಲಿಯ ಜನರ ಭರವಸೆ, ಉತ್ಕಟತೆ, ಕನಸುಗಳನ್ನೆಲ್ಲ ಈ ಪಾತ್ರಗಳ ಮೂಲಕ ಕಾಣಿಸುವ ಪ್ರಯತ್ನವನ್ನು ಅನಾಮಿಕ ಮಾಡಿದ್ದಾರೆ. ‘ನನ್ನ ಸಿನಿಮಾ ಏಳು ವರ್ಷಗಳ ಪ್ರಯತ್ನ. ಇಂತಹುದೊಂದು ವಿಷಯವನ್ನು ಸಿನಿಮಾದಲ್ಲಿ ತೋರಬೇಕು ಎನ್ನುವ ಕಾರಣಕ್ಕಷ್ಟೆ ಈ ಮಾಧ್ಯಮವನ್ನು ಆರಿಸಿಕೊಂಡೆ. ರಂಗಭೂಮಿಯಲ್ಲಿ ನನ್ನ ಕೆಲಸಗಳನ್ನು ಸದಾ ಮುಂದುವರಿಸಿಕೊಂಡು ಹೋಗುವೆ. ಕೋವಿಡ್ ಕಾಲದಲ್ಲಿ ಕಾರ್ಮಿಕರು ಮರುವಲಸೆ ಹೋದದ್ದನ್ನು ಕಂಡೆವು. ನನ್ನ ಸಿನಿಮಾದಲ್ಲಿ ಕಾರ್ಮಿಕರಿಗೆ ಅವಕಾಶಗಳ ಬಾಗಿಲುಗಳು ಹೇಗೆಲ್ಲ ಮುಚ್ಚುತ್ತಿವೆ ಎನ್ನುವ ವಿಷಯವೂ ಅಡಗಿದೆ. ಇದು ಕಾಲಾತೀತವಾದ ವಿಚಾರ. ಹಳೆಯ ದೆಹಲಿಯ ಸಮಸ್ಯೆಯಷ್ಟನ್ನೆ ಚಿತ್ರ ತೋರುವುದಿಲ್ಲ. ಇಂತಹ ಎಷ್ಟೋ ಸಮಸ್ಯೆಗಳು ಬಹುತೇಕ ನಗರಗಳಲ್ಲಿ ಇವೆ. ಕುದುರೆಗೆ ಜಿಲೇಬಿ ತಿನ್ನಿಸಲು ಹೋಗಬೇಕು ಎನ್ನುವುದು ಒಂದು ಧ್ವನಿಯಷ್ಟೆ. ಅದನ್ನು ತಿನ್ನಿಸುತ್ತಾರೆ ಎಂದೇನೂ ಅಲ್ಲ. ಇಂತಹ ಹಲವು ಉಪಭಾಷಾ ಧ್ವನಿಗಳನ್ನು ಈ ಸಿನಿಮಾ ಅಡಗಿಸಿಟ್ಟುಕೊಂಡಿದೆ’ ಎಂದು ಅನಾಮಿಕ ತಮ್ಮ ಸಿನಿಮಾದ ಆತ್ಮವನ್ನು ತೆರೆದಿಟ್ಟರು.

ವಸುಂಧರ ಹಕ್ಸರ್

ಮಾಸ್ಕೋದ ಸ್ಟೇಟ್ ಇನ್‌ಸ್ಟಿಟ್ಯೂಟ್ ಆಫ್ ಥಿಯೇಟರ್ ಆರ್ಟ್ಸ್‌ನಲ್ಲಿ ಕಲಿತಿರುವ ಕೆಲವೇ ಭಾರತೀಯರಲ್ಲಿ ಅನಾಮಿಕ ಕೂಡ ಒಬ್ಬರು. ರಂಗಶಂಕರದಲ್ಲಿ ಹಿಂದೊಮ್ಮೆ ಅಧ್ಯಯನಕ್ಕೆಂದು ಬಂದಿದ್ದಾಗ, ದೇವನೂರ ಮಹದೇವರ ‘ಅಮಾಸ’ ಕಥೆಯನ್ನು ನಾಟಕಕ್ಕೆ ಒಗ್ಗಿಸುತ್ತಿದ್ದ ಪ್ರಕ್ರಿಯೆಯನ್ನು ಅವರು ಗಮನಿಸಿದ್ದರು. ಅದಾದ ಮೇಲೆ ದೇವನೂರರ ಕಥೆಗಳನ್ನು ಓದಿ, ಅವುಗಳ ಮಿಡಿತವನ್ನು ಅರಿತು ವಿಸ್ಮಯಗೊಂಡಿದ್ದನ್ನು ನೆನಪಿಸಿಕೊಂಡರು.

ಮ್ಯಾಡ್ರಿಡ್, ನ್ಯೂಯಾರ್ಕ್‌ನ ಮೋಮಾ, ಮೆಲ್ಬರ್ನ್, ಬ್ರೆಜಿಲ್ ಮೊದಲಾದೆಡೆ ನಡೆದ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಈಗಾಗಲೇ ಈ ಚಿತ್ರ ಪ್ರದರ್ಶಿತವಾಗಿದೆ. ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ‘ಅತ್ಯುತ್ತಮ ಭಾರತೀಯ ಚಿತ್ರ’ ಪ್ರಶಸ್ತಿಯೂ ಸಂದಿದೆ.

ರವೀಂದ್ರ ಸಾಹು, ಲೋಕೇಶ್ ಜೈನ್, ರಘುಬೀರ್ ಯಾದವ್ ಮುಖ್ಯಪಾತ್ರಗಳನ್ನು ಸಿನಿಮಾದಲ್ಲಿ ನಿರ್ವಹಿಸಿದ್ದಾರೆ. ಸೌಮ್ಯಾನಂದ ಸಾಹಿ ಸಿನಿಮಾಟೊಗ್ರಫಿ, ಸೌಮಿತ್ರ ರಾನಡೆ ಅನುಮೇಷನ್ ಕೆಲಸಗಳನ್ನ ಮಾಡಿಕೊಟ್ಟಿದ್ದಾರೆ. ಗೌತಮ್ ನಾಯರ್ ಅವರ ಆಡಿಯೋಗ್ರಫಿ ಇದೆ. ಬನ್ನೇರುಘಟ್ಟ ರಸ್ತೆಯ ವೇಗಾ ಸಿಟಿಯ ಪಿವಿಆರ್‌ನಲ್ಲಿ ಶುಕ್ರವಾರ ರಾತ್ರಿ 7.25ಕ್ಕೆ ಚಿತ್ರದ ಪ್ರದರ್ಶನವಿದೆ. ❖

‘ಸರೋಜಿನಿ’ಯಲ್ಲಿ ನಿಸರ್ಗ ಗೌಡ

ಸರೋಜಿನಿ ನಾಯ್ಡು ಅವರ ಜೀವನ ಕಥೆ ಆಧರಿಸಿದ ‘ಸರೋಜಿನಿ’ ಚಿತ್ರದ ಪ್ರಧಾನ ಪಾತ್ರದಲ್ಲಿ ನಿಸರ್ಗ ಗೌಡ ಕಾಣಿಸಿಕೊಳ್ಳಲಿದ್ದಾರೆ.

ವಿಸಿಕಾ ಫಿಲ್ಮ್ಸ್ ಪ್ರೈವೇಟ್ ಲಿಮಿಟೆಡ್‌ನ ಚರಣ್ ಸುವರ್ಣ, ಹನಿ ಚೌಧರಿ ಈ ಚಿತ್ರದ ನಿರ್ಮಾಪಕರು. ವಿನಯಚಂದ್ರ ನಿರ್ದೇಶಕರು. ನಿಸರ್ಗ ಗೌಡ ಅವರು ಈಗಾಗಲೇ ಕನ್ನಡದ ಹಲವು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ನಿಸರ್ಗ ಅವರಿಗೆ ಈ ಚಿತ್ರದ ಪಾತ್ರದಲ್ಲಿ ಕಾಣಿಸಿಕೊಳ್ಳಲು ತುಂಬಾ ಖುಷಿಯಾಗಿದೆಯಂತೆ. ಈ ಪಾತ್ರ ತುಂಬಾ ಸವಾಲಿನದ್ದು, ಹಳೆಯ ಕಾಲಘಟ್ಟದ್ದು. ಇನ್ನೂ ಇಂತಹ ಅವಕಾಶಗಳು ಈ ಸಿನಿಮಾದ ಮೂಲಕ ದೊರಕಲಿವೆ ಎಂಬ ಭರವಸೆಯಲ್ಲಿದ್ದಾರೆ.

ಚಿತ್ರದ ಪೋಸ್ಟರ್ ಈಗಾಗಲೇ ಸಾಮಾಜಿಕ ಜಾಲತಾಣಗಳಲ್ಲಿ ಮೆಚ್ಚುಗೆ ಪಡೆದಿದೆ. ಚಿತ್ರ ಬಹುಭಾಷೆಗಳಲ್ಲಿ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ. ❖

ನಿಸರ್ಗ ಗೌಡ

‘ವಾಮನ’ನಿಗೆ ಸಂಪತ್ ಟಕ್ಕರ್!

‘ಬಜಾರ್’ ಸಿನಿಮಾ ಮೂಲಕ ನಾಯಕನಾಗಿ ಮಿಂಚಿದ್ದ ನಟ ಧ್ವನೀರ್, ಇದೀಗ ‘ವಾಮನ’ ಎಂಬ ಹೊಸ ಸಿನಿಮಾದ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದಾರೆ. ಶಂಕರ್ ರಾಮನ್ ನಿರ್ದೇಶನದ ಈ ಚಿತ್ರದಲ್ಲಿ ಖಳನಟನಾಗಿ ತೆಲುಗು ಚಿತ್ರರಂಗದ ಖ್ಯಾತ ಬಹುಭಾಷಾ ನಟ ಸಂಪತ್ ನಟಿಸಲಿದ್ದು, ಅವರ ಪಾತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ.

ಈಗಾಗಲೇ ಎರಡು ಹಂತದ ಶೂಟಿಂಗ್ ಮುಗಿಸಿರುವ ಚಿತ್ರತಂಡ ಈಗ ಮೂರನೇ ಹಂತದ ಚಿತ್ರೀಕರಣದಲ್ಲಿ ತಲ್ಲೀನವಾಗಿದೆ. ‘ಸಂಪತ್ ಅವರು, ಇಡೀ ಮಾಫಿಯಾವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಅತ್ಯಂತ ಕ್ರೂರಿಯಾಗಿ ಬದುಕುವ ವಿಲನ್ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಮೂರು ಶೇಡ್‌ಗಳಲ್ಲಿ ಅವರು ಇಲ್ಲಿ ಅಬ್ಬರಿಸಲಿದ್ದಾರೆ’ ಎನ್ನುತ್ತಾರೆ ಶಂಕರ್.

ಸಂಪತ್

ಈಕ್ವಿನಾಕ್ಸ್ ಗ್ಲೋಬಲ್ ಎಂಟರ್‌ಟೈನ್‌ಮೆಂಟ್‌ನಡಿ ಮೂಡಿ ಬರುತ್ತಿರುವ ಈ ಮಾಸ್ ಆ್ಯಕ್ಷನ್ ಸಿನಿಮಾದಲ್ಲಿ ಧನ್ವೀರ್‌ಗೆ ಜೋಡಿಯಾಗಿ ರಚನಾ ರೈ ನಟಿಸುತ್ತಿದ್ದಾರೆ. ಮಹೇನ್ ಸಿಂಹ ಛಾಯಾಗ್ರಾಹಣ, ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಸುರೇಶ್ ಆರ್ಮುಗಂ ಸಂಕಲನ, ಅರ್ಜುನ್ ರಾಜ್, ಜಾಲಿ ಬಾಸ್ಟಿನ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ❖

❦ ಸುಭಾಷಿತ ❦
ಮಾಣಿಕ್ಯದ ಬೆಳಗುಳ್ಳೊಡೆ ಜ್ಯೋತಿಯ ಹಂಗೇಕೆ?
-ಅಕ್ಕಮಹಾದೇವಿ

ಮೇಲ್ಮನೆ ಫಲಿತಾಂಶ: ಕಾಂಗ್ರೆಸ್‌ಗೆ ಚೈತನ್ಯ ಬಿಜೆಪಿಗೆ ಸಂದೇಶ, ಜೆಡಿಎಸ್‌ಗೆ ಆಘಾತ

ವಿಧಾನಪರಿಷತ್ತಿನ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ನಡೆದ ಚುನಾವಣೆ ಫಲಿತಾಂಶ ಹೊರಬಿದ್ದಿದೆ. ಒಟ್ಟು ನಾಲ್ಕು ಕ್ಷೇತ್ರಗಳ ಪೈಕಿ ಆಡಳಿತಾರೂಢ ಬಿಜೆಪಿ ಹಾಗೂ ಅಧಿಕೃತ ವಿರೋಧ ಪಕ್ಷ ಕಾಂಗ್ರೆಸ್ ತಲಾ ಎರಡು ಸ್ಥಾನಗಳನ್ನು ಗೆದ್ದುಕೊಂಡಿವೆ. ಎರಡು ಕ್ಷೇತ್ರಗಳ ಪ್ರಾತಿನಿಧ್ಯ ಹೊಂದಿದ್ದ ಜೆಡಿಎಸ್, ಎರಡನೇ ಸ್ಥಾನಕ್ಕೆ ಪೈಪೋಟಿ ನೀಡುವಲ್ಲಿಯೂ ಸೋತಿದೆ. ಬಿಜೆಪಿ ಎರಡು ಕ್ಷೇತ್ರಗಳಲ್ಲೇನೋ ಗೆದ್ದಿದೆ. ಆದರೆ, ಚುನಾವಣೆಗಳಲ್ಲಿ ಗೆಲುವಿನ ಪತಾಕೆ ಹಾರಿಸಿ ಮುನ್ನಡೆಯುತ್ತಾ ತನಗೆ ಎದುರಾಳಿಯೇ ಇಲ್ಲ ಎಂದು ಬೀಗುತ್ತಿದ್ದ ಆಡಳಿತಾರೂಢ ಪಕ್ಷಕ್ಕೆ ಈ ಫಲಿತಾಂಶ ಸ್ವಯಂ ಬೆನ್ನುತಟ್ಟಿಕೊಳ್ಳುವ ಸಾಧನೆಯೇನಲ್ಲ. ಇತ್ತೀಚಿನ ವರ್ಷಗಳಲ್ಲಿ ಪದವೀಧರ-ಶಿಕ್ಷಕರ ಕ್ಷೇತ್ರಗಳಲ್ಲಿ ಗೆಲುವಿನ ಸಂಭ್ರಮವನ್ನೇ ಕಾಣದಿದ್ದ ಕಾಂಗ್ರೆಸ್ ಎರಡು ಕಡೆ ವಿಜಯ ಸಾಧಿಸಿದೆ. ವಿಧಾನಸಭೆ ಚುನಾವಣೆಗೆ 10 ತಿಂಗಳು ಬಾಕಿ ಇರುವಾಗ ಇಂತಹದೊಂದು ಫಲಿತಾಂಶ ಆ ಪಕ್ಷದ ನಾಯಕರು, ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸಿಗೆ ಇಂಬು ಕೊಟ್ಟಿರುವುದಂತೂ ಹೌದು. ಒಟ್ಟು 75 ಸದಸ್ಯ ಬಲದ ವಿಧಾನಪರಿಷತ್ತಿನಲ್ಲಿ ಈ ಫಲಿತಾಂಶದ ಮೂಲಕ ಬಿಜೆಪಿ 39 ಸದಸ್ಯ ಬಲ ಹೊಂದಿ, ಬಹುಮತ ಸಾಧಿಸಿದೆ. ಐದು ವರ್ಷಗಳ ವಿಧಾನಸಭೆ ಅವಧಿಯಲ್ಲಿ ಮೇಲ್ಮನೆಯಲ್ಲಿ ಬಹುಮತ ದಕ್ಕಿಸಿಕೊಳ್ಳುವ ಅವಕಾಶ ಆಡಳಿತಾರೂಢ ಪಕ್ಷಕ್ಕೆ ಸಾಮಾನ್ಯವಾಗಿ ಸಿಗುತ್ತದೆ. ಬಿಜೆಪಿಗೆ ಅದು ಸಿಕ್ಕಿರುವುದು ಹೆಗ್ಗಳಿಕೆಯೇನಲ್ಲ. ಬಹುಮತದ ಬಲವನ್ನು ಜನಹಿತಕ್ಕೆ, ಅತ್ಯುತ್ತಮ ಸಂಸದೀಯ ಹಾಗೂ ಸಾಂವಿಧಾನಿಕ ಚರ್ಚೆಗೆ ಬಳಸಿಕೊಳ್ಳಲು ಇದು ಬಿಜೆಪಿಗೆ ಸಿಕ್ಕ ಅವಕಾಶ.

ಪರಿಷತ್ತಿನ ಫಲಿತಾಂಶದಲ್ಲಿ ರಾಜ್ಯದ ಮೂರು ಪ್ರಮುಖ ಪಕ್ಷಗಳಿಗೂ ಪಾಠ ಇದೆ

ನಾಲ್ಕು ಕ್ಷೇತ್ರಗಳ ಪೈಕಿ ಚುನಾವಣೆ ಪೂರ್ವದಲ್ಲಿ ಬಿಜೆಪಿ ಎರಡು ಹಾಗೂ ಜೆಡಿಎಸ್ ಎರಡು ಸ್ಥಾನಗಳ ಪ್ರಾತಿನಿಧ್ಯವನ್ನು ಹೊಂದಿದ್ದವು. ಜೆಡಿಎಸ್‌ನಿಂದ ಗೆದ್ದು ಸಭಾಪತಿಯಾಗಿದ್ದ ಬಸವರಾಜ ಹೊರಟ್ಟಿ, ಸಭಾಪತಿ ಸ್ಥಾನಕ್ಕೆ ಕೊನೇ ಗಳಿಗೆಯಲ್ಲಿ ರಾಜೀನಾಮೆ ಕೊಟ್ಟು ಬಿಜೆಪಿ ಸೇರಿದರು. ಈ ಲೆಕ್ಕಾಚಾರದಲ್ಲಿ ಮೂರರಲ್ಲಿ ಗೆಲುವು ಸಾಧಿಸಬೇಕಾದ ಸವಾಲು ಬಿಜೆಪಿಗೆ ಇತ್ತು. ಈ ಹಿಂದೆ ಸತತ ಏಳು ಬಾರಿ ಗೆಲುವು ಕಂಡಿದ್ದ ಹೊರಟ್ಟಿ, ಈ ಬಾರಿಯೂ ಗೆದ್ದಿರುವುದು ಪಕ್ಷದ ಚಿಹ್ನೆಗಿಂತ ಹೆಚ್ಚಾಗಿ ತಮ್ಮ ವೈಯಕ್ತಿಕ ವರ್ಚಸ್ಸಿನ ಮೇಲೆ ಎಂಬುದು ಸರ್ವವಿದಿತ. ಹೊರಟ್ಟಿ ಗೆಲುವು ತಮ್ಮದೇ ಎಂದು ಬಿಜೆಪಿಯವರು ಹೇಳಿಕೊಂಡರೂ ಮತ ಲೆಕ್ಕಾಚಾರ ನೋಡಿದರೆ, ದೊಡ್ಡ ಮಟ್ಟದ ಬದಲಾವಣೆ ಆಗದಿರುವುದು ಗೋಚರವಾಗುತ್ತದೆ. ಈ ಹಿಂದೆ ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾಗ ಹೊರಟ್ಟಿ ಅವರು ಶೇ 50.07ರಷ್ಟು ಮತ ಪಡೆದಿದ್ದರೆ, ಈ ಬಾರಿ ಮತ ಗಳಿಕೆಯ ಪ್ರಮಾಣ ಶೇ 59.47ಕ್ಕೆ ಏರಿದೆ. ಅಲ್ಲಿಗೆ ಬಿಜೆಪಿ ಹೆಚ್ಚುವರಿಯಾಗಿ ಕೊಡಿಸಿದ ಮತಗಳ ಲೆಕ್ಕ ಮೇಲ್ನೋಟಕ್ಕೇ ಸಿಗುತ್ತದೆ. ವಾಯವ್ಯ ಶಿಕ್ಷಕರ ಕ್ಷೇತ್ರ ಬಿಜೆಪಿ ವಶದಲ್ಲಿತ್ತು. ಕ್ಷೇತ್ರ ಪ್ರತಿನಿಧಿಸುತ್ತಿದ್ದ ಅರುಣ ಶಹಾಪುರ ಚುನಾವಣೆಗೆ ಸುದೀರ್ಘ ಅವಧಿಯಿಂದ ತಯಾರಿ ನಡೆಸಿದ್ದರು. ಬೆಳಗಾವಿ ಜಿಲ್ಲೆಯಲ್ಲಿ ಇಬ್ಬರು ಸಂಸದರು, ಇಬ್ಬರು ಸಚಿವರು ಸೇರಿ 13 ಶಾಸಕರು ಇದ್ದರೂ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲಾಗಲಿಲ್ಲ. ಕೊನೇ ಕ್ಷಣದಲ್ಲಿ ಕಣಕ್ಕೆ ಇಳಿದ ಕಾಂಗ್ರೆಸ್‌ನ ಪ್ರಕಾಶ ಹುಕ್ಕೇರಿ ಅವರಿಗೆ ಕ್ಷೇತ್ರವನ್ನು ಬಿಟ್ಟುಕೊಟ್ಟಿದ್ದಾರೆ. ಶಿಕ್ಷಕರ ಸಮಸ್ಯೆಗಳಿಗೆ ಸದಾ ಧ್ವನಿಯಾಗುತ್ತಿದ್ದ ಅಭ್ಯರ್ಥಿಯನ್ನು ಎಲ್ಲ ಬಲ ಇದ್ದರೂ ಗೆಲ್ಲಿಸಿಕೊಳ್ಳುವಲ್ಲಿ ವಿಫಲವಾಗಿದ್ದು, ಬಿಜೆಪಿಯ ಒಗ್ಗಟ್ಟಿನ ಕೊರತೆಯನ್ನು ತೋರಿಸುತ್ತದೆ.

ವಾಯವ್ಯ ಪದವೀಧರ ಕ್ಷೇತ್ರದಲ್ಲಿ ಹಣಮಂತ ನಿರಾಣಿ ಗೆಲುವು ಸಾಧಿಸಿದ್ದಾರಾದರೂ ಅದೇನೂ ಸಲೀಸಿನ ದಾರಿಯಾಗಿರಲಿಲ್ಲ. ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮಧು ಮಾದೇಗೌಡ ಆಯ್ಕೆಯಾಗಿದ್ದಾರೆ. ಭಾರಿ ಲೆಕ್ಕಾಚಾರ ಹಾಕಿದ್ದ ಬಿಜೆಪಿಯು ಮೈ.ವಿ. ರವಿಶಂಕರ್ ಅವರನ್ನು ಕಣಕ್ಕೆ ಇಳಿಸಿತ್ತು. ಇಬ್ಬರು ಸಂಸದರು, ಹಲವು ಶಾಸಕರಿದ್ದರೂ ಬಿಜೆಪಿ ಗೆಲುವಿನ ದಡ ಮುಟ್ಟಲಿಲ್ಲ. ಮೊದಲೇ ಅಭ್ಯರ್ಥಿಯನ್ನು ಗೊತ್ತುಮಾಡಿ, ಚುನಾವಣೆಗೆ ಸಜ್ಜಾಗುವುದರ ಜೊತೆಗೆ ಒಮ್ಮನಸ್ಸಿನಿಂದ ದುಡಿದರೆ ಫಲ ನಿಶ್ಚಿತ ಎಂಬುದು ಕಾಂಗ್ರೆಸ್ ನಾಯಕರಿಗೆ ಫಲಿತಾಂಶ ಕೊಟ್ಟ ಪಾಠ. ಮಂಡ್ಯ, ಹಾಸನ, ಮೈಸೂರು, ಚಾಮರಾಜನಗರ ವ್ಯಾಪ್ತಿಯ ಈ ಕ್ಷೇತ್ರ ಜೆಡಿಎಸ್‌ನ ಭದ್ರಕೋಟೆಯಾಗಿತ್ತು. ಆದರೆ, ಅದು ಇಲ್ಲಿ ಮೂರನೇ ಸ್ಥಾನಕ್ಕೆ ಇಳಿದಿದೆ. ದ್ವಂದ್ವ ನಿಲುವು, ಆಡಳಿತ ಪಕ್ಷಕ್ಕಿಂತ ವಿರೋಧ ಪಕ್ಷದ ಟೀಕೆಗೆ ಹೆಚ್ಚು ಸಮಯ ಮೀಸಲಿಡುವ ದಳಪತಿಗಳ ನಡೆ, ಆ ಪಕ್ಷದ ಮೇಲಿನ ವಿಶ್ವಾಸ ಕುಗ್ಗಿಸುತ್ತಿರುವುದನ್ನು ಫಲಿತಾಂಶ ಬಿಂಬಿಸಿದೆ. ಸ್ಥಳೀಯ ಸಂಸ್ಥೆಗಳಿಂದ ಪರಿಷತ್ತಿಗೆ ಇತ್ತೀಚೆಗೆ ನಡೆದಿದ್ದ ಚುನಾವಣೆಯಲ್ಲಿ ಮಂಡ್ಯವನ್ನು ಕಾಂಗ್ರೆಸ್ ಕಿತ್ತುಕೊಂಡಿತ್ತು, ಮೈಸೂರಿನ ದ್ವಿಸದಸ್ಯ ಕ್ಷೇತ್ರದಲ್ಲಿ ಒಂದರಲ್ಲಿ ಮಾತ್ರ ಜೆಡಿಎಸ್ ಗೆದ್ದಿತ್ತು. ಮತ್ತೊಂದು ಕಾಂಗ್ರೆಸ್ ಪಾಲಾಗಿತ್ತು. ತಮ್ಮದೇ ಮತಬ್ಯಾಂಕ್ ಎಂದು ಜೆಡಿಎಸ್ ನಾಯಕರು ದೃಢವಾಗಿ ನಂಬಿದ್ದ ಕಡೆಗಳಲ್ಲಿ ಕಾಂಗ್ರೆಸ್ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುತ್ತಿರುವುದು ಜೆಡಿಎಸ್‌ಗೆ ಆಘಾತವೇ ಸರಿ. ಯಾವುದೇ ಚುನಾವಣೆ ನಡೆಯಲಿ ಆಡಳಿತ ಪಕ್ಷ ಹೆಚ್ಚಿನ ಸ್ಥಾನ ಗೆದ್ದುಕೊಳ್ಳುವುದು ರೂಢಿ. ವಿವಾದಗಳ ಹುಯಿಲೆಬ್ಬಿಸಿದರೆ ಗೆಲುವು ಶಾಶ್ವತ ಎಂದು ನಂಬಿ ಕೂತಿರುವ ಬಿಜೆಪಿ ನಾಯಕರಿಗೆ ಪ್ರಜ್ಞಾವಂತ ಮತದಾರರು ಈ ಚುನಾವಣೆ ಮೂಲಕ ಬೇರೊಂದು ಸಂದೇಶ ರವಾನಿಸಿದ್ದಾರೆ. ಪದವೀಧರರು, ಶಿಕ್ಷಕರು ಸೇರಿದಂತೆ ವಿದ್ಯಾವಂತ ಮಧ್ಯಮವರ್ಗ ಬಿಜೆಪಿ ಬೆನ್ನಿಗಿದೆ ಎಂಬುದು ಆ ಪಕ್ಷದ ನಾಯಕರ ವಿಶ್ವಾಸ. ಫಲಿತಾಂಶ ನೋಡಿದರೆ ಅದು ಪೂರ್ಣಸತ್ಯವಲ್ಲ ಎಂಬುದು ಅರಿವಿಗೆ ಬರುತ್ತದೆ. ಸರ್ಕಾರದ ವರ್ಚಸ್ಸು ಕುಗ್ಗಿರುವುದು, ಬೆಲೆ ಏರಿಕೆಯ ಹೊಡೆತ, ಜನಸಾಮಾನ್ಯರ ನಿತ್ಯ ಸಂಕಟಗಳ ನಿವಾರಣೆಗೆ ಸರ್ಕಾರ ಆಸರೆಯಾಗದೇ ಇರುವುದು ಈ ಚುನಾವಣೆಯ ಮೇಲೆ ಪರಿಣಾಮ ಬೀರಿರಬಹುದು. ಇದು ಬಿಜೆಪಿಗೆ ಎಚ್ಚರಿಕೆಯ ಗಂಟೆ. ಒಬ್ಬರು ಮತ್ತೊಬ್ಬರ ಕಾಲೆಳೆಯುವುದನ್ನು ಬಿಟ್ಟು ಒಗ್ಗಟ್ಟು, ಮುಂದಾಲೋಚನೆಯಿಂದ ಚುನಾವಣೆ ಎದುರಿಸಿದರೆ ವಿಜಯಲಕ್ಷ್ಮಿ ಒಲಿಯಲಿದ್ದಾಳೆ ಎಂಬುದು ಕಾಂಗ್ರೆಸ್ ನಾಯಕರಿಗೆ ಮತದಾರ ಕೊಟ್ಟ ಸಂದೇಶವೂ ಹೌದು.

ದಿನದ ಟ್ವೀಟ್

ವಿಚಾರಣೆಯ ವೈಪರೀತ್ಯ!
8 ವರ್ಷಗಳ ಕಾಲ ತನಿಖೆ ಮತ್ತು ನ್ಯಾಯಾಲಯದ ವಿಚಾರಣೆ ಬಳಿಕ 30 ಗಂಟೆಗಳವರೆಗೆ ವಿಚಾರಣೆ! ಇದು, ತನಿಖಾ ಸಂಸ್ಥೆಗಳ ಬಗ್ಗೆ ನಿಮಗೆ ಏನನ್ನು ಹೇಳುತ್ತದೆ?

ಎಂ.ಕೆ.ವೇಣು, ಪತ್ರಕರ್ತ

ಕಿಡಿನುಡಿ

ಬೆಂಗಳೂರಿನ ಎಲ್ಲಾ ಕಡೆ ರೋಡ್ ಶೋ ಮಾಡೋದಕ್ಕೆ ಮಾನ್ಯ ಮೋದಿಯವರನ್ನು ಕೋರುತ್ತೇನೆ. ಹೊಂಡಗಳು ಬಿದ್ದಿರೋ ಬೆಂಗಳೂರು ರಸ್ತೆಗಳಿಗೆ ಈ ಮೂಲಕವಾದರೂ ಟಾರ್ ಕಾಣೋ ಭಾಗ್ಯ ಸಿಗಲಿ.

ಚೇತನ್ ಜೀರಾಳ್, ನಾಗರಿಕ

25 ವರ್ಷಗಳ ಹಿಂದೆ
ಮಂಗಳವಾರ, 17-6-1997

• ಸುವರ್ಣ ಮಹೋತ್ಸವದ ಸುಪ್ರಭಾತ

ಚಿನ್ನದ ವರ್ಷ ಆರಂಭ. ಭಾರತದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದೊಂದಿಗೆ ನಮ್ಮೂ ಈಗ ಚಿನ್ನದ ಹಬ್ಬದ ಸಂಭ್ರಮ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಇಂದು ಸುವರ್ಣ ಮಹೋತ್ಸವ ವರ್ಷದಲ್ಲಿ ಹೆಜ್ಜೆ ಇರಿಸಿವೆ.

ದೇಶದ ಸ್ವಾತಂತ್ರ್ಯದ ಸುಪ್ರಭಾತದಲ್ಲೇ ಪ್ರಜಾಸತ್ತಾತ್ಮಕ ಆಶಯಗಳಿಗೆ ದನಿಯಾಗಬೇಕೆಂದು ಪತ್ರಿಕೆಗಳ ಅಗತ್ಯವನ್ನು ನಮ್ಮ ಹಿರಿಯರು ದೂರದೃಷ್ಟಿ ಹಾಗೂ ಜೀವನಾನುಭವದಿಂದ ಕಂಡುಕೊಂಡರು. ಹೀಗೆ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ ಕನಸು ಮೂಡಿತು.

17, ಜೂನ್ 1948.

ಈ ಕನಸಿನ ಸಾಕಾರವಾದ ಮೊದಲು 'ಡೆಕ್ಕನ್ ಹೆರಾಲ್ಡ್' ಬೆಳಕು ಕಂಡಿತು. ನಂತರ ಸಮಸ್ತ ಕನ್ನಡಿಗರ ದನಿಯಾಗಿ ಅದೇ ವರ್ಷ ಅಕ್ಟೋಬರ್ 15ರಂದು ಸೂರ್ಯೋದಯಕ್ಕೆ 'ಪ್ರಜಾವಾಣಿ' ಮೊಳಗಿತು.

• ರಾಷ್ಟ್ರಪತಿ ಹುದ್ದೆಗೆ ಜಂಟಿ ಅಭ್ಯರ್ಥಿ ನಾರಾಯಣನ್

ನವದೆಹಲಿ, ಜೂನ್ 16– ರಾಷ್ಟ್ರಪತಿ ಹುದ್ದೆಗೆ ಸಂಯುಕ್ತ ರಂಗ ಹಾಗೂ ಕಾಂಗ್ರೆಸ್ ಪಕ್ಷದ ಜಂಟಿ ಅಭ್ಯರ್ಥಿಯಾಗಿ ಉಪರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರನ್ನು ಇಂದು ಆಯ್ಕೆ ಮಾಡಲಾಗಿದೆ.

50 ವರ್ಷಗಳ ಹಿಂದೆ
ಶನಿವಾರ, 17-6-1972

• ಕಾರ್ಮಿಕ ಸಂಘಗಳು ಪಕ್ಷ ರಾಜಕೀಯದಿಂದ ದೂರವಿರಲು ಸಾಧ್ಯವಿಲ್ಲ: ಅರಸು

ಬೆಂಗಳೂರು, ಜೂನ್ 16– ಭಾರತದ ಜನತಂತ್ರ ವ್ಯವಸ್ಥೆಯಲ್ಲಿ ಕಾರ್ಮಿಕ ಸಂಘಗಳು ಪಕ್ಷ ರಾಜಕೀಯದಿಂದ ದೂರವಿರಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟ ಮುಖ್ಯ ಮಂತ್ರಿ ದೇವರಾಜ ಅರಸು ಅವರು ಬಂದಿದ್ದರು.

'ಒಂದಲ್ಲ ಒಂದು ರೀತಿಯಲ್ಲಿ ಕಾರ್ಮಿಕ ಸಂಘಗಳ ಮೇಲೆ ರಾಜಕೀಯ ಪಕ್ಷಗಳು, ವ್ಯಕ್ತಿಗಳ ಪ್ರಭಾವ ಬಿದ್ದೇ ಬೀಳುತ್ತದೆ. ಕಾರ್ಮಿಕರ ಬೆಂಬಲ ನಿರೀಕ್ಷಿಸುವ ಪಕ್ಷಗಳು ಯಾವುದಾದರೊಂದು ರೀತಿಯಲ್ಲಿ ಕಾರ್ಮಿಕ ಸಂಘಗಳಲ್ಲಿ ಪ್ರವೇಶ ದೊರಕಿಸಿಕೊಳ್ಳುತ್ತವೆ' ಎಂದು ಅರಸು ಹೇಳಿದರು.

ಕೈಗಾರಿಕೆಗಳಲ್ಲಿ ಕಾರ್ಮಿಕ ಸಂಘಗಳ ಪೈಪೋಟಿ ಮತ್ತು ಅದರ ಪರಿಣಾಮಗಳ ವಿಶ್ಲೇಷಣೆಗಾಗಿ ನಗರದಲ್ಲಿ ಏರ್ಪಾಡಾದ ಎರಡು ದಿನಗಳ ವಿಚಾರಗೋಷ್ಠಿಯ ಮುಕ್ತಾಯ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಶ್ರೀ ಅರಸು ಮಾತನಾಡುತ್ತಿದ್ದರು.

• ಇದ್ದಿಲು ಸರಬರಾಜಿನಲ್ಲಿ ಅಕ್ರಮ: 11 ಜನ ನೌಕರರ ಮೇಲೆ ಉಗ್ರ ಕ್ರಮ

ಭದ್ರಾವತಿ, ಜೂನ್ 16– ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಇದ್ದಿಲು ಸರಬರಾಜಿಗೆ ಸಂಬಂಧಪಟ್ಟ ಅಕ್ರಮ ವ್ಯವಹಾರಗಳ ಬಗ್ಗೆ ನಡೆದ ತನಿಖೆಯ ಪರಿಣಾಮವಾಗಿ, ಇದಕ್ಕೆ ನೇರವಾಗಿ ಸಂಬಂಧಪಟ್ಟ, ಕಾರ್ಖಾನೆಯ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವ ಹನ್ನೊಂದು ಜನ ನೌಕರರ ಮೇಲೆ ಉಗ್ರ ಕ್ರಮ ಕೈಗೊಳ್ಳಲಾಗಿದೆಯೆಂದು ತಿಳಿದುಬಂದಿದೆ.

ರಸ್ತೆಯಲ್ಲಿ ಗಣ್ಯರ ಸಂಚಾರದ ಹೆಸರಿನಲ್ಲಿ ಸಾರ್ವಜನಿಕರು– ಪೊಲೀಸರಿಗೆ ಕಿರುಕುಳ ಬೇಕೇ?

ವಿಐಪಿ ಸಂಚಾರ: ವಿಪರೀತ ಶಿಷ್ಟಾಚಾರ!

ವಿಶ್ಲೇಷಣೆ
ಚಂದ್ರಕಾಂತ ವಡ್ಡು

ಬೆಂಗಳೂರಿನ ನಮ್ಮ ಅಪಾರ್ಟ್‌ಮೆಂಟ್ ನಿವಾಸಿಗಳ ವಾಟ್ಸ್‌ಆ್ಯಪ್ ಗುಂಪಿನಲ್ಲಿ ಕಳೆದ ಮಂಗಳವಾರ ಹರಿದುಬಂದ ಒಂದು ಸಂದೇಶದಲ್ಲಿ, ಬೆಳಗ್ಗೆ 10.15ರಿಂದ ಮಧ್ಯಾಹ್ನ 12.30ರವರೆಗೆ ಕನಕಪುರ ರಸ್ತೆಯಲ್ಲಿ ಯಾವ ಕಾರಣಕ್ಕೂ ಸಂಚರಿಸದಂತೆ ಎಚ್ಚರಿಸಲಾಯಿತು. ಈ ಹಾದಿಯ ಶಾಲೆಗಳಿಗೆ ರಜೆಯನ್ನೂ ಘೋಷಿಸಲಾಗಿತ್ತು. ಬಿಕೋ ಎನ್ನುವ ರಸ್ತೆಯ ಅಕ್ಕಪಕ್ಕದ ವ್ಯಾಪಾರಸ್ಥರು ಅಂಗಡಿಗಳನ್ನು ಮುಚ್ಚಿ ನಿಡುಸುಯ್ಯುತ್ತ ಕುಳಿತರು. ಪೊಲೀಸರ ಕ್ರಮದಿಂದ ಸಾವಿರಾರು ಜನ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಅಡಚಣೆ ಅನುಭವಿಸಬೇಕಾಯಿತು.

ಅಧಿಕೃತ ಶಿಷ್ಟಾಚಾರ ಪಾಲಿಸಲು ಇಲಾಖೆಯ ಶ್ರೇಣೀಕೃತ ವ್ಯವಸ್ಥೆಯಲ್ಲಿ ಪೊಲೀಸರು ವಿವಿಧ ಹಂತಗಳಲ್ಲಿ ವಹಿಸಿದ ಪರಿಶ್ರಮ ಕಡಿಮೆಯೇನಲ್ಲ. ಇಷ್ಟಕ್ಕೆಲ್ಲಾ ಕಾರಣ, ವಸಂತಪುರದಲ್ಲಿ ಇಸ್ಕಾನ್ ನಿರ್ಮಿಸಿರುವ ರಾಜಾಧಿರಾಜ ಗೋವಿಂದ ದೇವಾಲಯ ಉದ್ಘಾಟಿಸಲು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ನೀಡಿದ ಭೇಟಿ!

ಯಾವುದೇ ಸಾರ್ವಜನಿಕ ವ್ಯಕ್ತಿ ಜವಾಬ್ದಾರಿಯುತ ಉನ್ನತ ಸ್ಥಾನ ಅಲಂಕರಿಸಿದ ಮಾತ್ರಕ್ಕೆ ತನ್ನ ವೈಯಕ್ತಿಕ ಧಾರ್ಮಿಕ ನಂಬಿಕೆ, ಆಚರಣೆ ಅಥವಾ ನಿರಾಕರಣೆಯಿಂದ ವಿಮುಖವಾಗಬೇಕೆಂದು ಅಪೇಕ್ಷಿಸಲಾಗದು. ಆದರೆ ಅದು ಖಾಸಗಿ ನೆಲೆಯಲ್ಲಿ ಅಭಿವ್ಯಕ್ತಿಗೆ, ಅನುಸರಣೆಗೆ ಅರ್ಹ. ಹೀಗಿರುವಾಗ, ಸೆಕ್ಯುಲರ್ ಆಶಯದ ಸಾಂವಿಧಾನಿಕ ಹುದ್ದೆಯಲ್ಲಿ ಇದ್ದುಕೊಂಡು ಸಾರ್ವಜನಿಕ ವೆಚ್ಚದಲ್ಲಿ, ಶಿಷ್ಟಾಚಾರದ ಚೌಕಟ್ಟಿನಲ್ಲಿ ಖಾಸಗಿ ನಂಬಿಕೆಗೆ ಅನುಗುಣವಾದ ಧಾರ್ಮಿಕ ಕೇಂದ್ರದ ಉದ್ಘಾಟನೆಗೆ ಮುಂದಾಗುವುದು ಎಷ್ಟು ಸರಿ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ.

ಇತ್ತೀಚೆಗೆ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಹುಬ್ಬಳ್ಳಿ ಕಡೆಗೆ ಸಂಚರಿಸುತ್ತಿದ್ದೆ. ಬೆಂಗಳೂರಿನಿಂದ ಹಿರಿಯೂರು ತನಕ ಹೆಜ್ಜೆಹೆಜ್ಜೆಗೂ ಪೊಲೀಸರು. ಅಲ್ಲಲ್ಲಿ ಬ್ಯಾರಿಕೇಡುಗಳ ಅಡೆತಡೆ. ಕೆಲವೆಡೆ ವಾಹನಗಳನ್ನು ಹೆದ್ದಾರಿಯಿಂದ ಕೆಳಗಿಳಿಸಿ ಸರ್ವಿಸ್ ರಸ್ತೆಯಲ್ಲಿ ಸಂಚರಿಸುವಂತೆ ನಿರ್ದೇಶನ ನೀಡುತ್ತಿದ್ದರು.

ಅನನುಕೂಲಕ್ಕೆ ಈಡಾಗುವ ಜನರ ಹಿಡಿಶಾಪಗಳಿಗೆ ಕಿವಿಯಾಗುತ್ತಾ, ಬೇಸಿಗೆಯ ಬಿಸಿಲಿನಲ್ಲಿ ಬೆವರಿಳಿಸುತ್ತಾ, ದಾರಿಯುದ್ದಕ್ಕೂ ನಿಂತ ಕೆಳಹಂತದ ಪೊಲೀಸರಿಗೆ ಈ ಕರ್ತವ್ಯವು ಖುಷಿ ನೀಡುವಂತಹದ್ದಾಗಿರಲಿಲ್ಲ. ಸಾರ್ವಜನಿಕರು ತಮ್ಮ ಅಸಮಾಧಾನವನ್ನು ಸಿಡುಕಿಯೋ ಗೊಣಗಿಯೋ ಹೊರಹಾಕಬಹುದಿತ್ತು. ಆ ಸ್ವಾತಂತ್ರ್ಯವೂ ಇಲ್ಲದ ಪೊಲೀಸರ ಅಸಹಾಯಕತೆ ಮರುಕ ಹುಟ್ಟಿಸುವಂತಹದು. ಅಂದು ಅಲ್ಲಿ ಹಾದುಹೋಗಬೇಕಿದ್ದವರು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್.

ಮೊನ್ನೆ ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಒಬ್ಬನೇ ನಡೆದು ಬರುತ್ತಿದ್ದೆ. ಖನಿಜ ಭವನದ ಎದುರಿನ ಮುಖ್ಯಮಂತ್ರಿ ಅಧಿಕೃತ ನಿವಾಸದ ಗೇಟ್ ಬಳಿ ಪೊಲೀಸರು ತುಂಬಾ ಗಡಿಬಿಡಿಯಲ್ಲಿದ್ದರು. ಬಹುಶಃ ಮುಖ್ಯಮಂತ್ರಿ ಹೊರಗೆ ಹೊರಡುವ ಸಮಯವಿರಬೇಕು. ನಾನೂ ಕುತೂಹಲದಿಂದ ಒಂದು ಬದಿಯಲ್ಲಿ ನಿಂತು ಸಂಚಾರ ಪೊಲೀಸರ ವರ್ತನೆ ಗಮನಿಸತೊಡಗಿದೆ. ನಡುವಯಸ್ಸಿನ ಎಎಸ್‌ಐ ಒಬ್ಬರು ಮುಖ್ಯ ರಸ್ತೆಗೆ ಇಳಿದು, ಮೈಮೇಲೆ ದೇವರು ಬಂದಂತೆ ಕುಣಿಯತೊಡಗಿದರು. ರಸ್ತೆ ಬದಿಗಿದ್ದ ಹರೆಯದ ಕಾನ್‌ಸ್ಟೆಬಲ್‌ಗಳನ್ನು ಗದರಿ ಕರ್ತವ್ಯಕ್ಕೆ ಅಣಿಗೊಳಿಸಿದರು.

ಯಾವುದೇ ಬ್ಯಾರಿಕೇಡುಗಳಿಲ್ಲದೆ ಪೊಲೀಸರು ಇದ್ದಕ್ಕಿದ್ದಂತೆ ರಸ್ತೆಗೆ ಅಡ್ಡಲಾಗಿ ನಿಂತು, ಸರಾಗವಾಗಿ ಸಂಚರಿಸುತ್ತಿದ್ದ ವಾಹನಗಳನ್ನು ತಡೆದ ಕ್ರಮ ವಾಹನ ಚಾಲಕರಲ್ಲಿ ಗಲಿಬಿಲಿ ಉಂಟು ಮಾಡಿತ್ತು. ಅನಿರೀಕ್ಷಿತ ತಡೆಯಿಂದಾಗಿ ತಕ್ಷಣ ಬ್ರೇಕ್ ಹಾಕಿದ ದ್ವಿಚಕ್ರ ವಾಹನ ಚಾಲಕನೊಬ್ಬ ಅಸಹನೆಯಿಂದ 'ಹೀಗೇಕೆ?' ಎಂದು ಪ್ರಶ್ನಿಸಿದ. ಆದರೆ ಪ್ರಭುಗಳ ಸೇವೆಗೆ ನಿಷ್ಠರಾದ ಕಾನ್‌ಸ್ಟೆಬಲ್‌ಗಳಿಗೆ ಸಭ್ಯತೆಯಿಂದ ಉತ್ತರಿಸುವ ವ್ಯವಧಾನವಾಗಲೀ ನಾಗರಿಕರೊಂದಿಗಿನ ಸೌಜನ್ಯದ ವರ್ತನೆಯ ವೃತ್ತಿಪರ ತರಬೇತಿಯಾಗಲೀ ಇರಲಿಲ್ಲ!

ಅಷ್ಟರಲ್ಲಿ ಮುಖ್ಯಮಂತ್ರಿ ಹೊರಬರುವುದು ತಡವಾಗುತ್ತದೆಂದು ತಿಳಿದು, ನಿಲ್ಲಿಸಿದ ವಾಹನಗಳಿಗೆ ಸಂಚರಿಸಲು ದಾರಿ ಬಿಟ್ಟರು. ಒಂದೆರಡು ಬಾರಿ ಪುನರಾವರ್ತನೆಯಾದ ಪೊಲೀಸರ ಈ 'ತಡೆ- ನಡೆ' ಆಟ ಮುಖ್ಯಮಂತ್ರಿಯವರ ನಿರ್ಗಮನದ ನಂತರ ನಿಂತಿತು.

ಇಲ್ಲಿ ಪ್ರಸ್ತಾಪಿಸಿದ ರಾಷ್ಟ್ರಪತಿ, ರಾಜ್ಯಪಾಲರು ಮತ್ತು ಮುಖ್ಯಮಂತ್ರಿಯವರ ಸಂಚಾರ ಶಿಷ್ಟಾಚಾರಕ್ಕೆ ಸಂಬಂಧಿಸಿದ ಮೂರು ಪ್ರಕರಣಗಳು ವಿಶೇಷವಾದ ಪ್ರತ್ಯೇಕ ಘಟನೆಗಳೇನಲ್ಲ. ಬೆಂಗಳೂರಿನಲ್ಲಂತೂ ಮಂತ್ರಿಗಳ ರಸ್ತೆ ಸಂಚಾರದ ವೇಳೆ ನಾಗರಿಕರು ಅನುಭವಿಸುವ ಕಿರಿಕಿರಿ ಎಷ್ಟು ಸಾಮಾನ್ಯ, ಸಹಜ ಆಗಿದೆಯೆಂದರೆ, ಜನರು ಗೊಣಗುವುದನ್ನೂ ತ್ಯಜಿಸಿ ಈ ಅನಿವಾರ್ಯ ಸ್ಥಿತಿಗೆ ಹೊಂದಿಕೊಂಡಿದ್ದಾರೆ.

ಗಣ್ಯವ್ಯಕ್ತಿಗಳಿಗೆ ಸಂಬಂಧಿಸಿದ ಶಿಷ್ಟಾಚಾರ ಪಾಲನೆಯಲ್ಲಿ ಮೂಲತಃ ಎರಡು ಅಂಶಗಳು ಅಡಗಿರುತ್ತವೆ: ಒಂದು, ಗಣ್ಯರ ಸುರಕ್ಷತೆ. ಇನ್ನೊಂದು, ಸ್ಥಾನಗೌರವ. ಪ್ರಸಕ್ತ ಕಾಲಮಾನದಲ್ಲಿ ಚಾಲ್ತಿಯಲ್ಲಿರುವ

ಶಿಷ್ಟಾಚಾರದ ನಡಾವಳಿಗಳು ಇವೆರಡೇ ಉದ್ದೇಶಗಳ ಪರಿಪಾಲನೆಗೆ ಸೀಮಿತವಾಗಿವೆಯೇ ಎಂಬ ಪ್ರಶ್ನೆಗೆ 'ಹೌದು' ಎಂದು ಸರಳವಾಗಿ ಗೋಣು ಹಾಕಲಾಗದು.

ಮಾದಕವಸ್ತು ಸಾಗಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸದ ಭದ್ರತಾ ಸಿಬ್ಬಂದಿಯೇ ಬಂಧನಕ್ಕೆ ಒಳಗಾದ ನಿದರ್ಶನ ನಮ್ಮ ಮುಂದಿದೆ. ಗಣ್ಯರ ಭದ್ರತೆಯ ವಿಷಯದಲ್ಲಿ ನಮ್ಮ ವ್ಯವಸ್ಥೆಯ ಹುಳುಕನ್ನು, ಶಿಷ್ಟಾಚಾರ ಮತ್ತು ದಕ್ಷತೆಯ ಅಭಾವವನ್ನು ಇದು ನಿಚ್ಚಳವಾಗಿ ಪ್ರತಿಬಿಂಬಿಸುತ್ತದೆ.

ಇನ್ನು, ಅತಿ ಗಣ್ಯರ ಸ್ಥಾನಗೌರವದ ಪ್ರಶ್ನೆ. ಬಹುಪಾಲು ರಾಜಕಾರಣಿಗಳು ಆಡಳಿತ ನಡೆಸುವುದಕ್ಕಿಂತ ದರ್ಬಾರು ಮಾಡುವುದಕ್ಕಾಗಿಯೇ ಅಧಿಕಾರಕ್ಕೆ ಬರುತ್ತಾರೆ. ಅವರಿಗೆ ಈ ಶಿಷ್ಟಾಚಾರದ ನೀತಿನಿಯಮಗಳು ದರ್ಪ- ದೌಲತ್ತು ತೋರ್ಪಡಿಸುವ ಅವಕಾಶಗಳಾಗಿ ಒದಗಿಬರುತ್ತವೆ. ಅಷ್ಟೇ ಅಲ್ಲ, ಗಣ್ಯರು ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಾಗಲೂ ಶಿಷ್ಟಾಚಾರ ಸಂಭ್ರಮಿಸಲು ಹೇಸುವುದಿಲ್ಲ.

ಅತಿ ಗಣ್ಯರ ಆಗಮನದಿಂದ ಸಾರ್ವಜನಿಕರಿಗೆ ಕಿರಿಕಿರಿ, ಕಿರುಕುಳದ ಜೊತೆಗೆ ಒಂದು ಅನುಕೂಲವೂ ಆಗುತ್ತದೆ. ಗಣ್ಯರು ಸಂಚರಿಸುವ ದಾರಿ ರಾತ್ರೋರಾತ್ರಿ ಡಾಂಬರು ಹಾಕಿಸಿಕೊಂಡು ಸಿದ್ಧಗೊಳ್ಳುತ್ತದೆ, ಗೋಡೆಗಳು ಬಣ್ಣ ಬಳಿಸಿಕೊಂಡು ಸಿಂಗಾರಗೊಳ್ಳುತ್ತವೆ, ಬತ್ತಿಹೋದ ಬೀದಿ ದೀಪಗಳು ಬೆಳಗುತ್ತವೆ. ಈ ಕಾರಣಕ್ಕಾಗಿಯೇ ತಮ್ಮೂರಿಗೂ ತಮ್ಮ ಬಡಾವಣೆಗೂ ಅತಿ ಗಣ್ಯರು ಬರಲಿ ಎಂದು ಆಶಿಸುವ ಸನ್ನಿವೇಶದ ಸೃಷ್ಟಿಯಲ್ಲಿ ಪ್ರಜಾಪ್ರಭುತ್ವದ ವ್ಯಂಗ್ಯ ಮತ್ತು ದುರಂತ ಎರಡೂ ಬೆರೆತಿವೆ!

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಪರಿ 'ಗಣ್ಯವ್ಯಕ್ತಿ ಸಂಸ್ಕೃತಿ'ಯ ಪರಿಪಾಲನೆಯ ಅಗತ್ಯವಿದೆಯೇ? ಓಲ್ಡ್ ಬ್ರಿಟಿಷ್ ರಾಯರ ಕಾಲದ ಶಿಷ್ಟಾಚಾರಗಳು ಪ್ರಜಾಕೇಂದ್ರಿತವಾದ ಆಧುನಿಕ ಆಡಳಿತದ ಸಂದರ್ಭದಲ್ಲಿ ಎಷ್ಟು ಪ್ರಸ್ತುತ? ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬೀಳುವ ಹೊರೆ ಎಷ್ಟು? ಅನಗತ್ಯವಾಗಿ ವ್ಯಯವಾಗುವ ಪೊಲೀಸರು ಮತ್ತು ನಾಗರಿಕರ 'ಮಾನವ ಸಮಯ-ಶಕ್ತಿ'ಯ ಲೆಕ್ಕ ಯಾರಲ್ಲಿದೆ?

ಈ ಹಿನ್ನೆಲೆಯಲ್ಲಿ ಗಣ್ಯವ್ಯಕ್ತಿಗಳ ಶಿಷ್ಟಾಚಾರ ನಿಯಮಗಳ ಪ್ರಾಥಮಿಕ ಉದ್ದೇಶವಾದ ಭದ್ರತೆ ಮತ್ತು ಸ್ಥಾನಗೌರವಗಳ ಆಮೂಲಾಗ್ರ ಪುನರ್‌ವ್ಯಾಖ್ಯಾನ, ಅವಲೋಕನ ಆಗಬೇಕಿದೆ. ಗಣ್ಯರ ಭದ್ರತೆಯ ಜೊತೆಗೆ ನಾಗರಿಕರ ಮುಕ್ತ ಸಂಚಾರ ಮತ್ತು ಸಮಾನತೆಯ ಸಂವಿಧಾನದತ್ತ ಹಕ್ಕಿನ ರಕ್ಷಣೆಯೂ ಆಗಬೇಕು. ಈ ಕಾರ್ಯಕ್ಕೆ ಬಹಳಷ್ಟು ಆಧುನಿಕ, ವೈಜ್ಞಾನಿಕ, ತಾಂತ್ರಿಕ ಪರಿಣತಿ ಲಭ್ಯವಿದೆ. ಇದಕ್ಕೆ ಅಮೆರಿಕ 'ಸೀಕ್ರೆಟ್ ಸರ್ವಿಸ್' ಮೂಲಕ ತನ್ನ ಅಧ್ಯಕ್ಷರ ಭದ್ರತೆಗೆ ಅಳವಡಿಸಿಕೊಂಡಿರುವ ಮಾದರಿಯನ್ನು ಪರಿಗಣಿಸಬಹುದು. ಅಲ್ಲಿನ ಅಧ್ಯಕ್ಷರು ಸಂಚರಿಸುವ ಮಾರ್ಗವನ್ನು ಸಂಪೂರ್ಣ ಸುಪರ್ದಿಗೆ ಪಡೆಯುವ 'ಸೀಕ್ರೆಟ್ ಸರ್ವಿಸ್' ಸ್ಥಳೀಯ ಪೊಲೀಸರನ್ನು ನಿರ್ದಿಷ್ಟ ಕಾರ್ಯಕ್ಕೆ ಅಗತ್ಯಕ್ಕೆ ತಕ್ಕಷ್ಟು ಮಾತ್ರ ಬಳಸಿಕೊಳ್ಳುತ್ತದೆ. ಇದಕ್ಕೆ ತದ್ವಿರುದ್ಧವಾಗಿ ನಮ್ಮಲ್ಲಿ ವಿಶೇಷ ತರಬೇತಿ ಇಲ್ಲದ ಪೊಲೀಸರನ್ನು ಅನಗತ್ಯವಾಗಿ ಸಾವಿರಾರು ಸಂಖ್ಯೆಯಲ್ಲಿ ವ್ಯರ್ಥವಾಗಿ ನಿಯೋಜಿಸಿ ಗೋಜಲೆಬ್ಬಿಸುತ್ತೇವೆ.

ಅತಿ ಗಣ್ಯರ ಅತಿ ಶಿಷ್ಟಾಚಾರ ನಿಯಮಗಳಿಗೆ ತಿದ್ದುಪಡಿ ಮಾಡಿ ಕನಿಷ್ಠ ಒಂದು ಮಿತಿಗಾದರೂ ಒಳಪಡಿಸಲು ಇದು ಸಕಾಲ!

ಚುರುಮುರಿ



ಜಗವೇ ನಾಟಕರಂಗ

• ನಾರಾಯಣ ರಾಯಚೂರ್

ಬಹಳ ದಿನಗಳ ಬಳಿಕ ಕಲಾಕ್ಷೇತ್ರಕ್ಕೆ ಹೋಗಿದ್ದೆ. ಬಹಳಷ್ಟು ಬದಲಾವಣೆ, ಹೊಸ ಪೋಸ್ಟರ್‌ಗಳು, ಬೋರ್ಡುಗಳು. ಹೊಚ್ಚ ಹೊಸ ನಾಟಕ- 'ಆತ್ಮಸಾಕ್ಷಿ', ನಿರ್ದೇಶನ- ಸ್ವರೂಪ್. ಇನ್ನೊಂದು 'ಚಡ್ಡಿ ದಹನ', ನಿರ್ದೇಶನ- ತರುಣ್... ಹಾಗೇ ಕಣ್ ಆಡಸ್ಕೊಂಡು ಕ್ಯಾಂಟೀನ್ ಕಡೆ ಹೋಗಿ 'ಕಾಫಿ' ಅಂದೆ. 'ಹಾಲಿದೆ, ಕೊಡ್ಲಾ ಸಾರ್', 'ಸರಿ', 'ಪ್ಲೇನಾ...ಕೇಸರೀನಾ?' ಅಂದ. 'ಬಿಳಿ ಹಾಲೇ ಕೊಡಿ'.

ಅಷ್ಟರಲ್ಲಿ ನಮ್ಮ ಹುಬ್ಬಳ್ಳಿ ರಂಗಕರ್ಮಿ ಪಾಟೀಲರು 'ಹ್ಯಾಂಗದಿರೀ ಸರಾ?' ಅಂದ್ರು. 'ಏನು ನಿಮ್ಮ ಕಡೀನೂ ಇಂಥಾ ನಾಟಕಾನss ಅವನ್ನೋ?'

'ಏ... ಅಲ್ಲೀನೂ ಇಂಥಾ ಹೆಸರಿನ ನಾಟಕಾನssರೀ... ಅಲ್ಲೀನೂ ಈಗ 'ಬಹದ್ದೂರ್ ಗಂಡು', 'ರೈತನ ಮಕ್ಕಳು' ಇಲ್ಲ. 'ಮೊಬೈಲ್ ಮುದುಕ- ಯುಟ್ಯೂಬ್ ಯುವಕ', 'ಕಮಿಷನ್ ಕೇಳಪ್ಪ', 'ಕೋಟಿಗೊಬ್ಬ ಪಿಎಸ್‌ಐ' ನಾಟಕಗಳೇ ನೂರಾರು ಪ್ರದರ್ಶನ, ಹೌಸ್‌ಫುಲ್ ಓಡ್ತಾಯಿರೋದು.

'ಸಂಗ್ಯಾ-ಬಾಳ್ಯಾ', 'ಜೋಕುಮಾರಸ್ವಾಮಿ', 'ಸತ್ತವರ ನೆರಳು' ಮತ್ತೆ ಹಿರಣ್ಣಯ್ಯ ಅವರ 'ಲಂಚಾವತಾರ' ಹಾಗೂ ಟಿ.ಎನ್.ಸೀತಾರಾಮ್ ಅವರ 'ಆಸ್ಫೋಟ', 'ನಮ್ಮೊಳಗೊಬ್ಬ ನಾಜೂಕಯ್ಯ', ಮುಖ್ಯಮಂತ್ರಿ ಚಂದ್ರು ಅಭಿನಯದ 'ಮುಖ್ಯಮಂತ್ರಿ' ನಾಟಕಗಳ ರಾಜಕೀಯ, ವರ್ತಮಾನದ ವಿಡಂಬನೆಗಳು ಕೊಟ್ಟ ಖುಷೀನೇ ಬೇರೆ ಅಂದುಕೊಳ್ಳುವಷ್ಟರಲ್ಲಿ, ಒಂದು ಪಾಂಪ್ಲೆಟ್ ಮುಂದೆ ಹಿಡಿದ ಒಬ್ಬ ಯುವಕ 'ಸರ್, 22ನೇ ತಾರೀಖು ನಮ್ಮ ನಾಟಕ 'ವೇಷ-ರೋಷ' ಯಕ್ಷಗಾನ ಬಳಸಿ ಮಾಡಿರೋ ಹೊಸ ಪ್ರಯೋಗ. ಮೂಲ ಹಿಂದಿ 'ಹಿಜಾಬ್- ಕಿತಾಬ್' ಅಂತ, ದಯವಿಟ್ಟು ಬನ್ನಿ, ಪ್ರೋತ್ಸಾಹಿಸಿ' ಅಂದ.

ವಾಟ್ಸ್‌ಆ್ಯಪ್‌ನ ಸಂದೇಶದ ಸೌಂಡ್ ಬಂತು. ಓಪನ್ ಮಾಡಿ ನೋಡಿದರೆ ಅದರಲ್ಲೂ ಹೊಸ ನಾಟಕದ ಮಾಹಿತಿಯೇ! ಇದೇ ಶನಿವಾರ ಎರಡು ಪ್ರದರ್ಶನ- 'ಸಿಲೆಬಸ್ ಸರ್ಕಸ್' ಎಂಬ ನಾಟಕ, ಭಾನುವಾರ ಮಕ್ಕಳೇ ಅಭಿನಯಿಸುವ 'ಕೂಸು ಬಡವಾಯಿತು'!

ತಲೆ ಚಿಟ್ ಹಿಡಿಯುತ್ತಿದ್ದಂತೆ, ಇನ್ನು ಫೇಸ್‌ಬುಕ್ ಓಪನ್ ಮಾಡೋದೇ ಬೇಡ ಎಂದು ನಿರ್ಧರಿಸಿ ಮನೆ ಕಡೆ ಹೊರಟೆ!

ಸಂಗತ

ಜಾಗ್ರತೆ... ವ್ಯಾಪಿಸುತ್ತಿದೆ ಮರುಭೂಮಿ

ಮರಳುಭೂಮಿ ವಿಸ್ತಾರವಾಗುವುದನ್ನು ವೈಜ್ಞಾನಿಕವಾಗಿ ತಡೆಯಲೇಬೇಕಾದ ಅನಿವಾರ್ಯ ಸಂದರ್ಭ ಇದು

• ಗುರುರಾಜ್ ಎಸ್. ದಾವಣಗೆರೆ

ಕಳೆದ ತಿಂಗಳು ದೆಹಲಿಗೆ ಹೋಗುವುದಿತ್ತು. ಅಲ್ಲಿನ ಗೆಳೆಯನಿಗೆ ಫೋನ್ ಮಾಡಿ 'ಹೇಗಿದೆಯಪ್ಪಾ ರಾಜಧಾನಿಯ ಬಿಸಿಲು' ಎಂದಿದ್ದಕ್ಕೆ, 'ಬಿಸಿಲಿನ ಜೊತೆ ದೂಳಿನ ಮಳೆಯೂ ಇದೆ, ಮೀಟಿಂಗ್ ಇದೆ ಅಂತ ಬಿಳಿ ಬಟ್ಟೆ ಧರಿಸಿ ಬರಬೇಡ, ಮುಖ ಮೈ ಕವರ್ ಮಾಡುವ ಬಟ್ಟೆ ಇರಲಿ' ಎಂದು ಎಚ್ಚರಿಸಿದ.

ದೆಹಲಿಯ ಕೆಟ್ಟ ಗಾಳಿಯ ಬಗ್ಗೆ ಗೊತ್ತಿತ್ತು. ಈಗ ಪಕ್ಕದ ರಾಜ್ಯಗಳ ಮರುಭೂಮಿಗಳಿಂದ ಮರಳು, ದೂಳಿನ ಕಣಗಳು ದೆಹಲಿಯ ತುಂಬಾ ವ್ಯಾಪಿಸುತ್ತಿವೆ. ಅರಾವಳಿ ಬೆಟ್ಟ ಸಾಲಿನಲ್ಲಿ ನಿರಂತರ ಗಣಿಗಾರಿಕೆ, ಪಕ್ಕದ ಹರಿಯಾಣ ರಾಜ್ಯದಲ್ಲಿ ಏರುತ್ತಿರುವ ಮರಭೂಮಿಯ ವ್ಯಾಪ್ತಿ ದೆಹಲಿಗೂ ಚಾಚುತ್ತಿದೆ. ಕಳೆದ ಶತಮಾನದಿಂದ ಇಲ್ಲಿಯವರೆಗೆ ಬರ 270 ಕೋಟಿ ಜನರನ್ನು ತೊಂದರೆಗೀಡುಮಾಡಿದೆ. 1.70 ಕೋಟಿ ಜನ ಪ್ರಾಣ ಕಳೆದುಕೊಂಡಿದ್ದಾರೆ. 2050ರ ವೇಳೆಗೆ ವಿಶ್ವದ ಜನಸಂಖ್ಯೆಯ ಮೂರನೇ ಒಂದು ಭಾಗ ಬರ ಮತ್ತು ಮರುಭೂಮೀಕರಣದ ಅಡ್ಡಪರಿಣಾಮ ಎದುರಿಸುತ್ತದೆ ಎಂದು ಅಂದಾಜಿಸಲಾಗಿದೆ. ಈ ನಡುವೆ ಬರ ಮತ್ತು ಮರುಭೂಮೀಕರಣ ತಡೆಯುವ ದಿನ (ಜೂನ್ 17) ಮತ್ತೆ ಬಂದಿದೆ.

ನಿರಂತರ ಮತ್ತು ಶಾಶ್ವತ ಬರಪೀಡಿತ ಪ್ರದೇಶಗಳು ಮರುಭೂಮಿಗಳಾಗುತ್ತಿರುವ ವಿದ್ಯಮಾನ ಭೂಮಿಯ ಚರಿತ್ರೆಯುದ್ದಕ್ಕೂ ಇದೆ. ಆದರೆ ಪ್ರಕೃತಿಯಲ್ಲಿ ಮಾನವ ಹಸ್ತಕ್ಷೇಪದಿಂದ ನಿರ್ಮಾಣಗೊಳ್ಳುತ್ತಿರುವ ಮರುಭೂಮಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಅತ್ಯಂತ ಕಳವಳಕಾರಿಯಾಗಿದೆ. ಸತತ ಬರ, ಭೂಮಿಗೆ ಟಾಟಾ ಹೇಳಿರುವ ನೀರಿನ ಪಸೆ, ಒಣಹವೆ, ಅತಿಯಾದ ಉಷ್ಣಾಂಶ, ಬರಡು ನೆಲದಿಂದಾಗಿ ದಿನದಿಂದ ದಿನಕ್ಕೆ ಮರುಭೂಮೀಕರಣ ಜಾಸ್ತಿಯಾಗುತ್ತಿದೆ ಎಂದಿರುವ ಪರಿಸರ ವಿಜ್ಞಾನಿಗಳು, ಭಾರತದ ಎರಡನೇ ದೊಡ್ಡ ಮರುಭೂಮಿಯು ಕರ್ನಾಟಕದ ಕಲಬುರಗಿ, ರಾಯಚೂರು, ವಿಜಯಪುರ, ಬಳ್ಳಾರಿ, ಚಿತ್ರದುರ್ಗದ ಭಾಗಗಳಲ್ಲಿ ರೂಪುಗೊಳ್ಳುತ್ತಿದೆ, ಅದನ್ನು ತಡೆಯಲೇಬೇಕು ಎಂದು ಎಚ್ಚರಿಸಿದ್ದಾರೆ. ಅತಿಯಾದ ಶುಷ್ಕತೆ ಮನೆ ಮಾಡಿ ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಒಣ ಪ್ರದೇಶಗಳ ವಿಸ್ತೀರ್ಣ ವರ್ಷದಿಂದ ವರ್ಷಕ್ಕೆ ಏರುತ್ತಿದೆ. ಹಾಸನ, ಚಿಕ್ಕಮಗಳೂರು, ಬೆಂಗಳೂರಿನಂಥ ಮಳೆ ಬೀಳುವ ಜಿಲ್ಲೆಗಳಲ್ಲೂ ಸಣ್ಣದಾಗಿ ಮರುಭೂಮಿ ಪ್ರದೇಶಗಳು ರಚನೆಯಾಗುತ್ತಿವೆ.

ಅತ್ಯಂತ ಕಡಿಮೆ ಮಳೆ ಬೀಳುವ ಜಾಗಗಳೇ ಮರುಭೂಮಿಯ ಉಗಮ ಸ್ಥಾನಗಳು. ವಾತಾವರಣದ ತೇವಾಂಶ ಕಡಿಮೆಯಾಗಿ ಶುಷ್ಕತೆ ಹೆಚ್ಚಿದಂತೆ ಮರುಭೂಮಿಯೂ ಹೆಚ್ಚುತ್ತದೆ. ಇದು ನಿಧಾನವಾಗಿ ಸಂಭವಿಸುವುದರಿಂದ ನಮ್ಮ ಅರಿವಿಗೆ ಬರುವುದೇ ಇಲ್ಲ. ನೀರಿಗಾಗಿ ಅನಿಯಂತ್ರಿತವಾಗಿ ಕೊಳವೆಬಾವಿ ಕೊರೆಯುವುದು, ಇರುವ ಹಸಿರನ್ನು ಜಾನುವಾರುಗಳಿಂದ ಮೇಯಿಸುವುದರಿಂದ ಹುಲ್ಲು ಕಡಿಮೆಯಾಗಿ, ಬೀಳುವ ಅತ್ಯಲ್ಪ ಮಳೆಯೂ ನೆಲಕ್ಕೆ ಇಂಗದೆ ಭೂಮಿ ಒಣಗಿ ನಿಂತು ದೂಳಿನ ಕಣಜವಾಗುತ್ತದೆ. ಹೊಸ ಹುಲ್ಲು ಬೆಳೆಯದೆ ಮಣ್ಣಿನ ಸವಕಳಿಯಾಗಿ ಭೂಮಿ ಫಲವತ್ತತೆ ಕಳೆದುಕೊಂಡು ಬಂಜರಾಗುತ್ತದೆ. ಸಾರ ಕಳೆದುಕೊಂಡ ಭೂಮಿ ಮರುಭೂಮಿಯಾಗುತ್ತದೆ.

ನಿರಂತರವಾಗಿ ಕಡಿಮೆ ಮಳೆ ಪಡೆಯುವ ವಿಶ್ವದ ಅನೇಕ ಪ್ರದೇಶಗಳು ಮರುಭೂಮಿಗಳಾಗುತ್ತಿವೆ. ರಾಜಸ್ಥಾನದ ಮರುಭೂಮಿಯು ಪಕ್ಕದ ಮಧ್ಯಪ್ರದೇಶ, ಗುಜರಾತ್‌ಗೂ ಹಬ್ಬುತ್ತಿದೆ. ನೀರಾವರಿ ಪ್ರದೇಶಗಳು ಅತಿಯಾದ ಜವುಳು ಮಣ್ಣು ಶೇಖರಣೆಯಿಂದಾಗಿ ಬರಡು ಭೂಮಿಗಳಾಗಿ ಬದಲಾಗಿರುವುದೂ ಇದೆ. ದೇಶದ ಹಲವೆಡೆ ನೀರಾವರಿ ಜಮೀನುಗಳು ಈಗ ಫಲವತ್ತತೆ ಕಳೆದುಕೊಂಡು ಬರಡು ನೆಲಗಳಾಗಿವೆ.

ಮರಳುಭೂಮಿ ವಿಸ್ತಾರವಾಗುವುದನ್ನು ವೈಜ್ಞಾನಿಕವಾಗಿ ತಡೆಯಬೇಕು. ಒಣ ಪ್ರದೇಶಗಳಲ್ಲಿ ತ್ವರಿತವಾಗಿ ಬೆಳೆಯುವ, ಕಡಿಮೆ ನೀರು ಬೇಡುವ ಗಿಡಗಳನ್ನು ಯುದ್ಧೋಪಾದಿಯಲ್ಲಿ ಬೆಳೆಸಬೇಕು. ಮರಳಿನ ದಿಬ್ಬಗಳನ್ನು ರಚಿಸಿ, ಅವುಗಳಿಗೆ ಅಂಟಿಕೊಂಡಂತೆ ಕಂದಕ ತೋಡಿ, ಹಾರಿ ಸಾಗುವ ಮರಳನ್ನು ಅಲ್ಲಿಯೇ ತಡೆಹಿಡಿಯಬೇಕು. ತೋಡುಗುಂಡಿ ರಚಿಸಿ, ಬಿದ್ದ ಮಳೆ ನೀರನ್ನು ಸಂಗ್ರಹಿಸಬೇಕು.

ಮರುಭೂಮೀಕರಣ ತಡೆಗೆ ವಿಶ್ವಸಂಸ್ಥೆ ನೇತೃತ್ವದ ಯುನೈಟೆಡ್ ನೇಷನ್ಸ್ ಕನ್ವೆನ್‌ಷನ್ ಟು ಕಂಬ್ಯಾಟ್ ಡೆಸರ್ಟಿಫಿಕೇಶನ್ ಈ ವರ್ಷದ ಮುಖ್ಯ ಕಾರ್ಯಕ್ರಮವನ್ನು ಸ್ಪೇನ್‌ನಲ್ಲಿ ಸಂಘಟಿಸುತ್ತಿದೆ. ಸಮಸ್ಯೆ ಎದುರಿಸುತ್ತಿರುವ ವಿಶ್ವದ 70 ದೇಶಗಳು ತಮ್ಮ ತಮ್ಮ ದೇಶದ ಅಗತ್ಯದಂತೆ ರಾಷ್ಟ್ರೀಯ ಯೋಜನೆ ರೂಪಿಸಿಕೊಂಡಿವೆ. ಅತಿ ಹೆಚ್ಚು ಸಮಸ್ಯೆ ಎದುರಿಸುತ್ತಿರುವ ಆಫ್ರಿಕಾ, ತನ್ನ ಉತ್ತರ ಭಾಗದ 20 ದೇಶಗಳನ್ನು ನಿಯೋಜಿಸಿ, ಸಹಾರಾ ಮರುಭೂಮಿಯ ವಿಸ್ತರಣೆ ತಡೆಯಲು 15 ಕಿ.ಮೀ. ಅಗಲ, 8,000 ಕಿ.ಮೀ. ಉದ್ದದ ಹಸಿರಿನ ಮಹಾಗೋಡೆ ನಿರ್ಮಿಸಲು ₹ 59 ಸಾವಿರ ಕೋಟಿ ವ್ಯಯಿಸುತ್ತಿದೆ. ಕಳೆದ 15 ವರ್ಷಗಳಿಂದ ನಡೆಯುತ್ತಿರುವ ಹಸಿರೀಕರಣದಿಂದ ಅಂತರ್ಜಲ ಹೆಚ್ಚಿದೆ. ಸಹಾರಾ ಮರುಭೂಮಿ ಹಿಂದೆ ಸರಿಯುತ್ತಿದೆ. ಕೃಷಿಯು ಜನರ ಕೈ ಹಿಡಿದದ್ದರಿಂದ ಆಹಾರ ಭದ್ರತೆ ಸಿಕ್ಕಿದೆ. ನಾವೂ ಆಫ್ರಿಕಾದ ಪ್ರಯತ್ನವನ್ನು ಅನುಸರಿಸಿ, ಪೋರಬಂದರ್‌ನಿಂದ ಪಾಣಿಪತ್‌ವರೆಗೆ ಥಾರ್ ಮರುಭೂಮಿಯ ಅಂಚಿನಲ್ಲಿ 1,400 ಕಿ.ಮೀ. ಉದ್ದದ ಹಸಿರುಗೋಡೆ ನಿರ್ಮಿಸಲು ಮುಂದಾಗಿದ್ದೇವೆ.

ಒಂದೆಡೆ, ಮಳೆಕಾಡು ಹೊಂದಿರುವ ಅನೇಕ ದೇಶಗಳು ಅಭಿವೃದ್ಧಿಗಾಗಿ ಕಾಡು ಸವರಿ ಹಾಕುತ್ತಿವೆ. ಇನ್ನೊಂದೆಡೆ, ಮರುಭೂಮಿಯ ಅಂಚುಗಳನ್ನು ಹಸಿರಾಗಿಸುವ ಕೆಲಸವೂ ನಡೆದಿದೆ.

ವಾಚಕರ ವಾಣಿ

ಪರಿಜ್ಞಾನವಿಲ್ಲದೆ ಮತ ಚಲಾವಣೆ

ಪದವೀಧರ ಮತ್ತು ಶಿಕ್ಷಕರ ಮತಕ್ಷೇತ್ರಗಳಿಂದ ವಿಧಾನ ಪರಿಷತ್ತಿನ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅಸಿಂಧು ಅಥವಾ ತಿರಸ್ಕೃತಗೊಂಡ ಮತಗಳ ಸಂಖ್ಯೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ 1,223 ಮತಗಳು, ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ 1,270 ಮತಗಳು, ವಾಯವ್ಯ ಪದವೀಧರ ಕ್ಷೇತ್ರದಲ್ಲಿ 9,006 ಮತಗಳು ತಿರಸ್ಕೃತಗೊಂಡಿವೆ! ಮಕ್ಕಳನ್ನು ಮುಂದಿನ ಜವಾಬ್ದಾರಿಯುತ ಪ್ರಜೆಗಳನ್ನಾಗಿ ರೂಪಿಸುವಂತಹ ಹೊಣೆ ಹೊತ್ತಿರುವ ಶಿಕ್ಷಕರು ಅಸಿಂಧುವಾಗುವಂತೆ ಮತದಾನ ಮಾಡುವುದು ಅಕ್ಷಮ್ಯ. ಪ್ರಜಾಪ್ರಭುತ್ವದ ಮೂಲ ಸೆಲೆಯೇ ಮತದಾನ. ಪದವೀಧರರು ಸಹ ಇದರ ಬಗ್ಗೆ ಪರಿಜ್ಞಾನವಿಲ್ಲದೆ ಮತ ಚಲಾಯಿಸಿರುವುದನ್ನು ನೋಡಿ ಜನಸಾಮಾನ್ಯರು ನಗುವಂತಿದೆ. ಮತದಾನದ ಬಗ್ಗೆ ಮುಂಚಿತವಾಗಿ ತಿಳಿವಳಿಕೆ ನೀಡಿದರೂ ಈ ರೀತಿ ತಪ್ಪು ಮಾಡುವ ಅಸಡ್ಡೆ, ಅವಿವೇಕದ ಪರಿಪಾಟ ನಿಲ್ಲಬೇಕು.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

ಸೌಲಭ್ಯ ಕಸಿಯುವ ಹೊಸ ಯೋಜನೆ

ಕೆಲಸಕ್ಕೆ ನೇಮಕಗೊಂಡು ನಿವೃತ್ತಿಯವರೆಗೂ ಉದ್ಯೋಗದಲ್ಲಿ ಮುಂದುವರಿಯುವ ಯೋಜನೆಗೆ ಈಗ ತಿಲಾಂಜಲಿ ನೀಡಲಾಗುತ್ತಿದೆ. ಕಾರ್ಖಾನೆಗಳಲ್ಲಿ 'ಫಿಕ್ಸೆಡ್ ಟರ್ಮ್ ಎಂಪ್ಲಾಯ್‌ಮೆಂಟ್' ಯೋಜನೆಯನ್ನು ನಾಲ್ಕೈದು ವರ್ಷಗಳ ಹಿಂದೆ ಜಾರಿಗೆ ತರಲಾಗಿದೆ. ಹಾಗೆ ಕೆಲಸಕ್ಕೆ ಸೇರಿದವರು ಮುಂಬಡ್ತಿ, ಭವಿಷ್ಯನಿಧಿ, ಗ್ರ್ಯಾಚುಯಿಟಿ, ರಜಾ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಉದ್ಯೋಗದ ನಿರಂತರತೆಯಿಂದಾಗಿ ಸಿಗುತ್ತಿದ್ದ ಮಾನಸಿಕ ನೆಮ್ಮದಿಗೆ ತಿಲಾಂಜಲಿ. ಸದಾ ಮುಂದೇನೋ ಎಂಬ ಅಸ್ಥಿರತೆ ಕಾಡುತ್ತದೆ. ಈಗ ಅಂತಹದೇ ಯೋಜನೆಯನ್ನು 'ಅಗ್ನಿಪಥ' ಎಂಬ ಆಕರ್ಷಣೀಯ ಹೆಸರಿನೊಂದಿಗೆ ರಕ್ಷಣಾ ವಲಯದಲ್ಲಿಯೂ ಜಾರಿಗೆ ತರಲು ನರೇಂದ್ರ ಮೋದಿ ನೇತೃತ್ವದ ಸರ್ಕಾರ ನಿರ್ಧರಿಸಿದಂತಿದೆ. ನಾಲ್ಕು ವರ್ಷ ಪೂರೈಸಿದ ನಂತರ ಈ 'ಅಗ್ನಿವೀರ'ರು ಮನೆಗೆ ಹೋಗಬೇಕು. ಹೀಗೆ 'ಮಾಜಿ ಅಗ್ನಿವೀರರು' ಎಂದು ಕರೆಸಿಕೊಳ್ಳುವವರು ಆದ್ಯತೆಯ ಆಧಾರದಲ್ಲಿ (ಮೀಸಲಾತಿ ಅಡಿಯಲ್ಲಿ) ಇತರ ವಲಯಗಳ ಉದ್ಯೋಗಗಳಿಗೆ ಸೇರಿಕೊಳ್ಳಬಹುದು.

ಈಗ ಸೇನೆಯಲ್ಲಿ ಸೇವೆ ಸಲ್ಲಿಸುವವರು ಭವಿಷ್ಯನಿಧಿ, ಗ್ರ್ಯಾಚುಯಿಟಿ, ಮುಂಬಡ್ತಿ, ರಜಾ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. 15– 20 ವರ್ಷಗಳ ನಂತರ ರಾಜೀನಾಮೆ ನೀಡಿ ಹೊರಬರುವ ಮತ್ತು 'ಮಾಜಿ ಯೋಧರಿಗೆ ಮೀಸಲಾತಿ' ಅಡಿಯಲ್ಲಿ ಸರ್ಕಾರಿ, ಸಾರ್ವಜನಿಕ ವಲಯಗಳಲ್ಲಿ ಉದ್ಯೋಗ ಪಡೆಯುವ ಸೌಲಭ್ಯವನ್ನು ಅವರು ಹೊಂದಿದ್ದಾರೆ. ನಿವೃತ್ತಿಯವರೆಗೂ ಸೇವೆ ಸಲ್ಲಿಸುವ ಅವಕಾಶ ಸಹ ಇದೆ. ಯೋಧರಿಗೆ ದೊರೆಯುತ್ತಿದ್ದ ಇಂತಹ ಸೌಲಭ್ಯಗಳನ್ನು ಕಸಿದುಕೊಳ್ಳುವ ಈ ಹೊಸ ಯೋಜನೆಯು ಸರ್ಕಾರದ ದಿವಾಳಿಕೋರ ಮನಃಸ್ಥಿತಿಯನ್ನು ಬಯಲು ಮಾಡಿದೆ.

ಟಿ. ಸುರೇಂದ್ರ ರಾವ್, ಬೆಂಗಳೂರು

ನಿರುದ್ಯೋಗ ಸಮಸ್ಯೆಯೂ ಪಠ್ಯದಲ್ಲಿ ಇರಲಿ

ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಯು ಪುನರ್‌ಪರಿಷ್ಕರಿಸಿದ ಹತ್ತನೇ ತರಗತಿ ಸಮಾಜ ವಿಜ್ಞಾನ ಪಠ್ಯ ಭಾಗ–1ರಲ್ಲಿ 'ಭಾರತಕ್ಕಿರುವ ಸವಾಲುಗಳು ಹಾಗೂ ಅವುಗಳ ಪರಿಹಾರೋಪಾಯಗಳು' ಅಧ್ಯಾಯದಲ್ಲಿ, ಪರಿಷ್ಕೃತ ಪಠ್ಯದಲ್ಲಿದ್ದ ನಿರುದ್ಯೋಗದ ವಿಷಯವನ್ನು ತೆಗೆದಿರುವುದು ಸೂಕ್ತವಲ್ಲ. 'ಪ್ರಾದೇಶಿಕವಾದವೂ ಒಂದು ಸಮಸ್ಯೆ' ಎಂದು ಹೇಳಿರುವ ಈ ಸಮಿತಿ, ನಿರುದ್ಯೋಗ ಕೂಡ ದೇಶದ ಒಂದು ಜ್ವಲಂತ ಸಮಸ್ಯೆ ಎಂಬುದನ್ನು ತಿಳಿಯಬೇಕಿದೆ. ಎಲ್ಲ ಪ್ರದೇಶಗಳಲ್ಲಿಯೂ ನಿರುದ್ಯೋಗದ ಸಮಸ್ಯೆ ಇದೆ. ಅದು ಜನರನ್ನು ಬಡತನ, ಭ್ರಷ್ಟಾಚಾರ ಮತ್ತು ಹಲವು ಕಾನೂನುಬಾಹಿರ ಚಟುವಟಿಕೆಗಳಿಗೆ ತಳ್ಳುತ್ತದೆ. ಪಠ್ಯಪುಸ್ತಕಗಳು ಈಗಿನಿಂದಲೇ ವಿದ್ಯಾರ್ಥಿಗಳಲ್ಲಿ ನಿರುದ್ಯೋಗದ ಕಾರಣಗಳು, ಅದರಿಂದ ಆಗುವ ಪರಿಣಾಮಗಳು ಮತ್ತು ನಿರುದ್ಯೋಗವನ್ನು ನಿವಾರಿಸುವಲ್ಲಿ ಸರ್ಕಾರ ತೆಗೆದುಕೊಂಡ ಕಾರ್ಯಕ್ರಮಗಳು, ನಿರುದ್ಯೋಗ ನಿವಾರಣೆಗೆ ಶಿಕ್ಷಣದ ಮಹತ್ವವನ್ನು ತಿಳಿಸಬೇಕಿದೆ. ಜ್ಞಾನ, ಕೌಶಲ, ಮಾನವೀಯ ಮೌಲ್ಯಗಳನ್ನು ನೀಡುವ ಶಿಕ್ಷಣವು ಮುಂದೆ ಉದ್ಯೋಗವನ್ನು ಕೊಡುತ್ತದೆ. ಪಠ್ಯಪುಸ್ತಕಗಳ ಪುನರ್‌ಪರಿಷ್ಕರಣೆಯು ದೇಶಾಭಿಮಾನ ಬೆಳೆಸುವುದರ ಜೊತೆಗೆ ಜ್ವಲಂತ ಸಮಸ್ಯೆಗಳತ್ತ ಕೂಡ ಬೆಳಕು ಚೆಲ್ಲಬೇಕಾಗಿದೆ.

ನಿರ್ಮಲಾ ನಾಗೇಶ್, ಮುರ್ಡೇಶ್ವರ

ಸಹ್ಯಾದ್ರಿ ರಕ್ಷಣೆ: ಬೇಕು ಪಕ್ಷರಾಜಕೀಯ ಮೀರಿದ ಆಸ್ಥೆ

ದಕ್ಷಿಣ ಭಾರತದ ನೀರು, ಆಹಾರ ಹಾಗೂ ಜೀವನಭದ್ರತೆಯ ದೃಷ್ಟಿಯಿಂದ ಅಮೂಲ್ಯವಾಗಿರುವ ಪಶ್ಚಿಮ ಘಟ್ಟದ ಸೂಕ್ಷ್ಮಪ್ರದೇಶಗಳ ಸಂರಕ್ಷಣೆಗೆ ಸೂತ್ರಗಳನ್ನು ರೂಪಿಸಲು, ಕೇಂದ್ರ ಸರ್ಕಾರವು ಉನ್ನತ ಮಟ್ಟದ ಮೂರನೇ ಸಮಿತಿಯ ಮೊರೆ ಹೋಗಿರುವುದರ ಕುರಿತ ಸಂಪಾದಕೀಯ (ಪ್ರ.ವಾ., ಜೂನ್ 15) ಸಕಾಲಿಕ ಹಾಗೂ ಮೌಲಿಕವಾದದ್ದು. ಪರಿಸರ ಸಂರಕ್ಷಣೆಯು ಸಕಲರ ನೆಲ, ಜಲ, ಆಹಾರ, ಜೀವನಭದ್ರತೆಗಾಗಿ ಎಂಬ ಸಂಗತಿಯನ್ನೇ ನಮ್ಮ ಪ್ರಭುತ್ವ ಮರೆಯುತ್ತಿರುವುದು ವಿಷಾದಕರ. ಮಾಧವ ಗಾಡ್ಗೀಳ್ ಹಾಗೂ ಕಸ್ತೂರಿರಂಗನ್ ಸಮಿತಿಗಳ ಶಿಫಾರಸುಗಳ ಕುರಿತು ಜನರಲ್ಲಿ ಅನವಶ್ಯಕ ಭೀತಿ, ಸಂಶಯ ಮೂಡಿಸಿ ಅವು ಜಾರಿಯಾಗದಂತೆ ಮಾಡಿದ್ದು, ಆಡಳಿತದ ಸಮಗ್ರ ಕಲ್ಪನೆ ಹಾಗೂ ದೂರದರ್ಶಿತ್ವ ಇಲ್ಲದ ಅಧಿಕಾರ ರಾಜಕಾರಣ. ಸೂಕ್ಷ್ಮವಾದ ಸಹ್ಯಾದ್ರಿಯ ರಕ್ಷಣೆಗೆ ಈ ಸಮಿತಿಯು ಸೂಚಿಸುವ ಕ್ರಮಗಳನ್ನು ಜಾರಿಗೆ ತರಲು, ಈಗಲಾದರೂ ಪಕ್ಷರಾಜಕೀಯ ಮೀರಿ ಶಾಸಕಾಂಗವು ಆಸ್ಥೆ ವಹಿಸಬೇಕಾಗಿದೆ.

ಮಲೆನಾಡಿನ ರಕ್ಷಣೆಯೆಂಬುದು ಇಲ್ಲಿನ ಜನರನ್ನೂ ಒಳಗೊಂಡು ನಾಡಿನ ಹಿತ ಕಾಯುವಂಥದ್ದು. ಇಲ್ಲಿ ಹುಟ್ಟಿ ಇಕ್ಕೆಲಗಳಲ್ಲಿ ಹರಿಯುವ ನದಿಗಳೇ ಒಳನಾಡು ಹಾಗೂ ಕರಾವಳಿಯ ಕೃಷಿ ಮತ್ತು ಕುಡಿಯುವ ನೀರಿಗೆ ಆಧಾರ ಒದಗಿಸುವುದು. ಹವಾಮಾನ ಹದದಲ್ಲಿದ್ದು, ಜೀವವೈವಿಧ್ಯ ಸಂರಕ್ಷಣೆಯಾಗಿ, ಕೃಷಿ- ಮೀನುಗಾರಿಕೆ ಸುಸ್ಥಿರ ನೆಲೆಗಟ್ಟಿನಲ್ಲಿದ್ದರೆ ಮಾತ್ರ, ನಾವಿಂದು ಏರಿರುವ 'ಅಭಿವೃದ್ಧಿ ಬಂಡಿ' ಸುರಕ್ಷಿತವಾಗಿ ಸಾಗೀತು. ಈಗಲೂ ಸರ್ಕಾರ ಇದಕ್ಕೆ ಕಿವಿಗೊಡದಿದ್ದರೆ, ಭೂಕುಸಿತ, ನೆರೆ-ಬರ, ಬಿಸಿಗಾಳಿ, ನೀರಿನ ಕೊರತೆ, ಕೃಷಿ ಇಳುವರಿ ಕುಸಿತ- ಇವೆಲ್ಲ ಇನ್ನಷ್ಟು ಹೆಚ್ಚಿ, ಸಾಮೂಹಿಕ ಭವಿಷ್ಯವೇ ಅಂಧಕಾರಕ್ಕೆ ತಿರುಗೀತು. ಅಂದರೆ, ನಾವೀಗ ಸಂಭ್ರಮಿಸುತ್ತಿರುವ ಕೊಳ್ಳುಬಾಕ ಸಂಸ್ಕೃತಿಯ 'ಮಿತಿಯಿರದ ಸುಖ'ದ ಕನಸು ಮುರಿಯುವ ವೇಳೆ ಬರುತ್ತಿದೆ ಎಂದೇ ಅರ್ಥ!

ಡಾ. ಕೇಶವ ಎಚ್. ಕೊರ್ಸೆ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

5G ಹೊಸ್ತಿಲಲ್ಲಿ...

ಐದನೇ ತಲೆಮಾರಿನ (5ಜಿ) ಮೊಬೈಲ್ ಸಂಪರ್ಕ ಸೇವೆ ಒದಗಿಸಲು ಅಗತ್ಯವಿರುವ ತರಂಗಾಂತರಗಳನ್ನು ಹರಾಜು ಹಾಕಲು ಕೇಂದ್ರ ಸರ್ಕಾರವು ದಿನಾಂಕ ನಿಗದಿ ಮಾಡಿದೆ. ಭಾರತದಲ್ಲಿ 5ಜಿ ಸೇವೆಯನ್ನು ನೀಡಲು ಅಗತ್ಯವಿರುವ ತಂತ್ರಜ್ಞಾನಗಳನ್ನು ದೇಶೀಯ ಕಂಪನಿಗಳು ವಿದೇಶಿ ಕಂಪನಿಗಳ ನೆರವಿನಲ್ಲಿ ಮತ್ತು ಸಂಪೂರ್ಣ ದೇಶೀಯವಾಗಿ ಅಭಿವೃದ್ಧಿಪಡಿಸಿವೆ. 5ಜಿ ಸೇವೆಯನ್ನು ನೀಡಲು ಅಷ್ಟೇ ಶಕ್ತಿಯುತವಾದ ಮೂಲಸೌಕರ್ಯಗಳೂ ಬೇಕು. ಅಂತಹ ಮೂಲಸೌಕರ್ಯಗಳಲ್ಲಿ ತರಂಗಾಂತರವೂ ಒಂದು. ಅಂತಹ ಮೂಲಸೌಕರ್ಯವನ್ನು ಇಂಟರ್‌ನೆಟ್ ಸೇವಾ ಕಂಪನಿಗಳಿಗೆ ಹಂಚಿಕೆ ಮಾಡುವ ದಿಸೆಯಲ್ಲಿ ಸರ್ಕಾರವು ಮೊದಲ ಹೆಜ್ಜೆ ಇರಿಸಿದೆ. ಪ್ರಚಂಡ ವೇಗದ ನಿಸ್ತಂತು ಇಂಟರ್‌ನೆಟ್ ಸಂಪರ್ಕವನ್ನು ಸಾಧ್ಯವಾಗಿಸುವ ಅತ್ಯಂತ ಮಹತ್ವದ ಹಂತವಿದು. ತರಂಗಾಂತರಗಳ ಹಂಚಿಕೆಯ ಬೆನ್ನಲ್ಲೇ 5ಜಿ ಸೇವೆ ಸಿಕ್ಕಿಬಿಡುತ್ತದೆ ಎಂದಲ್ಲ. ಇದಕ್ಕಾಗಿ ಜನಸಾಮಾನ್ಯರು ಇನ್ನೂ ಹಲವು ತಿಂಗಳು ಕಾಯಬೇಕಿದೆ.

5ಜಿ ಎಂದರೇನು?

5ಜಿ ಎಂಬುದು ಐದನೇ ತಲೆಮಾರಿನ ಸೆಲ್ಯುಲಾರ್ ತಂತ್ರಜ್ಞಾನ. ವೇಗ ಮತ್ತು ಹೆಚ್ಚು ವಿಶ್ವಾಸಾರ್ಹ ಸಂವಹನವನ್ನು ಈ ತಂತ್ರಜ್ಞಾನ ಒದಗಿಸುತ್ತದೆ. 5ಜಿ ಗರಿಷ್ಠ ನೆಟ್‌ವರ್ಕ್ ಡೇಟಾ ವೇಗವು ಸೆಕೆಂಡಿಗೆ 1ರಿಂದ 2 ಗಿಗಾಬೈಟ್ (ಜಿಬಿಪಿಎಸ್) ಇರಲಿದೆ ಎಂದು ಸರ್ಕಾರದ ಸಮಿತಿ ವರದಿ ಅಭಿಪ್ರಾಯಪಟ್ಟಿದೆ.

ಈಗ ದೇಶದಲ್ಲಿರುವ 4ಜಿ ತಂತ್ರಜ್ಞಾನದ ವೇಗವು ಪ್ರತಿ ಸೆಕೆಂಡಿಗೆ 15ರಿಂದ 20 ಮೆಗಾಬೈಟ್ (ಎಂಬಿಪಿಎಸ್). ಆದರೆ 5ಜಿ ಅತೀ ವೇಗಕ್ಕೆ ಹೆಸರಾದ ತಂತ್ರಜ್ಞಾನ. ದೇಶದಲ್ಲಿ 5ಜಿ ತಂತ್ರಜ್ಞಾನದ ಸೇವೆ ದೊರೆತಲ್ಲಿ, '8ಕೆ' ಸಿನಿಮಾ ಹಾಗೂ ಗ್ರಾಫಿಕ್ ಗೇಮ್‌ಗಳನ್ನು ಕೆಲವೇ ಸೆಕೆಂಡುಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದಕ್ಕೆ 5ಜಿ ತಂತ್ರಜ್ಞಾನ ಬೆಂಬಲಿಸುವ ಉಪಕರಣಗಳು ಬೇಕು.

ಉಪಯೋಗ ಎಲ್ಲೆಲ್ಲಿ: 5ಜಿ ತಂತ್ರಜ್ಞಾನವು ಮೊಬೈಲ್ ಬಳಕೆಗೆ ಮಾತ್ರವಲ್ಲದೆ, ಬೇರೆಯೂ ಸಾಕಷ್ಟು ಕೊಡುಗೆ ನೀಡಲಿದೆ. ಟೆಲಿ ಮೆಡಿಸಿನ್, ಟೆಲಿ ಎಜುಕೇಷನ್, ಚಾಲಕರಹಿತ ಕಾರು, ಡ್ರೋನ್ ಆಧಾರಿತ ಕೃಷಿ ನಿಗಾ ವ್ಯವಸ್ಥೆ ಮೊದಲಾದ ಕ್ಷೇತ್ರಗಳಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಗಲಿದೆ. 'ಇಂಟರ್‌ನೆಟ್ ಆಫ್ ಥಿಂಗ್ಸ್'ನಂತಹ (ಐಒಟಿ) ಉದಯೋನ್ಮುಖ ತಂತ್ರಜ್ಞಾನಗಳ ಬೆನ್ನೆಲುಬಾಗಿ ರೂಪುಗೊಳ್ಳುವ ನಿರೀಕ್ಷೆಯಿದೆ.

ಮೂರು ಸ್ವರೂಪದ ಬ್ಯಾಂಡ್

ಕಡಿಮೆ ಬ್ಯಾಂಡ್: ಈ ತರಂಗಾಂತರವು (600–700 ಮೆಗಾಹರ್ಟ್ಜ್) ವಿಶಾಲ ವ್ಯಾಪ್ತಿಯಿಂದ ಕೂಡಿದ್ದು, ವೇಗದ ದೃಷ್ಟಿಯಿಂದ ಉತ್ತಮ ಎನಿಸಿದೆ. 30-250 ಎಂಬಿಪಿಎಸ್ ವೇಗದೊಂದಿಗೆ ಸಾವಿರಾರು ಮೈಲಿಗಳನ್ನು ತಲುಪಬಲ್ಲದು. ಅಧಿಕ ಪ್ರಮಾಣದ ಇಂಟರ್‌ನೆಟ್ ವೇಗ ಅಗತ್ಯವಿಲ್ಲದ ಕಡೆಗಳಲ್ಲಿ ಇದನ್ನು ಬಳಸಬಹುದು. ಮೊಬೈಲ್ ಬಳಕೆದಾರರಿಗೆ ಇದು ಸೂಕ್ತವಾಗಿದ್ದು, ಉದ್ಯಮದ ವಿಶೇಷ ಅಗತ್ಯಗಳನ್ನು ಪೂರೈಸುವುದಿಲ್ಲ.

ಮಧ್ಯಮ ಬ್ಯಾಂಡ್: ಕಡಿಮೆ ಬ್ಯಾಂಡ್‌ಗೆ ಹೋಲಿಸಿದರೆ ಈ ತರಂಗಾಂತರವು (2.5–3.5 ಗಿಗಾಹರ್ಟ್ಜ್) ಅಧಿಕ ವೇಗವನ್ನು ಹೊಂದಿದೆ. ಆದರೆ ವ್ಯಾಪ್ತಿ ಕೆಲವು ಕಿಲೊಮೀಟರ್‌ಗಳು ಮಾತ್ರ. 100ರಿಂದ 900 ಎಂಬಿಪಿಎಸ್ ವೇಗ ಹೊಂದಿರುತ್ತದೆ. ಈ ಬ್ಯಾಂಡ್ ಅನ್ನು ಹೆಚ್ಚಾಗಿ ಕೈಗಾರಿಕೆಗಳಲ್ಲಿ ಬಳಸಬಹುದು. ನಿರ್ದಿಷ್ಟ ಸ್ವರೂಪದ ಉದ್ಯಮವೊಂದರ ಅಗತ್ಯಗಳಿಗೆ ತಕ್ಕಂತೆ ಪರಿವರ್ತಿಸಬಹುದು.

ಅಧಿಕ ಬ್ಯಾಂಡ್: ಈ ತರಂಗಾಂತರವು (29–34 ಗಿಗಾಹರ್ಟ್ಜ್) ಹೆಚ್ಚಿನ ವೇಗಕ್ಕೆ ಹೆಸರಾಗಿದ್ದು, ಅತ್ಯಂತ ಸೀಮಿತ ವ್ಯಾಪ್ತಿಯನ್ನು ಹೊಂದಿದೆ. ಸಂಕೇತಗಳ ನುಗ್ಗುವ ಸಾಮರ್ಥ್ಯ (ಪೆನಿಟ್ರೇಷನ್) ಅಧಿಕವಾಗಿರುತ್ತದೆ. 1ರಿಂದ 3 ಜಿಬಿಪಿಎಸ್ ವೇಗದ ಇಂಟರ್‌ನೆಟ್ ಇದರಿಂದ ಸಾಧ್ಯ. ಬೃಹತ್ ಕೈಗಾರಿಕೆಗಳು, ಉದ್ಯಮಗಳು, ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಕೆಲಸಗಳಿಗೆ ಅಗತ್ಯವಾಗಿ ನೆರವಾಗುತ್ತದೆ.

ದುಬಾರಿ ಮೂಲಸೌಕರ್ಯ

5ಜಿ ವ್ಯವಸ್ಥೆ ಅನುಷ್ಠಾನಕ್ಕೆ ತರಲು ಅತ್ಯಾಧುನಿಕ ಮತ್ತು ಭಾರಿ ಪ್ರಮಾಣದ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಈಗ ಬಳಕೆಯಲ್ಲಿರುವ ಮೊಬೈಲ್ ನೆಟ್‌ವರ್ಕ್ ಟವರ್‌ಗಳಿಂದ ಮಾತ್ರವೇ 5ಜಿಯಷ್ಟು ವೇಗದ ಸೇವೆಯನ್ನು ನೀಡಲು ಸಾಧ್ಯವಿಲ್ಲ. ನೆಟ್‌ವರ್ಕ್ ಟವರ್‌ಗಳ ಜತೆಗೆ ಭಾರಿ ವೇಗದಲ್ಲಿ ಡೇಟಾ ವರ್ಗಾಯಿಸಬಲ್ಲ ಪೂರಕ ಆ್ಯಂಟೆನಾಗಳ ಅಗತ್ಯವಿದೆ.

ನಗರ ಪ್ರದೇಶದಲ್ಲಿ, ಜನದಟ್ಟಣೆಯ ಪ್ರದೇಶದಲ್ಲಿ ಭಾರಿ ವೇಗದ ಇಂಟರ್‌ನೆಟ್ ಸಂಪರ್ಕವನ್ನು ಒದಗಿಸಲು ಈ ರೀತಿಯ ಪೂರಕ ಆ್ಯಂಟೆನಾಗಳ ಅವಶ್ಯಕತೆ ಇದೆ. ವೈಫೈ ರೌಟರ್‌ಗಳ ಸುಧಾರಿತ ಮತ್ತು ಅತ್ಯಾಧುನಿಕ ರೂಪದಂತಿರುವ ಇಂತಹ ಆ್ಯಂಟೆನಾಗಳನ್ನು ಕೆಲವೇ ನೂರು ಮೀಟರ್ ಅಂತರದಲ್ಲಿ ಇರಿಸಬೇಕಾಗುತ್ತದೆ. ಈ ಆ್ಯಂಟೆನಾಗಳು ನೆಟ್‌ವರ್ಕ್ ಟವರ್‌ಗಳ ಜತೆಗೆ ಸಂಪರ್ಕದಲ್ಲಿ ಇರುತ್ತವೆ. ಈ ಟವರ್‌ಗಳನ್ನು ಅತಿವೇಗದ ಫೈಬರ್ ಬ್ರಾಡ್‌ಬ್ಯಾಂಡ್ ಸಂಪರ್ಕದಲ್ಲಿ ಇರಿಸಲಾಗುತ್ತದೆ.

4ಜಿ ನೆಟ್‌ವರ್ಕ್‌ನಲ್ಲಿ ಇಂಟರ್‌ನೆಟ್ ಸಂಪರ್ಕವು, ನೆಟ್‌ವರ್ಕ್ ಟವರ್‌ಗಳ ಮೂಲಕ ನೇರವಾಗಿ ಮೊಬೈಲ್‌ಗೆ ಲಭ್ಯವಾಗುತ್ತದೆ.

ಆದರೆ, 5ಜಿ ತಂತ್ರಜ್ಞಾನದಲ್ಲಿ ಮೊಬೈಲ್ ಸಾಧನ ಮತ್ತು ನೆಟ್‌ವರ್ಕ್ ಟವರ್‌ಗಳ ಮಧ್ಯೆ ಪೂರಕ ಆ್ಯಂಟೆನಾಗಳು ಬೇಕಾಗುತ್ತವೆ. ಬಳಕೆದಾರರ ಸಂಖ್ಯೆ ಹೆಚ್ಚು ಇದ್ದಷ್ಟೂ, ಪೂರಕ ಆ್ಯಂಟೆನಾಗಳ ಸಂಖ್ಯೆ ಹೆಚ್ಚುತ್ತದೆ. ಜತೆಗೆ 4ಜಿ ನೆಟ್‌ವರ್ಕ್ ಟವರ್‌ಗಳನ್ನು ಯಥಾವತ್ತಾಗಿ ಈ ತಂತ್ರಜ್ಞಾನ ಅಳವಡಿಕೆಗೆ ಬಳಸಿಕೊಳ್ಳಲು ಸಾಧ್ಯವಿಲ್ಲ. ಇದಕ್ಕಾಗಿ 4ಜಿ ಎಲ್‌ಟಿಇ ಟವರ್‌ಗಳನ್ನು ಮೇಲ್ದರ್ಜೆಗೆ ಏರಿಸಬೇಕಾಗುತ್ತದೆ. ಇದು ದುಬಾರಿ. ಇದಕ್ಕಿಂತಲೂ ಹೆಚ್ಚು ವೆಚ್ಚವಾಗುವುದು ಪೂರಕ ಆ್ಯಂಟೆನಾಗಳ ಅಳವಡಿಕೆಗೆ. ಹೀಗಾಗಿ 5ಜಿ ತಂತ್ರಜ್ಞಾನವನ್ನು ಬಳಕೆಗೆ ತರಲು ಇಂಟರ್‌ನೆಟ್ ಸೇವಾ ಕಂಪನಿಗಳು ಲಕ್ಷ ಕೋಟಿ ರೂಪಾಯಿ ಲೆಕ್ಕದಲ್ಲಿ ಬಂಡವಾಳ ಹೂಡಬೇಕಾಗುತ್ತದೆ. ಇದರ ಜತೆಯಲ್ಲಿ ತರಂಗಾಂತರ ಖರೀದಿಗೂ ಬಂಡವಾಳ ಹೂಡಬೇಕಾಗುತ್ತದೆ.



ಆಧಾರ: ಪಿಟಿಐ, ಪಿಐಬಿ, ಎರಿಕ್‌ಸನ್, ನೋಕಿಯಾ

ಟ್ರಿಲಿಯನ್ ಡಾಲರ್ ಕನಸಿಗೆ ಶಕ್ತಿವರ್ಧಕ

• ರಾಜೀವ್ ಚಂದ್ರಶೇಖರ್

ರಾಜೀವ್ ಚಂದ್ರಶೇಖರ್

ಹೆಚ್ಚು ಕಮ್ಮಿ ಕಳೆದ ಮೂರು ದಶಕಗಳಿಂದ ಭಾರತೀಯ ಮೊಬೈಲ್ ದೂರಸಂಪರ್ಕ ವಲಯದ ಹುಟ್ಟು, ಬೆಳವಣಿಗೆ ಮತ್ತು ವಿಸ್ತರಣೆಯನ್ನು ಉದ್ಯಮಿ, ಭಾಗೀದಾರ ಮತ್ತು ಪ್ರೇಕ್ಷಕನಾಗಿ ಹತ್ತಿರದಿಂದ ಕಂಡ ನನ್ನಲ್ಲಿ 5ಜಿ ತಂತ್ರಜ್ಞಾನದ ಬರುವಿಕೆಯು ಅಪಾರ ನಿರೀಕ್ಷೆ ಮೂಡಿಸಿದೆ.

ಜನರಿಗೆ ಈ 5 ಜಿ ವೈರ್‌ಲೆಸ್, ತಂತ್ರಜ್ಞಾನದ 5ನೇ ತಲೆಮಾರು ಆಗಿದೆಯಾದರೂ, ಇದು ಯಂತ್ರಗಳ ವಿಚಾರದಲ್ಲಿ 1ನೇ ತಲೆಮಾರು (1ಜಿ) ಆಗಿದೆ. 5ಜಿ ತಂತ್ರಜ್ಞಾನವು ತನ್ನ ಅಪಾರ ಸಾಧ್ಯತೆಗಳಿಂದಾಗಿ ಡಿಜಿಟಲ್ ಮತ್ತು ಮೊಬೈಲ್ ಅಂತರ್ಜಾಲ ಕ್ಷೇತ್ರವನ್ನು ಸಮಗ್ರವಾಗಿ ಬದಲಾಯಿಸಲಿದೆ ಮತ್ತು ಮರುವಿನ್ಯಾಸಗೊಳಿಸಲಿದೆ.

ಐಐಟಿ ಚೆನ್ನೈನ ನಿರ್ದೇಶಕರಾದ ಪ್ರೊ. ಕಾಮಕೋಟಿ ಹಾಗೂ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಅವರು, ಸಂಪೂರ್ಣವಾಗಿ ಭಾರತವೇ ವಿನ್ಯಾಸಗೊಳಿಸಿರುವ ಮತ್ತು ಅಭಿವೃದ್ಧಿಗೊಳಿಸಿರುವ '5ಜಿ ಕೋರ್ ಆ್ಯಂಡ್ ಸ್ಟಾಕ್' ತಂತ್ರಜ್ಞಾನ ಬಳಸಿ ಇತ್ತೀಚೆಗೆ ವಿಡಿಯೊ ಕರೆ ಮಾಡಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರು 'ಮೇಕ್ ಫಾರ್ ಇಂಡಿಯಾ' ಮತ್ತು 'ಜಗತ್ತಿಗಾಗಿ ಮೇಕ್ ಇನ್ ಇಂಡಿಯಾ'ಕ್ಕಾಗಿ 5ಜಿ ಎಂಎಂಯೇತರ ತರಂಗಾಂತರ ಮತ್ತು ಎಂಎಂ ತರಂಗಾಂತರಗಳ ಟೆಸ್ಟ್ ಬೆಡ್ ಅನ್ನು ಮೇನಲ್ಲಿ ಉದ್ಘಾಟಿಸಿದ್ದಾರೆ. ನವೋದ್ಯಮಗಳು ಹಾಗೂ ಕೈಗಾರಿಕೆಗಳಿಗೆ 5ಜಿ ಅನ್ವಯಿಕಗಳು (ಅಪ್ಲಿಕೇಷನ್) ಮತ್ತು ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಪ್ರಮಾಣೀಕರಿಸಲು ಇದು ಬಳಕೆಯಾಗುತ್ತದೆ.

ಕಳೆದ ಮೂರು ದಶಕಗಳಲ್ಲಿ 2ಜಿ, 3ಜಿ ಮತ್ತು 4ಜಿ ತಂತ್ರಜ್ಞಾನಗಳಲ್ಲಿ ಭಾರತ ಹೆಚ್ಚುಕಮ್ಮಿ ಆ ತಂತ್ರಜ್ಞಾನದ ಗ್ರಾಹಕನಾಗಿದೆ. ಅಲ್ಲದೇ ಸಂಪರ್ಕಜಾಲ, ಸಾಫ್ಟ್‌ವೇರ್ ಸ್ಟಾಕ್, ಅನ್ವಯಿಕಗಳು, ಸಾಧನ ಸೇರಿ ಪ್ರತಿಯೊಂದನ್ನೂ ಆಮದು ಮಾಡಿಕೊಳ್ಳಲಾಗಿದೆ. ಹೀಗಾಗಿ, ಭಾರತದ ಮಟ್ಟಿಗೆ 5ಜಿ ತಂತ್ರಜ್ಞಾನವು, ಅತ್ಯಂತ ವೇಗದ ಮೊಬೈಲ್ ಅಂತರ್ಜಾಲ ತಂತ್ರಜ್ಞಾನಕ್ಕೆ ದೇಶವು ಪರಿವರ್ತನೆ ಹೊಂದುವುದನ್ನು ಮಾತ್ರ ಪ್ರತಿನಿಧಿಸುತ್ತಿಲ್ಲ; ಜತೆಗೆ, ಈ ಹಿಂದೆ ತಂತ್ರಜ್ಞಾನ ಆಮದು ರಾಷ್ಟ್ರವಾಗಿದ್ದ ಭಾರತವು, ತಂತ್ರಜ್ಞಾನದ ಆವಿಷ್ಕಾರಕ ರಾಷ್ಟ್ರವಾಗಿ ಹೊರಹೊಮ್ಮುವುದನ್ನೂ ಪ್ರತಿನಿಧಿಸುತ್ತದೆ.

ಸುಮಾರು 80 ಕೋಟಿ ಭಾರತೀಯರು ಅಂತರ್ಜಾಲ ಬಳಸುತ್ತಿದ್ದಾರೆ. ಉಳಿದ 40 ಕೋಟಿ ಭಾರತೀಯರನ್ನು, ಸರ್ಕಾರ ಮತ್ತು ಪ್ರಧಾನಿ ಮೋದಿ ಅವರ ಅತ್ಯಂತ ಯಶಸ್ವಿ ಯೋಜನೆ 'ಡಿಜಿಟಲ್ ಇಂಡಿಯಾ' ಮೂಲಕ ಅಂತರ್ಜಾಲ ಸಂಪರ್ಕ ಜಾಲಕ್ಕೆ ಸೇರಿಸುವುದು ನಮ್ಮ ಆದ್ಯತೆಯಾಗಿದೆ. ಇದರಲ್ಲಿ 5ಜಿ ತಂತ್ರಜ್ಞಾನ ಬಹು ದೊಡ್ಡ ಪಾತ್ರವಹಿಸಲಿದೆ ಮತ್ತು ತಂತ್ರಜ್ಞಾನದ ಪ್ರಯೋಜನಗಳನ್ನು ಜನರಿಗೆ ತಲುಪಿಸುವ ರಾಷ್ಟ್ರಗಳಲ್ಲಿ ಮುಂಚೂಣಿಯಲ್ಲಿರುವ ಭಾರತದ ವರ್ಚಸ್ಸು ಮತ್ತಷ್ಟು ಹೆಚ್ಚಾಗಲಿದೆ. 5ಜಿ ಮತ್ತು ವಿಶ್ವದ ಅತಿ ದೊಡ್ಡ ಗ್ರಾಮೀಣ ಬ್ರಾಡ್‌ಬ್ಯಾಂಡ್ ಕಾರ್ಯಕ್ರಮ 'ಭಾರತ್ ನೆಟ್' ಮೂಲಕ ಭಾರತ ಶೀಘ್ರವೇ ವಿಶ್ವದ ಅತಿ ದೊಡ್ಡ ಸಂಪರ್ಕ ಜಾಲ ಹೊಂದಿರುವ ದೇಶವಾಗಲಿದೆ.

ನಾನು ಪದೇ ಪದೇ ಹೇಳಿರುವಂತೆ, ಭಾರತದ ತಂತ್ರಜ್ಞಾನ ಯುಗದಲ್ಲಿ ವಿದ್ಯುನ್ಮಾನ ಉತ್ಪನ್ನ, ಸೆಮಿಕಂಡಕ್ಟರ್ ವಿನ್ಯಾಸ, ಕೃತಕ ಬುದ್ಧಿಮತ್ತೆ ಮುಂತಾದವುಗಳಲ್ಲಿ ನವೋದ್ಯಮಗಳ ಹೊಸ ಅಲೆಯ ಸುಗ್ಗಿ ಪ್ರಾರಂಭವಾಗಲಿದೆ. ಡಿಜಿಟಲ್ ಆಡಳಿತಕ್ಕೆ ವೇಗ ನೀಡುವುದು ಮತ್ತು ಎಲ್ಲ ಸರ್ಕಾರಿ ಸೇವೆಗಳು ಪ್ರತಿಯೊಬ್ಬ ಭಾರತೀಯನಿಗೂ ಲಭ್ಯವಾಗುವುದನ್ನು ಖಾತರಿಪಡಿಸುವ ಪ್ರಧಾನಿ ಮೋದಿ ಅವರ ಗುರಿಯನ್ನು ಸಾಧಿಸಲು ಕೂಡಾ 5ಜಿ ನೆರವಾಗಬಲ್ಲುದು.

ತಂತ್ರಜ್ಞಾನವು ಭಾರತದ ಪಾಲಿಗೆ ಮುಂಬರುವ ವರ್ಷಗಳಲ್ಲಿ ಬಹುದೊಡ್ಡ ಅವಕಾಶ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಭಾರತದ ಆರ್ಥಿಕತೆಯು 5 ಟ್ರಿಲಿಯನ್ ಡಾಲರ್‌ಗೆ (ಸುಮಾರು ₹390 ಲಕ್ಷ ಕೋಟಿ) ಬೆಳೆದು ಅಲ್ಲಿಂದ 10 ಟ್ರಿಲಿಯನ್ ಡಾಲರ್ (ಸುಮಾರು ₹780 ಲಕ್ಷ ಕೋಟಿ) ತಲುಪುವಲ್ಲಿ 5ಜಿ ಮತ್ತು 6ಜಿ ತಂತ್ರಜ್ಞಾನಗಳು ಬಹುದೊಡ್ಡ ಪಾತ್ರ ವಹಿಸಲಿವೆ.

ಭಾರತವು ನೂತನ ತಂತ್ರಜ್ಞಾನಗಳನ್ನು ವೇಗವಾಗಿ ಅಳವಡಿಸಿಕೊಳ್ಳುತ್ತಿದೆ. ಉದಾಹರಣೆಗೆ, ಇಂದು ವಿಶ್ವದಲ್ಲಿ ಅತಿದೊಡ್ಡ ಮಟ್ಟದಲ್ಲಿ ಇಂಟರ್‌ನೆಟ್ ಪ್ರೊಟೊಕಾಲ್ 6ನೇ ಆವೃತ್ತಿಯನ್ನು ಅಳವಡಿಸಿಕೊಂಡ ರಾಷ್ಟ್ರಗಳಲ್ಲಿ ಭಾರತವೂ ಒಂದು. ಜಿಎಸ್‌ಎಂಎ ಇಂಟಲಿಜೆನ್ಸ್ ಫಾರ್ ಕಾಸ್ಟ್ ಅನುಸಾರ, ಭಾರತದಲ್ಲಿ 5ಜಿ ಸಂಪರ್ಕಗಳು 2025ರ ವೇಳೆಗೆ ಒಟ್ಟು ಜನಸಂಖ್ಯೆಯ ಶೇ 6ರಷ್ಟು (7.2 ಕೋಟಿ) ಮತ್ತು 2040ರ ವೇಳೆಗೆ ಶೇಕಡ 93ರಷ್ಟು ಜನರನ್ನು ತಲುಪಲಿವೆ. ಡಿಜಿಟಲ್ ಇಂಡಿಯಾ ನಮ್ಮ ಡಿಜಿಟಲ್ ಆರ್ಥಿಕತೆಯಲ್ಲಿ ಅಭೂತಪೂರ್ವ ಅವಕಾಶಗಳನ್ನು ಒದಗಿಸಿದೆ. ಡಿಜಿಟಲ್ ರಂಗದಲ್ಲಿ ಆವಿಷ್ಕಾರ ನಡೆಸುತ್ತಿರುವ ಸಹಸ್ರಾರು ಯುವ ಉದ್ಯಮಿಗಳು ಮತ್ತು ನವೋದ್ಯಮಗಳನ್ನು ಸೃಷ್ಟಿಸುತ್ತಿದೆ. 5ಜಿ ತಂತ್ರಜ್ಞಾನ, ಭಾರತದ ತಾಂತ್ರಿಕ ಯುಗಕ್ಕೆ ಶಕ್ತಿವರ್ಧಕವಾಗಿ ಕಾರ್ಯನಿರ್ವಹಿಸಲಿದೆ ಮತ್ತು ಭಾರತ ಜಗತ್ತಿನ ವಿಶ್ವಾಸಾರ್ಹ ತಾಂತ್ರಿಕ ಪಾಲುದಾರನಾಗಿ ಹೊರಹೊಮ್ಮುವಂತೆ ಮಾಡಲಿದೆ.

ಲೇಖಕ: ಕೇಂದ್ರ ಮಾಹಿತಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ರಾಜ್ಯ ಸಚಿವ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 149

ರುದ್ರನ ಮನವೊಲಿಸಿದ ದೇವತೆಗಳು

ಪತ್ನಿಯರೊಡನೆ ಬಂದ ಬ್ರಹ್ಮ, ವಿಷ್ಣುವಿನ ಯೋಗಕ್ಷೇಮ ವಿಚಾರಿಸಿದ ರುದ್ರದೇವ, ತನ್ನ ಬಳಿ ಬಂದ ಕಾರಣವೇನೆಂದು ಕೇಳುತ್ತಾನೆ. ಆಗ ಬ್ರಹ್ಮ 'ದೇವದೇವನೂ ಕರುಣಾಸಮುದ್ರನೂ ಜಗದೊಡೆಯನೂ ಆದ ಓ ಮಹಾದೇವನೆ, ನಾವು ಈ ದೇವಮುನಿಗಳೊಡನೆ ಏಕೆ ಇಲ್ಲಿಗೆ ಬಂದಿರುವೆವೆಂಬುದನ್ನು ಹೇಳುವೆನು ಕೇಳು' ಎಂದು ವಿವರವಾಗಿ ಹೇಳತೊಡಗುತ್ತಾನೆ.

'ಎಲೈ ಶಂಕರ! ನಿನ್ನ ನಿಮಿತ್ತವಾಗಿಯೇ ನಾವು ಇಲ್ಲಿಗೆ ಬಂದಿರುವೆವು. ನಿನ್ನ ಸಹಾಯವಿಲ್ಲದಿದ್ದರೆ ಈ ಜಗತ್ತು ನಡೆಯಲಾರದು. ಮುಂದೆ ಲೋಕಕಂಟಕರಾದ ರಾಕ್ಷಸರು ಜನಿಸುವರು. ಅವರಲ್ಲಿ ಕೆಲವರನ್ನು ನಾನು ಕೊಲ್ಲಬೇಕಾಗುವುದು. ಇನ್ನು ಕೆಲವರು ಹರಿಯಿಂದಲೇ ಕೊಲ್ಲಲ್ಪಡುವರು, ಮತ್ತೆ ಕೆಲವರನ್ನು ನೀನೇ ಸಂಹರಿಸಬೇಕಾಗುವುದು. ಇನ್ನು ಕೆಲವರು ನಿನ್ನ ಕುಮಾರನಿಂದ ಸಂಹರಿಸಲ್ಪಡುವರು. ಮತ್ತೆ ಕೆಲವರನ್ನು ಚಂಡಿಕಾದೇವಿಯು ಕೊಲ್ಲಬೇಕಾಗುವುದು.

'ಓ ಶಂಕರ, ನಿನ್ನ ಅನುಗ್ರಹದಿಂದ ದೇವತೆಗಳಿಗೆ ಉತ್ತಮ ಸುಖ ಲಭಿಸಬೇಕಾಗಿದೆ. ಘೋರವಾದ ರಾಕ್ಷಸರನ್ನು ಸಂಹರಿಸಿ ಜಗತ್ತಿಗೆ ಅಭಯವನ್ನೂ ಸ್ವಸ್ಥತೆಯನ್ನು ನೀನೇ ಕಲ್ಪಿಸಬೇಕಾಗಿದೆ. ಹೀಗಿರುವಾಗ ನೀನು ಕರುಣಾಮಯನಾಗಿ ಯೋಗಮಾರ್ಗನಿರತನೂ, ರಾಗ-ದ್ವೇಷಗಳಿಲ್ಲದವನೂ ಆಗಿಬಿಟ್ಟರೆ ಲೋಕಕಂಟಕರಾದ ಆಸುರರನ್ನು ಸಂಹರಿಸುವುದು ಹೇಗೆ? ಅಸುರರು ನಾಶವಾಗದಿದ್ದರೆ ಜಗತ್ತಿನ ಸೃಷ್ಟಿ-ಸ್ಥಿತಿಯೂ ಸರಿಯಾಗಿ ನಡೆಯುವುದಾದರೂ ಸಾಧ್ಯವೆ? ಸೃಷ್ಟಿ, ಸ್ಥಿತಿ ಮತ್ತು ಪ್ರಳಯಗಳು ನಡೆಯದಿದ್ದರೆ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಮೂರು ರೂಪಭೇದಗಳೂ, ಮಾಯೆಯ ಅವತಾರವೂ ಬೇಕಾಗಿಯೇ ಇಲ್ಲ. ಓ ಶಂಕರ, ನಾವು ಮೂವರು ಒಂದೇ ಬ್ರಹ್ಮಸ್ವರೂಪರು. ಸೃಷ್ಟಿ, ಸ್ಥಿತಿ ಮತ್ತು ಲಯರೂಪವಾದ ಕಾರ್ಯಭೇದ ನಿಮಿತ್ತವಾಗಿ ನಮಗೆ ಬ್ರಹ್ಮ, ವಿಷ್ಣು, ರುದ್ರರೂಪಗಳು ಮಾಯವಾಗಿ ಬಂದಿವೆ. ಆ ಸೃಷ್ಟಿ, ಸ್ಥಿತಿ, ಲಯಗಳು ನಡೆಯದಿದ್ದಲ್ಲಿ ನಮ್ಮ ಈ ರೂಪಭೇದವು ವ್ಯರ್ಥವೆನಿಸುತ್ತೆ.

'ಪರಮಾತ್ಮನೂ, ಪರಮೇಶ್ವರನು ಆದ ಒಬ್ಬನೇ ತನ್ನ ಮಾಯೆಯಿಂದ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಮೂರು ರೂಪಗಳನ್ನು ಧರಿಸಿರುವನು. ಪರಮೇಶ್ವರನ ಶರೀರದ ಎಡಭಾಗದಿಂದ ಹರಿಯು ಜನಿಸಿರುವನು. ಬಲಭಾಗದಿಂದ ಬ್ರಹ್ಮನಾದ ನಾನು ಜನಿಸಿರುವೆ. ಅವನ ಹೃದಯದಿಂದ ಶಿವನ ಪೂರ್ಣಾಂಶ ರುದ್ರನಾದ ನೀನು ಜನಿಸಿರುವೆ. ಓ ಪ್ರಭು! ಹೀಗೆ ನಾವು ಮೂವರೂ ಮಾಯಾಧೀನರಾಗಿ ಪರಶಿವ ಮತ್ತು ಶಕ್ತಿದೇವಿಯ ಪುತ್ರರಾಗಿ ಮೂರು ರೂಪದಿಂದ ಜನಿಸಿದ್ದೇವೆ. ನಿನ್ನ ಅಪ್ಪಣೆಯಂತೆ ನಾನು ಮತ್ತು ವಿಷ್ಣು ಇಬ್ಬರೂ ಸೃಷ್ಟಿ ಮತ್ತು ಸ್ಥಿತಿಗಾಗಿ ಪತ್ನಿಯರನ್ನು ಪರಿಗ್ರಹಿಸಿ ಲೋಕಕಾರ್ಯವನ್ನು ಮಾಡುತ್ತಲಿದ್ದೇವೆ.

'ಅದರಂತೆ ಓ ಶಿವನೇ, ಜಗತ್ತಿನ ಕ್ಷೇಮಕ್ಕಾಗಿ ಮತ್ತು ದೇವತೆಗಳ ಸುಭಿಕ್ಷಕ್ಕಾಗಿ ಸುಂದರಿಯಾದ ಓರ್ವ ರಮಣಿಯನ್ನು ಮದುವೆಯಾಗು. ಪರಶಿವರೂಪದಿಂದ ನೀನೇ ಹಿಂದೆ ನನ್ನನ್ನೂ ಮತ್ತು ವಿಷ್ಣುವನ್ನೂ ಕುರಿತು ಹೀಗೆ ಹೇಳಿದ್ದೆಯಲ್ಲಾ, ಅದನ್ನು ನಿನ್ನ ಮಾತಿನಲ್ಲೇ ಹೇಳುತ್ತೇನೆ ಕೇಳು' ಎಂದು ಬ್ರಹ್ಮ ಹಿಂದೆ ಮಹಾಶಿವ ಹೇಳಿದ ಮಾತಿನಂತೆ ಉಚ್ಚರಿಸಿದ: 'ಎಲೈ ಬ್ರಹ್ಮನೇ, ಇಂತಹ ಸ್ವರೂಪವುಳ್ಳ ನಾನು ಮುಂದೆ ನಿನ್ನ ಲಲಾಟದಿಂದ ರುದ್ರನೆಂಬ ಹೆಸರಿನಿಂದ ಜನಿಸುವೆನು. ಎಲೈ ವಿಧಿ, ಈಗ ನೀನು ಸೃಷ್ಟಿಯನ್ನು ಮಾಡು, ಹರಿಯು ಪಾಲನೆಯನ್ನು ಮಾಡಲಿ, ರುದ್ರಸ್ವರೂಪನಾದ ನಾನು ಸಂಹಾರವನ್ನು ಮಾಡುವೆ. ರಮಣಿಯನ್ನು ಮದುವೆಯಾಗಿ ಲೋಕಕ್ಕೆ ಅನುಕೂಲವಾಗುವಂತೆ ಕಾರ್ಯವನ್ನು ಮಾಡುವೆನು – ಎಂದಿದ್ದೆ. ಓ ಶಿವನೇ, ಆ ನಿನ್ನ ಮಾತನ್ನು ಈಗ ನೆರವೇರಿಸು. ನಿನ್ನ ಅಪ್ಪಣೆಯಂತೆ ನಾನು ಸೃಷ್ಟಿಯನ್ನೂ, ಹರಿಯು ಪಾಲನೆಯನ್ನೂ ಮಾಡುತ್ತಲಿರುವೆವು. ಶಿವಸ್ವರೂಪನಾದ ನೀನು ಜಗತ್ತಿನ ಪ್ರಳಯವನ್ನು ಮಾಡುವವನಾಗು. ನಿನ್ನ ಕಾರ್ಯವಿಲ್ಲದೆ, ನಾವು ನಮ್ಮ ಕಾರ್ಯಗಳನ್ನು ಮಾಡಲಾರೆವು. ಆದುದರಿಂದ ಲೋಕಕಾರ್ಯಕ್ಕೆ ಅನುಕೂಲವಾಗುವಂತಹ ಕಾಮಿನಿಯನ್ನು ಮದುವೆಯಾಗು. ಲಕ್ಷ್ಮಿಯು ವಿಷ್ಣುವಿಗೆ ಹೇಗೋ, ನನಗೆ ಸರಸ್ವತಿಯು ಹೇಗೋ ಹಾಗೇ, ನೀನೂ ನಿನ್ನ ಕಾರ್ಯಗಳಿಗೆ ಅನುಕೂಲಳಾದಂತಹ ಓರ್ವಕಾಂತೆಯನ್ನು ಮದುವೆಯಾಗು' ಎಂದು ಬ್ರಹ್ಮ ಪ್ರಾರ್ಥಿಸಿದ. •

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ರಕ್ತದ ಮಡುವಿನಲ್ಲಿ ಬಿದ್ದಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಕಾನ್‌ಸ್ಟೆಬಲ್ ಪಕ್ಕದಲ್ಲಿ ಬಂದೂಕು ಇರುವುದು, ಸುತ್ತ ಜನರು ಗುಂಪುಗೂಡಿರುವುದು ವಿಡಿಯೊದಲ್ಲಿ ಸೆರೆಯಾಗಿದೆ. ಬಿಜೆಪಿ ವಕ್ತಾರೆ ಆಗಿದ್ದ ನೂಪುರ್ ಶರ್ಮಾ ಅವರು ಪ್ರವಾದಿ ಮಹಮ್ಮದ್ ಕುರಿತು ನೀಡಿದ್ದ ಹೇಳಿಕೆ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಮುಸ್ಲಿಂ ಪ್ರತಿಭಟನಕಾರರು ಪೊಲೀಸ್ ಅಧಿಕಾರಿಯನ್ನು ಕೊಂದಿದ್ದಾರೆ ಎಂಬ ವಿವರವನ್ನು ಈ ವಿಡಿಯೊ ಜೊತೆಗೆ ನೀಡಲಾಗಿದೆ.

✓ ವಿಡಿಯೊ ಜೊತೆಗೆ ನೀಡಲಾಗಿರುವ ವಿವರಣೆ ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ವೆಬ್‌ಸೈಟ್ ವರದಿ ಮಾಡಿದೆ. 'ದಿ ಇಂಡಿಯನ್ ಎಕ್ಸ್‌ಪ್ರೆಸ್' ಸೇರಿ ಹಲವಾರು ಪತ್ರಿಕೆಗಳು ಈ ಘಟನೆ ಕುರಿತು 2022ರ ಜೂನ್ 11ರಂದು ವರದಿ ಮಾಡಿವೆ. ಈ ಘಟನೆ ಕೋಲ್ಕತ್ತಾದ ಪಾರ್ಕ್ ಸರ್ಕಸ್ ಪ್ರದೇಶದಲ್ಲಿ ನಡೆದಿದೆ. ಕಾನ್‌ಸ್ಟೆಬಲ್ ಚೋಡುಪ್ ಲೆಪ್ಚಾ ಅವರು ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದರು. ಕರ್ತವ್ಯದಲ್ಲಿ ಇದ್ದಾಗ ವಿವೇಚನಾಹೀನರಾಗಿ ರೈಫಲ್‌ನಿಂದ ಗುಂಡು ಹಾರಿಸಿದ್ದಾರೆ. ಗುಂಡು ತಗುಲಿ ಒಬ್ಬ ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ. ಬಳಿಕ ಅದೇ ರೈಫಲ್‌ನಿಂದ ಅವರೂ ಗುಂಡು ಹಾರಿಸಿಕೊಂಡಿದ್ದಾರೆ' ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಅವಶ್ಯಕತೆಗಳ ಶ್ರೇಣಿ

ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ|
ಚಿನ್ನದಾತುರಕಿಂತ ಹೆಣ್ಣುಗಂಡೊಲವು||
ಮನ್ನಣೆಯ ದಾಹವೀಯೆಲ್ಲಕಂ ತೀಕ್ಷ್ಣತಮ|
ತಿನ್ನುವುದದಾತ್ಮವನೆ – ಮಂಕುತಿಮ್ಮ||652||

ಪದ-ಅರ್ಥ: ಅನ್ನದಾತುರಕಿಂತ = ಅನ್ನದ + ಆತುರಕಿಂತ, ದಾಹವೀಯೆಲ್ಲಕಂ = ದಾಹವು + ಈ + ಎಲ್ಲಕಂ (ಎಲ್ಲಕ್ಕಿಂತ), ತಿನ್ನುವುದದಾತ್ಮವನೆ = ತಿನ್ನುವುದು + ಅದು + ಆತ್ಮವನೆ

ವಾಚ್ಯಾರ್ಥ: ಅನ್ನದ ಅಪೇಕ್ಷೆಗಿಂತ, ಚಿನ್ನದ ಅಪೇಕ್ಷೆ ತೀಕ್ಷ್ಣ. ಚಿನ್ನದ ಆತುರಕ್ಕಿಂತ ಹೆಣ್ಣು ಗಂಡುಗಳ ಪ್ರೇಮ ಉತ್ಕಟವಾದದ್ದು. ಈ ಎಲ್ಲವುಗಳಿಗಿಂತ ಮನ್ನಣೆಯ ಅಪೇಕ್ಷೆ ಅತ್ಯಂತ ತೀವ್ರವಾದದ್ದು. ಅದು ಆತ್ಮವನ್ನೇ ನುಂಗಿ ಹಾಕುತ್ತದೆ.

ವಿವರಣೆ: ಅಬ್ರಹಾಂ ಮ್ಯಾಸ್ಲೋ ಎಂಬ ಸಮಾಜವಿಜ್ಞಾನಿ ಅನೇಕ ವರ್ಷಗಳ ಸಂಶೋಧನೆಯ ನಂತರ ಮನುಷ್ಯರ ಅವಶ್ಯಕತೆಗಳ ಶ್ರೇಣಿಯೊಂದನ್ನು ವಿವರಿಸಿ ಪ್ರಖ್ಯಾತನಾದ. ಅದರಂತೆ, ಅವಶ್ಯಕತೆಗಳು ಐದು ಹಂತಗಳಲ್ಲಿರುತ್ತವೆ. ಅದಲ್ಲದೆ, ಮೊದಲನೆಯ ಶ್ರೇಣಿಯ ತೃಪ್ತಿಯಾದ ಮೇಲೆ ಮುಂದಿನ ಶ್ರೇಣಿಯ ಅವಶ್ಯಕತೆ ತೋರುತ್ತದೆ. ತೀರ ಕೆಳಮಟ್ಟದ ಮೆಟ್ಟಿಲು ದೈಹಿಕ ತೃಪ್ತಿ. ಮನುಷ್ಯನಿಗೆ ಮೊದಲು ಅನ್ನ, ಬಟ್ಟೆ, ವಸತಿ ಬೇಕು. ಉಪವಾಸ ಒದ್ದಾಡುತ್ತಿರುವವನು ಅಧಿಕಾರ, ಅಂತಸ್ತುಗಳ ಚಿಂತೆ ಮಾಡಲಾರ. ಮೊದಲು ಹೊಟ್ಟೆ ತುಂಬಬೇಕು, ಮಾನಮುಚ್ಚಬೇಕು. ಒಂದು ಸಲ ಭೌತಿಕ ಅಗತ್ಯಗಳು ಪೂರೈಕೆಯಾದವೋ, ಮುಂದಿನ ಶ್ರೇಣಿ ಬರುತ್ತದೆ. ಹೊಟ್ಟೆ ತುಂಬಿಸಲು ಕೆಲಸ ದೊರೆತ ಮೇಲೆ ಭದ್ರತೆಯ ಅವಶ್ಯಕತೆ. ಒಂದು ಮನೆ ಮಾಡಬೇಕು, ಒಂದಿಷ್ಟು ಚಿನ್ನವನ್ನು ಕೂಡಿಡಬೇಕು. ಕಷ್ಟಕಾಲದಲ್ಲಿ ಬೇಕಲ್ಲ?

ಅದೂ ಆಯಿತು ಎಂದಾಗ ಮನೆಯಲ್ಲಿ ಹೇಳುತ್ತಾರೆ ಒಂದು ಮದುವೆ ಮಾಡಿಕೋ. ಹೇಗಿದ್ದರೂ ಕೆಲಸವಾಗಿದೆ, ಮನೆಯೂ ಇದೆ. ಗಮನಿಸಿ, ಅನ್ನದ ಅಪೇಕ್ಷೆಯ ತೀವ್ರತೆ ಕಡಿಮೆ. ತುಂಬ ಹಸಿದು ಕಂಗಾಲಾದವನಿಗೆ ಊಟಕ್ಕೆ ಹಾಕಿದರೆ ಎಷ್ಟು ರೊಟ್ಟಿ ತಿಂದಾನು? ನಾಲ್ಕು, ಐದು? ಆಮೇಲೆ? ಸಾಕು, ಹೊಟ್ಟೆ ತುಂಬಿತು, ಇನ್ನು ತಿನ್ನುವುದಾಗುವುದಿಲ್ಲ ಎನ್ನುತ್ತಾನೆ. ಆದರೆ ಚಿನ್ನ ಎಷ್ಟಿದ್ದರೆ ಸಾಕು? ಹೊಟ್ಟೆ ತುಂಬಿದ ಹಾಗೆ ಅಪೇಕ್ಷೆಯ ತೂಬು ತುಂಬುವುದಿಲ್ಲ. ಮುಂದೆ ಗಂಡು-ಹೆಣ್ಣಿನ ಒಲವು ಅದಕ್ಕಿಂತ ತೀಕ್ಷ್ಣವಾದದ್ದು. ಅದು ದೈಹಿಕ ಸೆಳೆತ ಮಾತ್ರವಲ್ಲ. ಕಲ್ಪನೆ ಮಾಡಿ, ಅತ್ಯಂತ ಪ್ರಿಯಳಾದ ಹೆಂಡತಿಯ ಅಥವಾ ಪ್ರಿಯವಾದ ಗಂಡನ ಆರೋಗ್ಯ ಕುಸಿದುಹೋಗಿದೆ. ವಿಶೇಷ ಚಿಕಿತ್ಸೆಯಾಗಬೇಕು. ಆಗ ಯಾರೂ ಚಿನ್ನದ ಮುಖ ನೋಡುವುದಿಲ್ಲ, ಚಿನ್ನವನ್ನು ಮಾರಿಯಾದರೂ ಜೀವವನ್ನು ಉಳಿಸಿಕೊಳ್ಳೋಣ ಎಂದು ಒದ್ದಾಡುತ್ತಾರೆ. ಚಿನ್ನದ ಅಪೇಕ್ಷೆಗಿಂತ ಪ್ರೀತಿ ಹೆಚ್ಚು ತೀವ್ರವಾಗಿರುತ್ತದೆ.

ಇದಾದ ಮೇಲೆ ಬರುವುದು ನಾಲ್ಕನೆಯ ಹಂತ, ಅದು ಮನ್ನಣೆಯ ದಾಹದ ಶ್ರೇಣಿ. ಜಗತ್ತಿನಲ್ಲಿ ಮನ್ನಣೆಯನ್ನು ಪಡೆಯಲು ಜನ ಏನೆಲ್ಲ ಮಾಡುತ್ತಾರೆ. ಈ ಮನ್ನಣೆಯನ್ನು ಪಡೆಯುವ ಹುಚ್ಚು ಯಾರನ್ನೂ ಬಿಟ್ಟಿಲ್ಲ. ಜನ ತಮ್ಮನ್ನು ಎಲ್ಲೆಲ್ಲಿಯೂ ಗುರುತಿಸಬೇಕು, ಸನ್ಮಾನಿಸಬೇಕು ಎನ್ನುವ ಅಪೇಕ್ಷೆಯಿಂದ ಹಿಡಿದು ಹೇಗಾದರೂ ಮಾಡಿ ರಾಜ್ಯ, ರಾಷ್ಟ್ರ ಪ್ರಶಸ್ತಿಗಳನ್ನು ಪಡೆದುಕೊಳ್ಳುವ ಹಂಬಲ ಸೆಳೆಯುತ್ತದೆ. ರಾಜಕೀಯದಲ್ಲಿ ಮಂತ್ರಿ ಸ್ಥಾನಬೇಕು, ಅದು ಸಿಕ್ಕ ಮೇಲೆ ಮಹತ್ವದ ಖಾತೆ ಬೇಕು. ಅದೂ ದೊರೆತ ಮೇಲೆ ಉಪಮುಖ್ಯಮಂತ್ರಿ ಸ್ಥಾನ ಒಳ್ಳೆಯದಲ್ಲವೇ ಎನ್ನಿಸುತ್ತದೆ. ನಂತರ ಅದೂ ಸಣ್ಣದಾಗಿ ಕಂಡು ಮುಖ್ಯಮಂತ್ರಿ ಪದವಿಯನ್ನು ಪಡೆಯಲೇಬೇಕೆಂಬ ತುಡಿತ ಕಾಡುತ್ತದೆ. ಅದಕ್ಕೆ ಒಂದು ಸುಭಾಷಿತವಿದೆ.

ಘಟಂ ಭಿಂದ್ಯಾತ್, ಪಟಂ ಛಿಂದ್ಯಾತ್ ಕುರ್ಯಾದ್ರಾಸಭ ರೋಹಣಮ್|

Actually printed: **ಘಟಂ ವಿಂದ್ಯಾತ್, ಪಟಂ ವಿಂದ್ಯಾತ್ ಕುರ್ಯಾದ್ಗಾರ್ಧಭ ಸ್ವರಮ್|**
ಏನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವ||

'ಮಡಕೆಯನ್ನು ಒಡೆ, ಬಟ್ಟೆಯನ್ನು ಹರಿ ಅಥವಾ ಕತ್ತೆಯಂತೆ ಕಿರಿಚು. ಒಟ್ಟಿನಲ್ಲಿ ಯಾವುದೋ ವಿಧದಲ್ಲಿ ಪ್ರಸಿದ್ಧನಾಗು'

ಈ ಕೀರ್ತಿಶನಿ ಎಷ್ಟು ಪ್ರಬಲವಾದದ್ದೆಂದರೆ ಅತ್ಯಂತ ಮುಖ್ಯವಾದ ಆತ್ಮಪ್ರಜ್ಞೆಯನ್ನೇ ನುಂಗಿ ಹಾಕುತ್ತದೆ. ಒಂದು ವಿಷಯವನ್ನು ನಾವು ನೆನಪಿಡಬೇಕು. ಮ್ಯಾಸ್ಲೋ ಮಹಾಶಯ, ತನ್ನ ದೀರ್ಘ ಸಂಶೋಧನೆಯ ಫಲಶೃತಿಯಾದ ಪಂಚ ಶ್ರೇಣಿಯ ಅಗತ್ಯತೆಗಳ ಬಗ್ಗೆ ಹೇಳುವುದಕ್ಕಿಂತ ದಶಕಗಳ ಮೊದಲೇ ಡಿ.ವಿ.ಜಿ ಅದನ್ನು ಈ ನಾಲ್ಕೇ ಸಾಲುಗಳಲ್ಲಿ ಶಿಲ್ಪಿಸಿಬಿಟ್ಟಿದ್ದರು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜೂನ್ 17, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ತೃತೀಯ ಗಂ. 06-11, ಚತುರ್ಥಿ ಗಂ. 27-00 **ನಕ್ಷತ್ರ:** ಉತ್ತರಾಷಾಢಾ ಗಂ. 09-56 **ಯೋಗ:** ಐಂದ್ರ ಗಂ. 07-07, **ಕರಣ:** ವಿಷ್ಟಿ ಗಂ. 06-11, ಮಿಥುನ ಮಾಸದ 02 ನೇ ದಿನ.
ರಾಹುಕಾಲ: ಬೆಳಿಗ್ಗೆ 10:30 – 12:00
ಸೂರ್ಯೋದಯ: 06-08 **ಸೂರ್ಯಾಸ್ತ:** 06-55
ಮುಸ್ಲಿಂ ದಿನಾಂಕ: 17 ಜುಲ್ಖಾಯದ್
ದಿನ ವಿಶೇಷ: ಸಂಕಷ್ಟಹರ ಚತುರ್ಥಿ (ಚಂದ್ರೋದಯ ಗಂ. 10-11)
ಅದೃಷ್ಟ ಸಂಖ್ಯೆ: 2, 7

ಮೇಷ: ಯಾವುದೇ ಉದ್ವೇಗಕ್ಕೆ ಒಳಗಾಗದೆ ಹೊಸ ಸ್ಫೂರ್ತಿಯಿಂದ ಕಾರ್ಯ ನಿರ್ವಹಿಸುವಿರಿ. ಅನಾಥ ಹುಡುಗನೊಬ್ಬನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ ಯೋಚನೆ ಮಾಡಿ.

ವೃಷಭ: ಕಂಪನಿಯ ಹಣಕಾಸು ನಿರ್ವಹಣೆಯಲ್ಲಿ ನಿಮ್ಮ ಪಾತ್ರ ಪ್ರಮುಖವಾಗುವುದು. ಉದ್ಯೋಗದಲ್ಲಿ ನಿಮ್ಮ ಪ್ರಾಮಾಣಿಕತೆ ಫಲವಾಗಿ ಒಳ್ಳೆಯ ಸ್ಥಾನಮಾನ ಸಿಗಲಿದೆ. ನೂತನ ವಸ್ತ್ರ ಖರೀದಿಯ ಯೋಗವಿದೆ.

ಮಿಥುನ: ಜೀವನದಲ್ಲಿ ಅನಿರೀಕ್ಷಿತ ಬದಲಾವಣೆಗಳನ್ನು ಕಂಡುಕೊಳ್ಳುವ ಸ್ಥಿತಿ ಈ ದಿನ ಬರಲಿದೆ. ಸಮಸ್ಯೆಗಳಿಗೆ ಸಿಲುಕದಂತೆ ಜಾಗ್ರತೆ ವಹಿಸುವಿರಿ. ಆರೋಗ್ಯದಲ್ಲಿ ಪಿತ್ತಾಧಿಕ್ಯ ಉಂಟಾಗುವುದು.

ಕರ್ಕಾಟಕ: ನಿಮ್ಮ ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮಾಡಿ ಮುಗಿಸುವಲ್ಲಿ ಯಶಸ್ವಿಯಾಗುವಿರಿ. ತಂದೆ ಮಾತನ್ನು ತಿರಸ್ಕರಿಸಬೇಡಿ. ಅಕ್ಕಪಕ್ಕದವರ ಅಥವಾ ಸ್ನೇಹಿತರ ಹೊಗಳಿಕೆಯ ಮಾತುಗಳಿಗೆ ಮರುಳಾಗಬೇಡಿ.

ಸಿಂಹ: ಇಂಟೀರಿಯರ್ ಡೆಕೊರೇಟರ್ ಕೋರ್ಸ್ ಕಲಿಯುವಂತಹ ಆಸೆ ಹೊಂದಿದವರಿಗೆ ಶುಭ ಕಾಲ. ಯೋಗಾಭ್ಯಾಸದಿಂದ ಮನಸ್ಸಿಗೆ ಹಿತವೆನಿಸುವುದು. ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಗೊಂದಲ ಬೇಡ.

ಕನ್ಯಾ: ನಿಮ್ಮ ಏಕಾಗ್ರತೆಗೆ ಭಂಗವಾಗುವ ಘಟನೆಗಳು ನಡೆಯಲಿದೆ. ತಾಯಿ ಹೊಟ್ಟೆಗೆ ಸಂಬಂಧಿಸಿದ ರೋಗ ಲಕ್ಷಣಗಳಿದ್ದಲ್ಲಿ ತಡಮಾಡದೆ ಸರಿಯಾದ ವೈದ್ಯರನ್ನು ಭೇಟಿಮಾಡಿ ಚಿಕಿತ್ಸೆ ಪಡೆಯುವುದು ಉತ್ತಮ.

ತುಲಾ: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ. ಸಮಸ್ಯೆ ಬಗೆಹರಿಸಲು ಜಾಣತನ ತೋರುವಿರಿ.

ವೃಶ್ಚಿಕ: ಈ ದಿನ ಸಣ್ಣಪುಟ್ಟ ಅಡಚಣೆಗಳು ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಲಾರದು. ಕಾರ್ಮಿಕರ ಮೇಲಿನ ನಿಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುವುದರಿಂದ ಹೆಚ್ಚಿನ ಪ್ರಯೋಜನ ಪಡೆಯಲಿದ್ದೀರಿ.

ಧನು: ನಿಮ್ಮ ಮಕ್ಕಳು ಮಾಡುವ ಸಣ್ಣಪುಟ್ಟ ತಪ್ಪುಗಳನ್ನು ಕ್ಷಮಿಸಿ ತಿಳಿಹೇಳಿ. ಯಾವುದೇ ಕಾರಣಗಳಿಗೂ ಈ ದಿನ ಮಕ್ಕಳನ್ನು ಶಿಕ್ಷಿಸಬೇಡಿ. ನಿಮ್ಮ ವ್ಯವಹಾರದ ಪಾಲುದಾರರು ನಿಮ್ಮ ಮಾತಿನಂತೆಯೇ ನಡೆಯುವರು.

ಮಕರ: ವಿಭಿನ್ನ ರೀತಿಯ ಮತ್ತು ಅತಿ ಕ್ಲಿಷ್ಟಕರವಾದ ಕೆಲಸವೊಂದನ್ನು ನಿಮ್ಮ ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ. ಅದನ್ನು ಒಪ್ಪಿಕೊಳ್ಳಿ ಅದು ನಿಮಗೆ ಸಾಕಷ್ಟು ಗೌರವವನ್ನು, ಹೆಸರನ್ನು ತರಲಿದೆ.

ಕುಂಭ: ಸಂಗೀತ ಕಲಾವಿದರಿಗೆ ಸಿಕ್ಕ ಅವಕಾಶವನ್ನು ತಿರಸ್ಕರಿಸಬೇಡಿ. ನೂತನ ಕೆಲಸಗಳಿಗೆ ವಿಘ್ನ ಕಾಡಲಿದೆ. ವಿವಾಹ ಅಪೇಕ್ಷಿಗಳಿಗೆ ಅನಿರೀಕ್ಷಿತವಾಗಿ ಸಹೋದರನ ಮುಖಾಂತರ ವೈವಾಹಿಕ ಸಂಬಂಧ ಕೂಡಿ ಬರಲಿದೆ.

ಮೀನ: ನಿಮ್ಮ ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳಿಗಾಗಿ ಜನರು ಕಾಯುವುದನ್ನು ನೋಡಿ ಬಹಳ ಹೆಮ್ಮೆಪಟ್ಟುಕೊಳ್ಳುವಿರಿ. ಮಾನಸಿಕ ಒತ್ತಡಗಳಿಂದ ಹೊರಬರಲು ಕುಲ ದೇವರ ದರ್ಶನ ಮಾಡಿ.

ಪದಬಂಧ 4991 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗಾಳಿಯಿಂದ ಕೂಡಿದ ಪ್ರದೇಶ (5)
3.ವಿಧಿಯನ್ನು ಬರೆಯುವವನು (3)
5.ರಾಜ್ಯದ ಚುನಾಯಿತ ಶಾಸಕರ ಮಂಡಲಿ (5)
7.ಗಂಡಾನೆ ಇಲ್ಲಿದೆ (3)
8.ನವಜೀವನವಿದು (5)
11.ನಸುಕಿನಲ್ಲಿ ಬಿದ್ದ ಸ್ವಪ್ನ (3)
12.ಈತ ಕಾಡಿನ ರಕ್ಷಕ (5)
14.ಸೋಪಾನ ಇಲ್ಲಿ ಕಾಣುತ್ತಿದೆ (3)
15.ಪ್ರಾಣ ವಾಯುವಿದು (5)

ಮೇಲಿಂದ ಕೆಳಕ್ಕೆ
1.ನಿಜವಾಗಿ ಇರುವಂಥದ್ದು (4)
2.ವನದಲ್ಲಿರುವ ಉಡುಗೆ (3)
4.ಅಂತರಂಗದಲ್ಲಿರುವ ಅಲೆ (3)
6.ವಿರಸದ ವಿರುದ್ಧ ಪದ (3)
7.ಸರಕ್ಕನೆ ಹೋಗಿ ತಂದ ಸಾಮಾನು (3)
8.ಹೊಲದ ಹತ್ತಿರವೇ ಗಲೀಜು ಇದೆಯಲ್ಲಾ (3)
9.ಕೆಟ್ಟ ಮನುಷ್ಯನಿವನು (3)
10. ಯಾವುದೇ ಕಳಂಕವಿಲ್ಲದ್ದು (4)
11.ಹೆಚ್ಚು ಪದದ ವಿರುದ್ಧ ಪದ (3)
13.ಪಾದರಸವನ್ನು ಹೀಗೂ ಹೇಳುವರು (3)

1		2			■	3		4
	■		■	■	■	■	■	
5			6		■	7		
	■	■		■	■		■	■
■	■	8			9		■	■
■	■		■	■		■	■	10
11			■	12		13		
	■	■	■	■	■		■	
14			■	15				

4990ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಸ್ಥಾವರ 4.ದಮನ 5.ಹರಕತ್ತು 6.ಪರಿಮಾಣ 8.ಟಕಾ 10.ತನಾ 13.ದಾರ್ಶನಿಕ 14.ಹರಿದಾರಿ 15.ರಸ್ಕತ 16.ಅರುಣ

ಮೇಲಿಂದ ಕೆಳಕ್ಕೆ: 1.ಉದರಂಭರಣ 2.ಸ್ಥಾನಪಲ್ಲಟ 3.ಮಂಕರಿ 5.ಹಣವಂತ 7.ದುಂದುಗಾರತನ 9.ಕಾಲುದಾರಿ 11.ನಾಮಕರಣ 12.ಹರಿತ

ಸುಡೊಕು 5377

7		4		5			9	
	2		1		9	6		5
		5		3			1	
						1		9
9		1	5				4	
4				1		3		7
			3		7			1
	6			9	1	7		
				2			6	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5376 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯ ಸ್ಮರಣೆ

ಬಿ. ವಿಜಯ್ ಕೃಷ್ಣ
ಕರ್ನಾಟಕ ರಾಜ್ಯದ ಪ್ರಖ್ಯಾತ
ಕ್ರಿಕೆಟ್ ಆಟಗಾರ
ಮರಣ: 17.06.2021

ತಮ್ಮ ಸ್ಮರಣೆಯಲ್ಲಿರುವ :
ಆರ್.ಭರಣಯ್ಯ ಕುಟುಂಬದವರು

ನಿಧನ

ಶ್ರೀಮತಿ ಜಿ. ಸ್ವರ್ಣಪ್ರಭ
(ಬಿ.ಎನ್. ಗೋಪಾಲ ಗೌಡರ ಧರ್ಮಪತ್ನಿ)
ಇವರು ದಿನಾಂಕ 16.06.2022ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಅಂತ್ಯಕ್ರಿಯೆಯನ್ನು 17.06.2022ರಂದು ಬೆಳಿಗ್ಗೆ 9.00 ಗಂಟೆಗೆ ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ ಬೆಂಡಿಗಾನಹಳ್ಳಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು
ಶ್ರೀ ಬಿ.ಎನ್. ಬಚ್ಚೇಗೌಡರು ಮತ್ತು ಬೆಂಡಿಗಾನಹಳ್ಳಿ ಕುಟುಂಬದವರು ಹಾಗೂ ಬಂಧು ಮಿತ್ರರು

9ನೇ ವರ್ಷದ ಸವಿನೆನಪು

ಹೆಚ್.ಕೆ ವೇಣುಗೋಪಾಲ್ ರೆಡ್ಡಿ
ನಿಧನ: 17-06-2013
ನಿಮ್ಮ ನೆನಪು ನಮ್ಮ ಮನೆ ಮನಗಳಲ್ಲಿ ನಿತ್ಯ ನೂತನ, ನಿರಂತರ ಹಾಗೂ ಅಮರ.
ಸದಾ ನಿಮ್ಮ ನೆನಪಿನಲ್ಲಿ: ಪತ್ನಿ, ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

TATA GROUP
(Aerostructures)
is Hiring ! ! !

REQUIREMENT

Manufacturing Engineer – with knowledge of Aerostructure Sheet metal, Machining processes
Qualification: Diploma/BE/B.Tech/M.Tech
Experience: 2 to 15 Years (Preferably Aerospace)
Description:
- Experience in designing, implementing & reviewing aircraft documents and complex tools
- Understanding of different SAP, APQP, PPAP and PFMEA tools, Different Special Processes (NADCAP)
- Ability to read and interpret complex engineering drawings and specifications

Tool Designer – with knowledge of Sheet metal, Machining processes
Qualification: Diploma/BE/B.Tech/M.Tech
Experience: 2 to 15 Years (Preferably Aerospace)
Description:
- Experience on Creating Conceptual Tool designs for Sheet and Machine Shop parts using CATIA
- Preparation of detail 2D Tool drawing for manufacturing as per ANSI Y14.5M
- Knowledge in Aerospace material, GD&T, fits and tolerances, Manufacturing process.

NC Programmer - Machine Shop, knowledge of CAM programming, CNC Programming
Qualification: Diploma/BE/B.Tech/M.Tech
Experience: 2 to 15 Years (Preferably Aerospace)
Description:
- Experience on NC Programming in Catia, NX, Vericut, Process Sheet Creation, Raw material Estimation, APQP Document Creation
- Knowledge on cutting tools & parameters,3-Axis, 4-Axis, 5-Axis machining, Aerospace material, GD&T, knowledge of millturn and turning programming, Cutting of HRSA material e.g Inconel 718, Titanium.

Estimator: Aerostructure Assembly, Machining, Sheetmetal & Composites
Qualification: Diploma/BE/B.Tech/M.Tech
Experience: 2 to 15 Years (Preferably Aerospace)
Description:
- Good Knowledge on Manufacturing Engineering / Production, NC programming experience of Aerostructure Assembly. CATIA & UG, RFP documents, 2D drawings, 3D CAD models
- Understanding on latest machines like high speed Aluminium machining and machining of Hard metals like Steel, Titanium, Inconel and other Nickel based alloys

Work Location: Hyderabad / Nagpur
Date of Interview: 18-06-2022
Timings: 09.00 AM - 05.00 PM
Venue **HOTEL CITRUS CUNNINGHAM**
34, Cunningham Road, Bengaluru, Karnataka

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿ ಇದೆ. 10,000 -15,000. 8951315839, 9880545002

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಪ್ರಾಪರ್ಟಿಗೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9880856233

HEALTH SPECIAL

ಇಡೀ ವಿಶ್ವದಲ್ಲಿ ನಂ.1 ಚಿಕಿತ್ಸೆ
ಶ್ರೀ ಶಕ್ತಿ ಹೆಲ್ತ್ ಕೇರ್ (ರಿ.)
ಕೀಲು ಮೂಳೆಗಳ ಚಿಕಿತ್ಸಾಲಯ ಉಚಿತವಾಗಿ ಕೊಡಲಾಗುವುದು.
ಮಂಡಿ, ಬೆನ್ನು, ಕತ್ತುನೋವು, ಹಿಮ್ಮಡಿ ನೋವು, ಟೆನ್ನಿಸ್ ಎಲಬೋಪೇನ್, ತಲೆನೋವು, ಮೈಗ್ರೇನ್, ಮಾನಸಿಕ ಸಮಸ್ಯೆ, ಚಿಕನ್‌ಗುನ್ಯಾ, ಗಂಟುನೋವು, ರೂಮೆಟೆಡ್ ಅರ್ಥೈಟಿಸ್, ವೆರಿಕೋಸ್ ವೇಯನ್ಸ್ ಸಮಸ್ಯೆ ಕಾಲುಗಳಲ್ಲಿ ಊತ ಮತ್ತು ರಕ್ತ ಚಲನೆ ಇಲ್ಲದವರಿಗೆ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ, ಸಯಾಟಿಕ್ ಇತ್ಯಾದಿ... ವಿಶೇಷವಾದ ಎಲೆಕ್ಟ್ರೋಮ್ಯಾಗ್ನೆಟಿಕ್ ಥೆರಪಿಯಿಂದ ಯಾವುದೇ ರೀತಿಯ ಔಷಧಿ ಮತ್ತು ಶಸ್ತ್ರಚಿಕಿತ್ಸೆ ಇಲ್ಲದೇ ನೂತನ ಉಪಕರಣಗಳಿಂದ ಚಿಕಿತ್ಸೆ ದೊರೆಯುತ್ತದೆ.
ಮೊ: 9036316959 | ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ
ವಿಳಾಸ : ಸ್ವಸ್ತಿಕ್ ಕಾಂಪ್ಲೆಕ್ಸ್, ಪೊಲೀಸ್ ಠಾಣೆ ಎದುರು, ಶೇಷಾದ್ರಿಪುರಂ, ಬೆಂಗಳೂರು–560 020.

Wanted

ಕರ್ನಾಟಕದಾದ್ಯಂತ ಕೆಲಸ ಮಾಡಲು ಡಿಪ್ಲೊಮ ಸಿವಿಲ್ ಇಂಜಿನಿಯರ್ ಬೇಕಾಗಿದ್ದಾರೆ. ಹೊಸಬರಿಗೆ ಆದ್ಯತೆ ನೀಡಲಾಗುವುದು. ವಸತಿ ಇರುತ್ತದೆ. ಆಸಕ್ತರು ಸಂಪರ್ಕಿಸಿ: 9341301490

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ವಾಹನ

Four Wheelers Selling

TATA

ಸಾರ್ವಜನಿಕ ಪ್ರಕಟಣೆ

StockHolding®
Stock Holding Corporation of India Limited
Regd. Office : 301, Centre Point, Dr. Babasaheb Ambedkar Road, Parel, Mumbai-400 012
CIN:U67190MH1986GOI040506

NOTICE FOR INVITATION OF BID FOR APPOINTMENT OF CENTRAL & REGIONAL INTERNAL AUDITORS

Stockholding Corporation of India Limited invites bids in the prescribed format from eligible practicing firms of Chartered Accountants for appointment as Central Internal Auditors at Mumbai Office and Regional Internal Auditors at Regional offices based across India.

The Request for Proposal (RFP) is available on company website : **https://corporate.StockHolding.com/notices/**

The bid can be submitted on or before **5.00 p.m. on July 7, 2022.**

Corrigendum / Addendum with regard to this advertisement, if any, shall be uploaded only on same website.

StockHolding reserves the right to accept or reject any or all applications without assigning any reason.

For queries contact : **internal.auditor@stockholding.com**

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

ಶ್ರೀ ಜೈಶಂಕರಿ ಜ್ಯೋತಿಷ್ಯ ಕೇಂದ್ರ. ವಿದ್ಯೆ, ಉದ್ಯೋಗ, ಸ್ತ್ರೀ-ಪುರುಷ ವಶೀಕರಣ, ಇಷ್ಟಪಟ್ಟವರು ನಿಮ್ಮಂತಾಗಲು, ಕೇವಲ ಮೂರು ದಿನಗಳಲ್ಲಿ ಶಾಶ್ವತವಾದ ಪರಿಹಾರ. PH:9980057857 (ಫೋನಿನ ಮುಖಾಂತರ ಪರಿಹಾರ ಮಾಡಿಕೊಡುತ್ತಾರೆ).

For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

SPECIAL RATES FOR
Admission Notice,
Education Success
Congratulation Ads

ಪ್ರವಾಸ

Travel

ವಿಜಯವಾಡ ಭದ್ರಾಚಲಂ ಪಂಚರಾಮ ಮಂದಿರಗಳು ಸಿಂಹಾಚಲಂ,ಅನ್ನಾವರಂ 07.08.2022 ರಿಂದ 10 ದಿನಗಳು. ರಾಮೇಶ್ವರಂ ಕನ್ಯಾಕುಮಾರಿ ಕುಟ್ರಾಲಂ ಫಾಲ್ಸ್ ಈಶಾಫೌಂಡೇಶನ್ 08.08.2022 ರಿಂದ 7 ದಿನಗಳು. ಶ್ರೀಶೈಲಂ,ಮಹಾನಂದಿ,ಅಹೋಬಲ ನವನರಸಿಂಹ 11.08.2022 ರಿಂದ 5 ದಿನಗಳು. ನೈಮೀಶಾರಣ್ಯ ಚಿತ್ರಕೂಟ,ಕಾಶಿ,ಗಯಾ 07.08.2022 ರಿಂದ 8 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

"ಶ್ರೀಭಗವತಿ ಜ್ಯೋತಿಷ್ಯಾಲಯ" ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,692
ಇಂದಿನ ಅಂತ್ಯ	15,360
▼	331
ದಿನದ ಕನಿಷ್ಠ	15863

ವಿನಿಮಯ ದರ

$ ಡಾಲರ್	78.1
£ ಪೌಂಡ್	94.62
€ ಯುರೊ	81.93
¥ ಯೆನ್ (100ಕ್ಕೆ)	58.81

ಕೊಬ್ಬರಿ ಧಾರಣೆ

ಪುತ್ತೂರು(ಇತರ)
₹4000-9000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1400-1800
ಮಧ್ಯಮ	₹1000-1400
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹249-581
ದ್ವಿತಳಿ (ಬಿ.ವಿ)
₹396-823

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹173.00
ಆರ್‌ಎಸ್‌ಎಸ್-5 ₹165.00
ಗುಡ್ ಲಾಟ್ ₹157.00

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹12000-15000

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1465 (1475)
ಸೂರ್ಯಕಾಂತಿ (ರಿಫೈನ್ಡ್)	₹1745 (1750)
ಪಾಮೋಲಿನ್	₹1407 (1420)

ಸ್ವಿಸ್ ಬ್ಯಾಂಕ್‌ನಲ್ಲಿ ಭಾರತೀಯರ ಹಣ ಏರಿಕೆ

ನವದೆಹಲಿ/ಜ್ಯೂರಿಕ್ (ಪಿಟಿಐ): ಭಾರತದ ವ್ಯಕ್ತಿಗಳು ಮತ್ತು ಸಂಸ್ಥೆಗಳು ಸ್ವಿಸ್ ಬ್ಯಾಂಕ್‌ನಲ್ಲಿ ಬೇರೆ ಬೇರೆ ರೂಪದಲ್ಲಿ ಇರಿಸಿರುವ ಮೊತ್ತ 14 ವರ್ಷಗಳ ಗರಿಷ್ಠ ಮಟ್ಟವಾದ ₹ 30,500 ಕೋಟಿಗೆ 2021ರಲ್ಲಿ ತಲುಪಿದೆ ಎಂದು ಸ್ವಿಜರ್ಲೆಂಡ್‌ನ ಕೇಂದ್ರೀಯ ಬ್ಯಾಂಕ್ ನೀಡಿರುವ ಅಂಕಿ–ಅಂಶಗಳು ಹೇಳಿವೆ.

2020ರ ಕೊನೆಯಲ್ಲಿ ಭಾರತದ ಗ್ರಾಹಕರು ಸ್ವಿಸ್ ಬ್ಯಾಂಕ್‌ಗಳಲ್ಲಿ ಇರಿಸಿದ ಮೊತ್ತವು ₹ 20,700 ಕೋಟಿಯಷ್ಟಿತ್ತು. ಭಾರತೀಯರು ಜಮಾ ಮಾಡಿರುವ ಹಣದ ಮೊತ್ತ ಸತತ ಎರಡು ವರ್ಷಗಳಿಂದ ಹೆಚ್ಚಾಗುತ್ತಿದೆ.

ಭಾರತದ ಗ್ರಾಹಕರ ಉಳಿತಾಯ ಅಥವಾ ಠೇವಣಿ ಖಾತೆಗಳಲ್ಲಿ ಇರುವ ಹಣವು ಏಳು ವರ್ಷಗಳ ಗರಿಷ್ಠ ಮೊತ್ತವಾದ ₹ 4,800 ಕೋಟಿಗೆ ತಲುಪಿದೆ.

ಐದು ದಿನಗಳಲ್ಲಿ ₹ 15 ಲಕ್ಷ ಕೋಟಿ ಕಳೆದುಕೊಂಡ ಹೂಡಿಕೆದಾರರು

ವರ್ಷದ ಹಿಂದಿನ ಮಟ್ಟಕ್ಕೆ ಇಳಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಸತತ ಐದನೆಯ ದಿನವೂ ಕುಸಿತ ಕಂಡಿರುವ ದೇಶದ ಷೇರುಪೇಟೆ ಸೂಚ್ಯಂಕಗಳು, ಒಂದು ವರ್ಷದ ಹಿಂದಿನ ಮಟ್ಟ ತಲುಪಿವೆ. ಅಮೆರಿಕದ ಫೆಡರಲ್ ರಿಸರ್ವ್, ಬಡ್ಡಿ ದರವನ್ನು ಶೇ 0.75ರಷ್ಟು ಹೆಚ್ಚಿಸಿದ ನಂತರದಲ್ಲಿ ಜಾಗತಿಕ ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು, ಇದು ದೇಶದ ಷೇರುಪೇಟೆಗಳ ಮೇಲೆಯೂ ಪರಿಣಾಮ ಬೀರಿತು.

1994ರ ನಂತರದ ಅತಿಹೆಚ್ಚಿನ ಪ್ರಮಾಣದ ಬಡ್ಡಿ ಹೆಚ್ಚಳ ಮಾಡಿರುವ ಫೆಡರಲ್ ರಿಸರ್ವ್, ಇನ್ನಷ್ಟು ಬಿಗಿಯಾದ ಹಣಕಾಸಿನ ನೀತಿ ಅನುಸರಿಸುವ ಸುಳಿವು ನೀಡಿದೆ. ಅಮೆರಿಕದ ಆರ್ಥಿಕ ಬೆಳವಣಿಗೆ ಪ್ರಮಾಣ ಕಡಿಮೆ ಆಗುವ ಅಂದಾಜು ಮಾಡಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,045 ಅಂಶ ಕುಸಿದು 51,495 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ಇದು ಒಂದು ವರ್ಷದ ಕನಿಷ್ಠ ಮಟ್ಟ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 331 ಅಂಶ ಕುಸಿದು, 15,360 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ಗುರುವಾರದ ವಹಿವಾಟಿನಲ್ಲಿ ಹೂಡಿಕೆದಾರರು ₹ 5.54 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ. ಐದು ದಿನಗಳ ಅವಧಿಯಲ್ಲಿ ₹ 15.74 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ. 'ಈಗಿನ ಪರಿಸ್ಥಿತಿಯಲ್ಲಿ, ಹಣದುಬ್ಬರದ ಪರಿಣಾಮ ಕಡಿಮೆ ಇರುವ ಹಣಕಾಸು ಮತ್ತು ಸೇವಾ ವಲಯದ ಷೇರುಗಳು ಹೆಚ್ಚು ಸುರಕ್ಷಿತ. ಅಲ್ಲದೆ, ಐ.ಟಿ., ಫಾರ್ಮಾ ಮತ್ತು ದೂರಸಂಪರ್ಕ ವಲಯದ ಷೇರುಗಳನ್ನೂ ದೀರ್ಘಾವಧಿಗೆ ಪರಿಗಣಿಸಬಹುದು' ಎಂದು ಜಿಯೋಜಿತ್ ಫೈನಾನ್ಶಿಯಸ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಫೆಡರಲ್ ರಿಸರ್ವ್ ಮತ್ತು ಆರ್‌ಬಿಐ ಹಣಕಾಸು ನೀತಿಯನ್ನು ಬಿಗಿಗೊಳಿಸಿರುವುದರಿಂದ, ತೈಲ ಬೆಲೆ ಜಾಸ್ತಿಯಾಗುತ್ತಿರುವುದರಿಂದ ಷೇರುಪೇಟೆಗಳಲ್ಲಿ ಗಳಿಕೆಯ ಓಟ ಶುರುವಾಗುವುದು ಕಷ್ಟ ಎಂದು ಮೆಹ್ತಾ ಈಕ್ವಿಟಿಸ್‌ನ ಸಂಶೋಧನಾ ಉಪಾಧ್ಯಕ್ಷ ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಸಣ್ಣ ಹೂಡಿಕೆದಾರರಿಗೆ ತಜ್ಞರ ಕಿವಿಮಾತು

'ಸಂಪತ್ತು ನಾಶಕ ಅಲ್ಲ ಎಲ್‌ಐಸಿ'

• ವಿಜಯ್ ಜೋಷಿ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರುಗಳು ದೇಶದ ಷೇರುಪೇಟೆಗಳಲ್ಲಿ ವಹಿವಾಟು ಆರಂಭಿಸಿದ ಒಂದು ತಿಂಗಳಲ್ಲಿ ಷೇರು ಮೌಲ್ಯವು ನೀಡಿಕೆ ಬೆಲೆಗೆ ಹೋಲಿಸಿದರೆ ಶೇಕಡ 29.66ರಷ್ಟು ಕುಸಿದಿದೆ.

ಎಲ್‌ಐಸಿ ಷೇರು ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಿ ಶುಕ್ರವಾರಕ್ಕೆ ಒಂದು ತಿಂಗಳು ಆಗುತ್ತಿದೆ. ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಸಂದರ್ಭದಲ್ಲಿ ಎಲ್‌ಐಸಿಯ ಪ್ರತಿ ಷೇರನ್ನು ಹೂಡಿಕೆದಾರರಿಗೆ ₹ 949ಕ್ಕೆ ನೀಡಲಾಗಿದೆ. ಗುರುವಾರದ ಅಂತ್ಯಕ್ಕೆ ಷೇರು ಮೌಲ್ಯವು ₹ 667.50ಕ್ಕೆ ತಲುಪಿದೆ.

'ಎಲ್‌ಐಸಿಯ ಲಾಭ, ಅದು ಹೊಂದಿರುವ ಆಸ್ತಿ, ಸರ್ಕಾರದ ಮಾಲೀಕತ್ವ ಕಂಡು ಸಣ್ಣ ಹೂಡಿಕೆದಾರರು ಐಪಿಒ ವೇಳೆ ಮುಗಿಬಿದ್ದು ಹೂಡಿಕೆ ಮಾಡಿದ್ದರು. ಆದರೆ, ಷೇರು ಖರೀದಿಸಿದ್ದವರು ಈಗ ಕೈಕೈ ಹಿಸುಕಿಕೊಳ್ಳುತ್ತಿದ್ದಾರೆ. ಈಗ ಏನು ಮಾಡುವುದು ಎಂದು ಪ್ರಶ್ನಿಸುತ್ತಿದ್ದಾರೆ' ಎಂದು ಷೇರು ಬ್ರೋಕರೇಜ್ ಸೇವಾ ಕಂಪನಿಯ ಪ್ರತಿನಿಧಿಯೊಬ್ಬರು ತಿಳಿಸಿದರು.

ಎಲ್‌ಐಸಿ ಷೇರು ಕಥೆ

₹ 949
ಷೇರಿನ ನೀಡಿಕೆ ಬೆಲೆ

₹ 667.50
ಗುರುವಾರದ ಅಂತ್ಯಕ್ಕೆ ಷೇರು ಬೆಲೆ

29.66%
ನೀಡಿಕೆ ಬೆಲೆಗೆ ಹೋಲಿಸಿದರೆ ಕುಸಿತ ಪ್ರಮಾಣ

ಎಲ್‌ಐಸಿ ಷೇರು ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಿ ಶುಕ್ರವಾರಕ್ಕೆ ಒಂದು ತಿಂಗಳು ಆಗುತ್ತಿದೆ ... (see above)

ಎಲ್‌ಐಸಿ ಷೇರುಗಳು ಸಂಪತ್ತು ನಾಶಕ ಅಲ್ಲ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ಡಾ.ವಿ.ಕೆ. ವಿಜಯಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಈ ಪರಿಸ್ಥಿತಿಯು ಬದಲಾಗುತ್ತದೆ. ಮಾರುಕಟ್ಟೆಯಲ್ಲಿ ತೇಜಿ ವಹಿವಾಟು ಶುರುವಾದ ನಂತರದಲ್ಲಿ ಎಲ್‌ಐಸಿ ಮೌಲ್ಯ ಕೂಡ ಹೆಚ್ಚುವ ಸಾಧ್ಯತೆ ಇದೆ ಎಂದು ಅವರು ಅಭಿಪ್ರಾಯಪಟ್ಟರು.

ಎಲ್‌ಐಸಿಗೆ ಮೊದಲು ಷೇರು ಮಾರುಕಟ್ಟೆ ಪ್ರವೇಶಿಸಿರುವ ಕೇಂದ್ರ ಸರ್ಕಾರದ ಮಾಲೀಕತ್ವದ ಇಂಡಿಯನ್ ರೈಲ್ವೆ ಫೈನಾನ್ಸ್ ಕಾರ್ಪೊರೇಷನ್ (ಐಆರ್‌ಎಫ್‌ಸಿ), ರೇಲ್‌ಟೆಲ್ ಕಂಪನಿಗಳ ಷೇರುಗಳೂ ನೀಡಿಕೆ ಬೆಲೆಗಿಂತ ಕಡಿಮೆ ಮಟ್ಟದಲ್ಲಿವೆ. ರೇಲ್‌ಟೆಲ್ ಷೇರುಗಳನ್ನು ₹ 94ರಂತೆ ನೀಡಲಾಗಿತ್ತು. 2021ರ ಫೆಬ್ರುವರಿಯಲ್ಲಿ ಮಾರುಕಟ್ಟೆ ಪ್ರವೇಶಿಸಿದ ಇದರ ಬೆಲೆ ಗುರುವಾರದ ಅಂತ್ಯಕ್ಕೆ ₹ 91.75 ಆಗಿತ್ತು.

ಐಆರ್‌ಎಫ್‌ಸಿ ಷೇರುಗಳನ್ನು ₹ 26ರಂತೆ ನೀಡಲಾಗಿತ್ತು. 2021ರ ಜನವರಿಯಲ್ಲಿ ಮಾರುಕಟ್ಟೆ ಪ್ರವೇಶಿಸಿದ ಇದರ ಬೆಲೆ ಗುರುವಾರದ ಅಂತ್ಯಕ್ಕೆ ₹ 20.05 ಆಗಿತ್ತು. 'ಎಲ್‌ಐಸಿ ಷೇರುಗಳ ಈಗಿನ ಬೆಲೆ ಆಕರ್ಷಕವಾಗಿದೆ.

ಐಪಿಒ ಸಂದರ್ಭದಲ್ಲಿ ಎಲ್‌ಐಸಿ ಷೇರು ಖರೀದಿಸಿದವರೂ ಈಗ ಮತ್ತಷ್ಟು ಖರೀದಿಸಿ, ಸರಾಸರಿ ಖರೀದಿ ಬೆಲೆಯನ್ನು ತಗ್ಗಿಸಿಕೊಳ್ಳಬಹುದು' ಎಂದು ಅವರು ಸಲಹೆ ನೀಡಿದರು.

'ಐಪಿಒ ಮೂಲಕ ಷೇರು ಖರೀದಿಸಿ, ರಾತ್ರೋರಾತ್ರಿ ಲಾಭ ಮಾಡಿಕೊಳ್ಳುವ ನಿರೀಕ್ಷೆ ಇಟ್ಟುಕೊಳ್ಳಬಾರದು ಎಂಬ ಪಾಠವನ್ನು ಎಲ್‌ಐಸಿ ವಿದ್ಯಮಾನವು ಸಣ್ಣಹೂಡಿಕೆದಾರರಿಗೆ ಕಲಿಸಿದೆ' ಎಂದು ವೆಂಚುರಾ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ವಿನೀತ್ ಬೊಲಿಂಜ್ಕರ್ ಹೇಳಿದರು.

'ಯುದ್ಧ, ಕಚ್ಚಾ ತೈಲದ ಬೆಲೆ ಏರಿಕೆ, ಬಡ್ಡಿ ದರ ಏರಿಕೆಯ ಸಂದರ್ಭವು ಐಪಿಒಗೆ ಸೂಕ್ತವಾಗಿರಲಿಲ್ಲ' ಎಂದು ಅವರು ಹೇಳಿದರು. ಐಆರ್‌ಸಿಟಿಸಿ ಹೊರತುಪಡಿಸಿದರೆ, ಕೇಂದ್ರ ಸರ್ಕಾರದ ಕಂಪನಿಗಳು ಹೂಡಿಕೆದಾರರ ಹಣದ ಮೌಲ್ಯ ತಗ್ಗಿಸಿದ ಉದಾಹರಣೆಗಳಿವೆ ಎಂದರು. ಭೀತಿಗೆ ಒಳಗಾಗಿ ಷೇರುಗಳನ್ನು ಮಾರಾಟ ಮಾಡುವುದಕ್ಕಿಂತ, ಅವುಗಳನ್ನು ಇರಿಸಿಕೊಳ್ಳುವುದು ಒಳ್ಳೆಯದು ಎಂದು ಅವರು ಕಿವಿಮಾತು ಹೇಳಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು -	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಚಿತ್ರದುರ್ಗ	
ಆಪಿ	48619-49079
ಬೆಟ್ಟೆ	38039-38469
ಕೆಂಪುಗೋಟು	27700-28100
ರಾಶಿ	48129-48559
ಕುಂದಾಪುರ	
ಹಳೆಚಾಲಿ	50000-54000
ಹೊಸಚಾಲಿ	38000-40500
ಮಂಗಳೂರು	
ಕೋಕ	20000-24000
ಪುತ್ತೂರು	
ಕೋಕ	11000-26000
ಹೊಸತು	27500-41500
ಸಾಗರ	
ಬಿಳಿಗೋಟು	22110-29100
ಚಾಲಿ	33099-37299
ಕೋಕ	22819-33889
ಕೆಂಪುಗೋಟು	26129-37809
ರಾಶಿ	36899-49699
ಸಿಪ್ಪೆಗೋಟು	5290-20200
ಶಿವಮೊಗ್ಗ	
ಬೆಟ್ಟೆ	50119-54009
ಗೊರಬಲು	17200-37699
ರಾಶಿ	45520-49399
ಸರಕು	59799-80400
ಸಿದ್ದಾಪುರ	
ಬಿಳಿಗೋಟು	25399-30300
ಚಾಲಿ	34099-38499
ಕೋಕ	24699-30900
ಕೆಂಪುಗೋಟು	26790-32119
ರಾಶಿ	43599-48199
ತಟ್ಟಿಬೆಟ್ಟೆ	39099-46299
ಶಿರಸಿ	
ಬೆಟ್ಟೆ	31069-45110
ಬಿಳಿಗೋಟು	23210-32599
ಚಾಲಿ	34611-38889
ರಾಶಿ	42711-48018
ಯಲ್ಲಾಪುರ	
ಆಪಿ	53169-53169
ಬಿಳಿಗೋಟು	26109-31899
ಚಾಲಿ	34629-38399
ಕೋಕ	18899-28899
ಕೆಂಪುಗೋಟು	30099-34407
ರಾಶಿ	46609-51989
ತಟ್ಟಿಬೆಟ್ಟೆ	37419-44819

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	15900	16100	228.16 ಸೆಂಟ್ಸ್
ಎಸಿ	8960	8600	8900	
ಆರ್‌ಪಿ	9750	9800	9950	ಲಂಡನ್
ಆರ್‌ಸಿ	4715	4500	4550	2046 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ
16-06-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	11050-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1395 (1390)
ಪಾಮ್ ವಾರದ ಡೆಲಿವರಿ	1405 (1418)
ಸೂರ್ಯಕಾಂತಿ ಎಣ್ಣೆ ಕಚ್ಚಾ	1715 (1715)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,400 (50,650)
ಬೆಳ್ಳಿ ಕೆ.ಜಿ 60,575 (60,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹525
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹525

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರ್ಮ್ ಪಡೆಯಿರಿ.

ಶೇ 8.2ಕ್ಕೆ ಇಳಿದ ನಿರುದ್ಯೋಗ ಪ್ರಮಾಣ

ನವದೆಹಲಿ (ಪಿಟಿಐ): ನಗರ ಪ್ರದೇಶಗಳಲ್ಲಿ ನಿರುದ್ಯೋಗದ ಪ್ರಮಾಣವು ಜನವರಿ–ಮಾರ್ಚ್ ಅವಧಿಯಲ್ಲಿ ಶೇಕಡ 8.2ಕ್ಕೆ ಇಳಿಕೆಯಾಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 9.3ರಷ್ಟು ಇತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ.

2021ರ ಜನವರಿ–ಮಾರ್ಚ್ ಅವಧಿಯಲ್ಲಿ ಲಾಕ್‌ಡೌನ್ ಪರಿಣಾಮಗಳಿಂದಾಗಿ ನಿರುದ್ಯೋಗವು ಹೆಚ್ಚಿತ್ತು. 2021ರ ಅಕ್ಟೋಬರ್–ಡಿಸೆಂಬರ್‌ನಲ್ಲಿ ನಿರುದ್ಯೋಗ ಪ್ರಮಾಣವು ಶೇ 8.7ರಷ್ಟು ಆಗಿತ್ತು. ಮಹಿಳೆಯರ ಪೈಕಿ ನಿರುದ್ಯೋಗ ಪ್ರಮಾಣವು ಜನವರಿ–ಮಾರ್ಚ್‌ನಲ್ಲಿ ಶೇ 10.1ಕ್ಕೆ ಇಳಿದಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 11.8ರಷ್ಟು ಆಗಿತ್ತು. ಪುರುಷರಲ್ಲಿನ ನಿರುದ್ಯೋಗವು 2021ರ ಜನವರಿ–ಮಾರ್ಚ್ ಅವಧಿಯಲ್ಲಿ ಶೇ 8.6ರಷ್ಟು ಇದ್ದಿದ್ದು, ಈ ವರ್ಷದ ಜನವರಿ–ಮಾರ್ಚ್‌ನಲ್ಲಿ ಶೇ 7.7ಕ್ಕೆ ಇಳಿಕೆಯಾಗಿದೆ.

ನಾಲ್ಕನೇ ಟಿ20 ಪಂದ್ಯ ಇಂದು: ಸರಣಿ ಗೆಲುವಿನ ತವಕದಲ್ಲಿ ದಕ್ಷಿಣ ಆಫ್ರಿಕಾ

ಜಯಿಸುವ ಒತ್ತಡದಲ್ಲಿ ಪಂತ್ ಬಳಗ

ರಾಜ್‌ಕೋಟ್ (ಪಿಟಿಐ): ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಟಿ20 ಕ್ರಿಕೆಟ್ ಸರಣಿ ಈಗ ರೋಚಕ ಘಟ್ಟಕ್ಕೆ ಬಂದು ನಿಂತಿದೆ. ಶುಕ್ರವಾರ ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆಯಲಿರುವ ನಾಲ್ಕನೇ ಟಿ20 ಪಂದ್ಯವು ಆತಿಥೇಯ ಭಾರತಕ್ಕೆ ಕಠಿಣ ಸವಾಲಾಗಿದೆ.

ತಂಡಕ್ಕೆ ಸರಣಿ ಜಯದ ಕನಸು ಜೀವಂತವಾಗುಳಿಯಬೇಕಾದರೆ, ರಿಷಭ್ ಪಂತ್ ಬಳಗವು ಇಲ್ಲಿ ಜಯಿಸಲೇಬೇಕಿದೆ. ಆದರೆ ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಗೆದ್ದಿರುವ ದಕ್ಷಿಣ ಆಫ್ರಿಕಾ ತಂಡವು ಮೂರನೇ ಪಂದ್ಯದಲ್ಲಿ ಸೋತಿತ್ತು. ಭಾರತವು ಇಲ್ಲಿ ಜಯಿಸಿ ಸರಣಿಯಲ್ಲಿ ಸಮಬಲ ಸಾಧಿಸಿದರೆ, ಬೆಂಗಳೂರಿನಲ್ಲಿ ಭಾನುವಾರ ನಡೆಯುವ ಕೊನೆಯ ಪಂದ್ಯವು ಕುತೂಹಲದ ಕಣಜವಾಗುವುದು ಖಚಿತ. ಆದರೂ 2–1ರಿಂದ ಮುಂದಿರುವ ತೆಂಬಾ ಬವುಮಾ ಬಳಗವೂ ರಾಜ್‌ಕೋಟ್‌ನಲ್ಲಿಯೇ ಜಯಿಸಿ ಸರಣಿ ಕಿರೀಟ ಧರಿಸುವ ವಿಶ್ವಾಸದಲ್ಲಿದೆ.

ಅಭ್ಯಾಸನಿರತ ಭಾರತ ತಂಡದ ಆಟಗಾರರು –ಎಎಫ್‌ಪಿ ಚಿತ್ರ

ವಿಶಾಖಪಟ್ಟಣದಲ್ಲಿ ಮೂರು ದಿನಗಳ ಹಿಂದೆ ನಡೆದಿದ್ದ ಮೂರನೇ ಟಿ20 ಪಂದ್ಯದಲ್ಲಿ ಭಾರತ ತಂಡವು ಆಲ್‌ರೌಂಡ್ ಸಾಮರ್ಥ್ಯ ಮೆರೆದಿತ್ತು. ಆರಂಭಿಕ ಜೋಡಿ ಋತುರಾಜ್ ಗಾಯಕವಾಡ ಮತ್ತು ಇಶಾನ್ ಕಿಶನ್ ಅವರು ತಲಾ ಒಂದು ಅರ್ಧಶತಕ ಹೊಡೆದು ಉತ್ತಮ ಅಡಿಪಾಯ ಹಾಕಿದ್ದರು. ಮಧ್ಯಮವೇಗಿ ಹರ್ಷಲ್ ಪಟೇಲ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರಿಬ್ಬರೂ ಚಾಣಾಕ್ಷ ಬೌಲಿಂಗ್‌ನಿಂದ ದಕ್ಷಿಣ ಆಫ್ರಿಕಾದ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಿದರು.

ಆದರೆ, ಮಧ್ಯಮ ಕ್ರಮಾಂಕದಲ್ಲಿ ಹಾರ್ದಿಕ್ ಪಾಂಡ್ಯ ಮತ್ತು ದಿನೇಶ್ ಕಾರ್ತಿಕ್ ಬಿಟ್ಟರೆ ಉಳಿದ ಬ್ಯಾಟರ್‌ಗಳಿಂದ ಉತ್ತಮ ಸಾಧನೆ ಮೂಡಿಬಂದಿಲ್ಲ. ಆರಂಭಿಕ ಜೋಡಿ ವೈಫಲ್ಯ ಅನುಭವಿಸಿದರೆ, ಹೋರಾಟದ ಮೊತ್ತ ಕಲೆಹಾಕಲು ನಾಯಕ ಪಂತ್ ಸಹಿತ ಉಳಿದ ಬ್ಯಾಟರ್‌ಗಳು ಮಿಂಚುವ ಅಗತ್ಯವಿದೆ. ಅದರಲ್ಲೂ ಇನಿಂಗ್ಸ್‌ನ ಕೊನೆಯ ಐದು ಓವರ್‌ಗಳಲ್ಲಿ ಹೆಚ್ಚು ರನ್ ಗಳಿಸುವ ಅಗತ್ಯವಿದೆ.

ದಕ್ಷಿಣ ಆಫ್ರಿಕಾ ಬೌಲಿಂಗ್ ಪಡೆಯೂ ಉತ್ತಮವಾಗಿವೆ. ಕಗಿಸೊ ರಬಾಡ, ತಬ್ರೇಜ್ ಶಂಸಿ, ಕೇಶವ ಮಹಾರಾಜ್ ಮತ್ತು ಎನ್ರಿಚ್ ನಾಕಿಯಾ ಅವರು ಉತ್ತಮ ಲಯದಲ್ಲಿದ್ದಾರೆ. ಹೆನ್ರಿಚ್ ಕ್ಲಾಸೆನ್, ಡೇವಿಡ್ ಮಿಲ್ಲರ್, ರಸಿ ವ್ಯಾನ್ ಡರ್ ಡಸೆ ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ರಾಜ್‌ಕೋಟ್‌ನಲ್ಲಿ ಮುಸ್ಸಂಜೆ ವಾತಾವರಣದಲ್ಲಿ ತೇವಾಂಶ ತುಸು ಹೆಚ್ಚಿರುವ ಕಾರಣ ಟಾಸ್ ಗೆದ್ದವರು ತೆಗೆದುಕೊಳ್ಳುವ ನಿರ್ಣಯವೂ ಮುಖ್ಯವಾಗಲಿದೆ. ಬಹುತೇಕ ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡು ಎದುರಾಳಿ ತಂಡವನ್ನು ಕಡಿಮೆ ಮೊತ್ತಕ್ಕೆ ಕಟ್ಟಿಹಾಕುವ ತಂತ್ರ ಅನುಸರಿಸುವ ಸಾಧ್ಯತೆಯೇ ಹೆಚ್ಚು.

ತಂಡಗಳು

ಭಾರತ: ರಿಷಭ್ ಪಂತ್ (ನಾಯಕ–ವಿಕೆಟ್‌ಕೀಪರ್), ಋತುರಾಜ್ ಗಾಯಕವಾಡ, ಇಶಾನ್ ಕಿಶನ್, ದೀಪಕ್ ಹೂಡಾ, ಶ್ರೇಯಸ್ ಅಯ್ಯರ್, ದಿನೇಶ್ ಕಾರ್ತಿಕ್, ಹಾರ್ದಿಕ್ ಪಾಂಡ್ಯ, ವೆಂಕಟೇಶ್ ಅಯ್ಯರ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ರವಿ ಬಿಷ್ಣೋಯಿ, ಭುವನೇಶ್ವರ್ ಕುಮಾರ್, ಹರ್ಷಲ್ ಪಟೇಲ್, ಆವೇಶ್ ಖಾನ್, ಅರ್ಷದೀಪ್ ಸಿಂಗ್ ಉಮ್ರಾನ್ ಮಲಿಕ್.

ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಕ್ವಿಂಟನ್ ಡಿ ಕಾಕ್ (ವಿಕೆಟ್‌ಕೀಪರ್), ರೀಜಾ ಹೆನ್ರಿಕ್ಸ್, ಹೆನ್ರಿಚ್ ಕ್ಲಾಸೆನ್, ಕೇಶವ್ ಮಹಾರಾಜ, ಡೇವಿಡ್ ಮಿಲ್ಲರ್, ಲುಂಗಿ ಗಿಡಿ, ಎನ್ರಿಚ್ ನಾಕಿಯಾ ವೇಯ್ನ್ ಪಾರ್ನೆಲ್, ಡ್ವೇನ್ ಪ್ರಿಟೋರಿಯಸ್, ಕಗಿಸೊ ರಬಾಡ, ತಬ್ರೇಜ್ ಶಮ್ಸಿ, ಟ್ರಿಸ್ಟನ್ ಸ್ಟಬ್ಸ್, ರಸಿ ವ್ಯಾನ್ ಡರ್ ಡಸೆ, ಮಾರ್ಕೊ ಜಾನ್ಸೆನ್.

ಬಲಾಬಲ

ಪಂದ್ಯಗಳು	18
ಭಾರತ ಜಯ	10
ದ.ಆಫ್ರಿಕಾ ಜಯ	8

ಪಂದ್ಯ ಆರಂಭ: ರಾತ್ರಿ 7

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ರಾಜ್‌ಕೋಟ್ ಅಂಗಳದಲ್ಲಿ ಚುಟುಕು ಕ್ರಿಕೆಟ್

ಎದುರಾಳಿ	ವರ್ಷ	ಫಲಿತಾಂಶ
ಆಸ್ಟ್ರೇಲಿಯಾ	2013	ಭಾರತಕ್ಕೆ 6 ವಿಕೆಟ್ ಜಯ
ನ್ಯೂಜಿಲೆಂಡ್	2017	ನ್ಯೂಜಿಲೆಂಡ್‌ಗೆ 40 ರನ್‌ಗಳ ಗೆಲುವು
ಬಾಂಗ್ಲಾದೇಶ	2019	ಭಾರತಕ್ಕೆ 8 ವಿಕೆಟ್‌ಗಳ ಜಯ

ನೀರಜ್ ಚೋಪ್ರಾ ಸಾರಥ್ಯ

ಕಾಮನ್‌ವೆಲ್ತ್ ಕೂಟ: ರಾಜ್ಯದ ಮನು, ಐಶ್ವರ್ಯಾಗೆ ಸ್ಥಾನ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕವಿಜೇತ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲಿರುವ ಭಾರತ ಅಥ್ಲೆಟಿಕ್ಸ್ ತಂಡದ ನಾಯಕತ್ವ ವಹಿಸಲಿದ್ದಾರೆ.

ಕರ್ನಾಟಕದ ಜಾವೆಲಿನ್ ಪಟು ಡಿ.ಪಿ. ಮನು ಮತ್ತು ಲಾಂಗ್‌ಜಂಪ್, ಟ್ರಿಪಲ್ ಜಂಪ್ ಅಥ್ಲೀಟ್ ಐಶ್ವರ್ಯಾ ಬಾಬು ಅವರೂ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ. 18 ಮಹಿಳಾ ಅಥ್ಲೀಟ್‌ಗಳು ಇರುವ ಒಟ್ಟು 37 ಜನರ ತಂಡವನ್ನು ಗುರುವಾರ ಭಾರತ ಅಥ್ಲೆಟಿಕ್ಸ್ ಫೆಡರೇಷನ್ ಪ್ರಕಟಿಸಿದೆ. ಅಂತರರಾಷ್ಟ್ರೀಯ ಅಥ್ಲೀಟ್ ಹಿಮಾ ದಾಸ್, ಒಲಿಂಪಿಯನ್ ದ್ಯುತಿ ಚಾಂದ್ ಅವರು ಮಹಿಳೆಯರ 4X100 ಮೀಟರ್ ರಿಲೆ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ. 100 ಮೀಟರ್ಸ್ ಓಟದಲ್ಲಿ ಎಸ್ ಧನಲಕ್ಷ್ಮೀ ಸ್ಪರ್ಧಿಸುವರು.

ನೀರಜ್ ಚೋಪ್ರಾ

ಐಶ್ವರ್ಯಾ

ಮನು

ಈಚೆಗೆ ನಡೆದ ಸ್ಪರ್ಧೆಗಳಲ್ಲಿ ತಮ್ಮದೇ ರಾಷ್ಟ್ರೀಯ ದಾಖಲೆಗಳನ್ನು ಉತ್ತಮ ಪಡಿಸಿಕೊಂಡ 3000 ಮೀಟರ್ ಸ್ಟಿಪಲ್‌ಚೇಸರ್ ಅವಿನಾಶ್ ಸಬ್ಳೆ ಮತ್ತು 100 ಮೀ ಹರ್ಡಲ್ಸ್ ಓಟಗಾರ್ತಿ ಜ್ಯೋತಿ ಯರಾಜಿ ಅವರಿಗೂ ಸ್ಥಾನ ಲಭಿಸಿದೆ. ಐಶ್ವರ್ಯಾ ಅವರು ಈಚೆಗೆ ಚೆನ್ನೈನಲ್ಲಿ ನಡೆದ ಅಂತರರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ಟ್ರಿಪಲ್ ಜಂಪ್‌ನಲ್ಲಿ ಉತ್ತಮ ಸಾಧನೆ ಮಾಡಿ ಅರ್ಹತೆ ಗಿಟ್ಟಿಸಿದ್ದಾರೆ. ಆದರೆ, 200 ಮೀಟರ್ಸ್ ಓಟದಲ್ಲಿ ದಾಖಲೆ ಬರೆದಿದ್ದ ಅಮ್ಲಾನ್ ಬೊರ್ಗೊಹೈನ್ ಅವರಿಗೆ ಸ್ಥಾನ ಸಿಕ್ಕಿಲ್ಲ. ಅವರು ಕಾಮನ್‌ವೆಲ್ತ್ ಕೂಟದ ಅರ್ಹತೆ ಮಟ್ಟವನ್ನು ತಲುಪಿರಲಿಲ್ಲ.

ಕಾಮನ್‌ವೆಲ್ತ್ ಕೂಟವು ಜುಲೈ 28ರಿಂದ ಆಗಸ್ಟ್ 8ರವರೆಗೆ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿದೆ.

ತಂಡ: ಪುರುಷರು: ನೀರಜ್ ಚೋಪ್ರಾ, ಡಿ.ಪಿ. ಮನು ಮತ್ತು ರೋಹಿತ್ ಯಾದವ್ (ಜಾವೆಲಿನ್ ಥ್ರೋ), ಅವಿನಾಶ್ ಸಬ್ಳೆ (3000ಮೀ ಸ್ಟಿಪಲ್‌ಚೇಸ್), ನಿತೆಂದರ್ ರಾವತ್ (ಮ್ಯಾರಥಾನ್), ಎಂ. ಶ್ರೀಶಂಕರ್ ಮತ್ತು ಮೊಹಮ್ಮದ್ ಅನೀಸ್ ಯಾಹ್ಯಾ (ಲಾಂಗ್ ಜಂಪ್), ಅಬ್ದುಲ್ ಅಬೂಬಕರ್, ಪ್ರವೀಣ ಚಿತ್ರವೇಲ್ ಮತ್ತು ಎಲ್ಡೋಸ್ ಪಾಲ್ (ಟ್ರಿಪಲ್ ಜಂಪ್), ತಜೀಂದರ್ ಪಾಲ್ ಸಿಂಗ್ ತೂರ್ (ಶಾಟ್‌ಪಟ್), ಸಂದೀಪ್ ಕುಮಾರ್ ಮತ್ತು ಅಮಿತ್ ಖತ್ರಿ (ರೇಸ್ ವಾಕಿಂಗ್), ಅಮೋಜ್ ಜೇಕಬ್, ನೋಹ್ ನಿರ್ಮಲ್ ಟಾಮ್, ಅರೋಕಿಯಾ ರಾಜೀವ್, ಮೊಹಮ್ಮದ್ ಅಜ್ಮಲ್, ನಾಗನಾಥನ್ ಪಾಂಡಿ ಮತ್ತು ರಾಜೇಶ್ ರಮೇಶ್ (4X400 ರಿಲೆ).

ಮಹಿಳೆಯರು: ಎಸ್. ಧನಲಕ್ಷ್ಮೀ (100ಮೀ ಮತ್ತು 4X100 ಮೀ ರಿಲೆ), ಜ್ಯೋತಿ ಯರಾಜಿ (100 ಮೀ ಹರ್ಡಲ್ಸ್), ಬಿ. ಐಶ್ವರ್ಯಾ (ಲಾಂಗ್‌ಜಂಪ್, ಟ್ರಿಪಲ್ ಜಂಪ್), ಯಾನ್ಸಿ ಸೋಜನ್ (ಲಾಂಗ್‌ಜಂಪ್), ಮನಪ್ರೀತ್ ಕೌರ್ (ಶಾಟ್‌ಪಟ್), ನವಜೀತ್ ಕೌರ್ ಧಿಲ್ಲೋನ್ ಮತ್ತು ಸೀಮಾ ಅಂಟಿಲ್ ಪೂನಿಯಾ (ಡಿಸ್ಕಸ್ ಥ್ರೋ), ಅನುರಾಣಿ ಮತ್ತು ಶಿಲ್ಪಾ ರಾಣಿ (ಜಾವೆಲಿನ್ ಥ್ರೋ), ಮಂಜು ಬಾಲಾ ಸಿಂಗ್ ಮತ್ತು ಸರಿತಾ ರೋಮಿತ್ ಸಿಂಗ್ (ಹ್ಯಾಮರ್ ಥ್ರೋ), ಭಾವನಾ ಜಾಟ್ ಮತ್ತು ಪ್ರಿಯಾಂಕಾ ಗೋಸ್ವಾಮಿ (ರೇಸ್ ವಾಕಿಂಗ್), ಹಿಮಾ ದಾಸ್, ದ್ಯುತಿ ಚಾಂದ್, ಶ್ರಬನಿ ನಂದಾ, ಎಂ.ವಿ. ಜಿಲ್ನಾ ಮತ್ತು ಎನ್.ಎಸ್. ಸಿಮಿ (4X100 ಮೀ ರಿಲೆ).

ಬ್ಯಾಡ್ಮಿಂಟನ್: ಅಶ್ವಿನಿ– ಸಿಕ್ಕಿ ರೆಡ್ಡಿ ಜೋಡಿಗೆ ಸೋಲು

ಕ್ವಾರ್ಟರ್ ಫೈನಲ್‌ಗೆ ಪ್ರಣಯ್

ಜಕಾರ್ತ (ಪಿಟಿಐ): ಉತ್ತಮ ಆಟ ಮುಂದುವರಿಸಿದ ಭಾರತದ ಎಚ್.ಎಸ್.ಪ್ರಣಯ್ ಅವರು ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಅವರು 21–11, 21–18 ರಲ್ಲಿ ಹಾಂಗ್‌ಕಾಂಗ್‌ನ ಅಂಗಸ್ ಲಾಂಗ್ ಅವರನ್ನು ಮಣಿಸಿದರು.

ಎರಡನೇ ಸುತ್ತಿನಲ್ಲಿ ಭಾರತದ ಲಕ್ಷ್ಯ ಸೇನ್ ವಿರುದ್ಧ ಗೆಲುವು ಸಾಧಿಸಿದ್ದ ಪ್ರಣಯ್, ವಿಶ್ವ ರ‍್ಯಾಂಕಿಂಗ್‌ನಲ್ಲಿ 12ನೇ ಸ್ಥಾನದಲ್ಲಿರುವ ಎದುರಾಳಿಯ ವಿರುದ್ಧ ಶಿಸ್ತಿನ ಆಟವಾಡಿದರು.

ಮೊದಲ ಗೇಮ್‌ನ ಆರಂಭದಲ್ಲೇ ಎದುರಾಳಿಯ ಮೇಲೆ ಒತ್ತಡ ಹೇರಿದ ಪ್ರಣಯ್, 11–3 ರ ಮುನ್ನಡೆ ಪಡೆದರು. ಈ ಹಂತದಲ್ಲಿ ಅವರು ಕೆಲವೊಂದು ಸ್ವಯಂಕೃತ ತಪ್ಪುಗಳನ್ನು ಮಾಡಿದ್ದರಿಂದ ಎದುರಾಳಿ ಒಂದಷ್ಟು ಪಾಯಿಂಟ್ ಗಳಿಸಿದರು. ಆದರೆ ವಿರಾಮದ ಬಳಿಕ ಯೋಜನಾಬದ್ಧ ಆಟವಾಡಿ ಗೇಮ್ ಗೆದ್ದರು.

ಎರಡನೇ ಗೇಮ್‌ನಲ್ಲಿ ಮರುಹೋರಾಟದ ಸೂಚನೆ ನೀಡಿದ ಲಾಂಗ್ 9–7ರಲ್ಲಿ ಅಲ್ಪ ಮೇಲುಗೈ ಸಾಧಿಸಿದರು. ಎಚ್ಚರಿಕೆಯ ಆಟವಾಡಿದ ಪ್ರಣಯ್, ಕ್ರಾಸ್ ಕೋರ್ಟ್ ಸ್ಮ್ಯಾಷ್‌ಗಳನ್ನು ಸಿಡಿಸಿ ಮೇಲಿಂದ ಮೇಲೆ ಪಾಯಿಂಟ್ ಕಲೆಹಾಕಿದರು.

ಭಾರತದ ಎಚ್‌.ಎಸ್‌.ಪ್ರಣಯ್ ಷಟಲ್ ಹಿಂದಿರುಗಿಸಿದರು –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಭಾರತದ ಸ್ಪರ್ಧಿಗೆ 21–11, 21–18ರಲ್ಲಿ ಗೆಲುವು
- ಸಮೀರ್ ವರ್ಮಾಗೆ ನಿರಾಸೆ
- ಅರ್ಜುನ್ –ಧ್ರುವ್ ಕಪಿಲಾ ಜೋಡಿ ಪರಾಭವ

ಸಮೀರ್ ವರ್ಮಾಗೆ ಸೋಲು: ಪುರುಷರ ಸಿಂಗಲ್ಸ್‌ನಲ್ಲಿ ಕಣದಲ್ಲಿದ್ದ ಭಾರತದ ಇನ್ನೊಬ್ಬ ಆಟಗಾರ ಸಮೀರ್ ವರ್ಮಾ ಎರಡನೇ ಸುತ್ತಿನಲ್ಲಿ 10–21, 13–21 ರಲ್ಲಿ ಮಲೇಷ್ಯಾದ ಲೀ ಜೀ ಜಿಯಾ ಎದುರು ಸೋತರು. ಲೀ ವಿರುದ್ಧದ ಏಳು ಹಣಾಹಣಿಗಳಲ್ಲಿ ಸಮೀರ್‌ಗೆ ಎದುರಾದ ಐದನೇ ಸೋಲು ಇದು. ಈ ಪಂದ್ಯ 43 ನಿಮಿಷಗಳಲ್ಲಿ ಕೊನೆಗೊಂಡಿತು.

ಮಹಿಳೆಯರ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ಸಿಕ್ಕಿ ರೆಡ್ಡಿ ಜೋಡಿ ಕೂಡಾ ಸೋಲು ಅನುಭವಿಸಿತು. ಇಲ್ಲಿ ಅಗ್ರಶ್ರೇಯಾಂಕ ಹೊಂದಿರುವ ಚೀನಾದ ಚೆನ್ ಕ್ವಿಂಗ್ ಮತ್ತು ಜಿಯಾ ಯಿಫಾನ್ ಅವರು 21–16, 21–13 ರಲ್ಲಿ ಭಾರತದ ಜೋಡಿಗೆ ಸೋಲುಣಿಸಿತು.

ಪುರುಷರ ಡಬಲ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ಭಾರತದ ಎಂ.ಆರ್. ಅರ್ಜುನ್ ಮತ್ತು ಧ್ರುವ್ ಕಪಿಲಾ ಅವರು 19–21, 15–21 ರಲ್ಲಿ ಚೀನಾದ ಚೆನ್ ಯು ಲಿಯು– ಯಿ ಯು ಕ್ಸುವಾನ್ ಎದುರು ಸೋತು ಹೊರಬಿದ್ದರು.

ಸಂಪತ್

ಬಸವರಾಜ್

ಏಷ್ಯನ್ ಸೈಕ್ಲಿಂಗ್: ಬಸವರಾಜ್, ಸಂಪತ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸೈಕ್ಲಿಸ್ಟ್‌ಗಳಾದ ಸಂಪತ್ ಪಾಸ್ಮೇಲ್ ಮತ್ತು ಬಸವರಾಜ್ ಹೊರಡ್ಡಿ ಅವರು ಇದೇ 18 ರಿಂದ 22ರ ವರೆಗೆ ನವದೆಹಲಿಯಲ್ಲಿ ನಡೆಯಲಿರುವ 41ನೇ ಏಷ್ಯನ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.

'ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಅಮರಾವತಿಯ ಸಂಪತ್ ಅವರು ಇತ್ತೀಚೆಗೆ ಹರಿಯಾಣದ ಪಂಚಕುಲಾದಲ್ಲಿ ಮುಕ್ತಾಯಗೊಂಡ ಖೇಲೋ ಇಂಡಿಯಾ ಯೂತ್ ಗೇಮ್ಸ್ ಟ್ರ್ಯಾಕ್ ಸೈಕ್ಲಿಂಗ್‌ನಲ್ಲಿ ಚಿನ್ನ ಜಯಿಸಿದ್ದರು. ಬಸವರಾಜ್ ಅವರು ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕಿನ ಹಲಕಿ ಗ್ರಾಮದವರು' ಎಂದು ಕರ್ನಾಟಕ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯ ಕಾರ್ಯದರ್ಶಿ ಶ್ರೀಶೈಲ ಕುರಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಣಜಿ ಟ್ರೋಫಿ ಸೆಮಿಫೈನಲ್: ಮಿಂಚಿದ ಮೋಹಿತ್

ಮುಂಬೈ ಬಳಗಕ್ಕೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಣಜಿ ಕ್ರಿಕೆಟ್ ಟೂರ್ನಿಯಲ್ಲಿ 42ನೇ ಟ್ರೋಫಿ ಮೇಲೆ ಕಣ್ಣಿಟ್ಟಿರುವ ಮುಂಬೈ ತಂಡವು ಇಲ್ಲಿ ನಡೆಯುತ್ತಿರುವ ಉತ್ತರಪ್ರದೇಶ ಎದುರಿನ ಸೆಮಿಫೈನಲ್‌ನಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿದೆ.

ಮೂರನೇ ದಿನವಾದ ಗುರುವಾರ ಒಟ್ಟು 346 ರನ್‌ಗಳ ಭಾರಿ ಮುನ್ನಡೆ ಗಳಿಸಿದೆ.

ಜಸ್ಟ್ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಮುಂಬೈ ತಂಡವು ಮೊದಲ ಇನಿಂಗ್ಸ್‌ನಲ್ಲಿ 393 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಉತ್ತರ ಪ್ರದೇಶ ತಂಡವು 54.3 ಓವರ್‌ಗಳಲ್ಲಿ 180 ರನ್ ಗಳಿಸಲು ಮಾತ್ರ ಶಕ್ತವಾಯಿತು. ತುಷಾರ್ ದೇಶಪಾಂಡೆ, ಮೋಹಿತ್ ಅವಸ್ತಿ ಮತ್ತು ತನುಷ್ ಕೋಟ್ಯಾನ್ ತಲಾ ಮೂರು ವಿಕೆಟ್ ಗಳಿಸಿ, ಮುಂಬೈಗೆ 213 ರನ್‌ಗಳ ಮುನ್ನಡೆಯ ಕಾಣಿಕೆ ನೀಡಿದರು. ಎರಡನೇ ದಿನದಾಟದಲ್ಲಿ ಉತ್ತರಪ್ರದೇಶ ತಂಡವು 12 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 25 ರನ್ ಗಳಿಸಿತ್ತು. ಆದರೆ, ಮೂರನೇ ದಿನದ ಮಧ್ಯಾಹ್ನವಾಗುವುದರಲ್ಲಿಯೇ ಎಂಟು ವಿಕೆಟ್‌ಗಳನ್ನು ಕಳೆದುಕೊಂಡಿತು. ಬಾಲಂಗೋಚಿ ಬ್ಯಾಟರ್ ಶಿವ ಮಾವಿ 48 ರನ್ ಗಳಿಸಿದ್ದು ಉತ್ತರಪ್ರದೇಶ ಪರ ಗರಿಷ್ಠ ವೈಯಕ್ತಿಕ ಸ್ಕೋರ್ ಆಗಿ ದಾಖಲಾಯಿತು.

ಮುಂಬೈನ ಎರಡನೇ ಇನಿಂಗ್ಸ್‌ಗೆ ನಾಯಕ ಪೃಥ್ವಿ ಶಾ (64; 71ಎ, 4X12) ಮತ್ತು ಯಶಸ್ವಿ ಜೈಸ್ವಾಲ್ (ಬ್ಯಾಟಿಂಗ್ 35, 114ಎ) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 66 ರನ್ ಗಳಿಸಿದರು. ಮೊದಲ ಇನಿಂಗ್ಸ್‌ನಲ್ಲಿ ವೈಫಲ್ಯ ಅನುಭವಿಸಿದ್ದ ಪೃಥ್ವಿ ಲಯ ಕಂಡುಕೊಂಡರು. ಶತಕ ಬಾರಿಸಿದ್ದ ಎಡಗೈ ಬ್ಯಾಟರ್ ಯಶಸ್ವಿ ಮತ್ತು ಅರ್ಮಾನ್ ಜಾಫರ್ (ಬ್ಯಾಟಿಂಗ್ 32) ಕ್ರೀಸ್‌ನಲ್ಲಿದ್ದಾರೆ. ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 67 ರನ್ ಸೇರಿಸಿದ್ದಾರೆ.

ಮುಂಬೈನ ಮೋಹಿತ್ ಅವಸ್ತಿ ಬೌಲಿಂಗ್ –ಚಿತ್ರ/ಬಿ.ಎಚ್. ಶಿವಕುಮಾರ್

ಕ್ವಾರ್ಟರ್‌ಫೈನಲ್‌ನಲ್ಲಿ ಮುಂಬೈ ತಂಡವು ಉತ್ತರಾಖಂಡ ಎದುರು 725 ರನ್‌ಗಳ ಅಂತರದ ಜಯಸಾಧಿಸಿ, ವಿಶ್ವದಾಖಲೆ ಬರೆದಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ: 140.4 ಓವರ್‌ಗಳಲ್ಲಿ 393, ಉತ್ತರಪ್ರದೇಶ: 54.3 ಓವರ್‌ಗಳಲ್ಲಿ 180 (ಕರಣ್ ಶರ್ಮಾ 27, ಪ್ರಿನ್ಸ್ ಯಾದವ್ 20, ಶಿವಂ ಮಾವಿ 48, ತುಷಾರ್ ದೇಶಪಾಂಡೆ 34ಕ್ಕೆ3, ಮೋಹಿತ್ ಅವಸ್ತಿ 39ಕ್ಕೆ3, ತನುಷ್ ಕೋಟ್ಯಾನ್ 35ಕ್ಕೆ3) ಎರಡನೇ ಇನಿಂಗ್ಸ್: ಮುಂಬೈ: 42 ಓವರ್‌ಗಳಲ್ಲಿ 1 ವಿಕೆಟ್‌ಗೆ 133 (ಪೃಥ್ವಿ ಶಾ 64, ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್ 35, ಅರ್ಮಾನ್ ಜಾಫರ್ ಬ್ಯಾಟಿಂಗ್ 32, ಸೌರಭ್ ಕುಮಾರ್ 32ಕ್ಕೆ1)

ಮಧ್ಯಪ್ರದೇಶಕ್ಕೆ ಮುನ್ನಡೆ

ಬಂಗಾಳದ ಕ್ರೀಡಾ ಸಚಿವ ಮನೋಜ್ ತಿವಾರಿ ಮತ್ತು ಶಾಬಾಜ್ ಅಹಮದ್ ಅವರು ಆಲೂರಿನ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮಧ್ಯಪ್ರದೇಶ ಎದುರು ನಡೆಯುತ್ತಿರುವ ರಣಜಿ ಟ್ರೋಫಿ ಸೆಮಿಫೈನಲ್‌ನಲ್ಲಿ ಸುಂದರ ಶತಕ ಗಳಿಸಿದರು. ಆದರೆ, ಮೊದಲ ಇನಿಂಗ್ಸ್‌ನಲ್ಲಿ ಮಧ್ಯಪ್ರದೇಶಕ್ಕೆ 68 ರನ್‌ಗಳ ಮುನ್ನಡೆ ಸಾಧಿಸುವುದನ್ನು ತಡೆಯುವಲ್ಲಿ ವಿಫಲರಾದರು.

ಮಧ್ಯಪ್ರದೇಶ ತಂಡವು ಮೊದಲ ಇನಿಂಗ್ಸ್‌ನಲ್ಲಿ 341 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಬಂಗಾಳ ತಂಡವು 273 ರನ್‌ಗಳಿಗೆ ಆಲೌಟ್ ಆಯಿತು. ಮೂರನೇ ದಿನವಾದ ಗುರುವಾರದ ಅಂತ್ಯಕ್ಕೆ ಮಧ್ಯಪ್ರದೇಶ ತಂಡವು ಎರಡನೇ ಇನಿಂಗ್ಸ್‌ನಲ್ಲಿ 63 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 163 ರನ್ ಗಳಿಸಿತು. ಒಟ್ಟು 231 ರನ್‌ಗಳ ಮುನ್ನಡೆ ಸಾಧಿಸಿತು. ಆದಿತ್ಯ ಶ್ರೀವಾಸ್ತವ (ಬ್ಯಾಟಿಂಗ್ 34, 90ಎಸೆತ) ಮತ್ತು ರಜತ್ ಪಾಟೀದಾರ್ (ಬ್ಯಾಟಿಂಗ್ 63, 109ಎಸೆತ) ಕ್ರೀಸ್‌ನಲ್ಲಿದ್ದಾರೆ.

ಬಂಗಾಳದ ಮನೋಜ್ ತಿವಾರಿ ಮತ್ತು ಶಾಬಾಜ್ ಆತ್ಮವಿಶ್ವಾಸದಿಂದ ಆಡಿದರು. ಮನೋಜ್ (102; 211ಎ) ಮತ್ತು ಶಾಬಾಜ್ (116; 209ಎ) ಆರನೇ ವಿಕೆಟ್ ಜೊತೆಯಾಟದಲ್ಲಿ 183 ರನ್‌ಗಳನ್ನೂ ಸೇರಿಸಿದರು. ಇಬ್ಬರೂ ತಲಾ ಒಂದು ಡಜನ್ ಬೌಂಡರಿ ಬಾರಿಸಿದರು.

ಹೈಕೋರ್ಟ್ ಮೊರೆ ಹೋದ ಅರ್ಚನಾ

ಬೆಂಗಳೂರು: ಕಾಮನ್‌ವೆಲ್ತ್ ಕ್ರೀಡಾಕೂಟದ ಟೇಬಲ್ ಟೆನಿಸ್ ತಂಡಕ್ಕೆ ತಮ್ಮನ್ನು ಆಯ್ಕೆ ಮಾಡದಿರುವುದನ್ನು ಪ್ರಶ್ನಿಸಿ, ಕರ್ನಾಟಕದ ಆಟಗಾರ್ತಿ ಅರ್ಚನಾ ಕಾಮತ್ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಅರ್ಚನಾ ಅವರ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ನೇತೃತ್ವದ ಪೀಠ ಮಧ್ಯಂತರ ಆದೇಶ ಹೊರಡಿಸಿದ್ದು, ಮುಂದಿನ ವಿಚಾರಣೆವರೆಗೆ ಭಾರತ ಮಹಿಳಾ ಟಿಟಿ ತಂಡದ ಪಟ್ಟಿಯನ್ನು ಕಾಮನ್‌ವೆಲ್ತ್ ಕೂಟಕ್ಕೆ ಕಳುಹಿಸಬಾರದು ಎಂದು ಹೇಳಿದೆ. ವಿಚಾರಣೆಯನ್ನು ಜೂನ್ 22ಕ್ಕೆ ಮುಂದೂಡಿದೆ.

ನ್ಯಾಯಾಲಯ ಈ ಸಂಬಂಧ ಭಾರತ ಟೇಬಲ್ ಟೆನಿಸ್ ಫೆಡರೇಷನ್‌ಗೆ ನೋಟಿಸ್ ಕೂಡಾ ಜಾರಿಗೊಳಿಸಿದೆ. ಅರ್ಚನಾ ಅವರನ್ನು ಆರಂಭದಲ್ಲಿ ತಂಡಕ್ಕೆ ಸೇರಿಸಿಕೊಂಡಿದ್ದರೂ, ಬಳಿಕ ತಾಂತ್ರಿಕ ಕಾರಣ ನೀಡಿ ಕೈಬಿಡಲಾಗಿತ್ತು.

ಐಸಿಸಿ ಅಂಪೈರ್ ಪ್ಯಾನೆಲ್‌ನಲ್ಲಿ ನಿತಿನ್ ಮೆನನ್

ರಾಜ್‌ಕೋಟ್ (ಪಿಟಿಐ): ಭಾರತದ ಅಂಪೈರ್ ನಿತಿನ್ ಮೆನನ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಅಂಪೈರ್ಸ್ ಎಲೀಟ್ ಪ್ಯಾನೆಲ್‌ನಲ್ಲಿ ತಮ್ಮ ಸ್ಥಾನ ಉಳಿಸಿಕೊಂಡಿದ್ದಾರೆ.

'ಐಸಿಸಿಯು ಈಚೆಗೆ ಮೆನನ್ ಅವರಿಗೆ ಒಂದು ವರ್ಷದ ಸೇವಾವಧಿಯನ್ನು ವಿಸ್ತರಿಸಿದೆ. ಭಾರತದಲ್ಲಿ ಅವರು ಈಗ ಅಗ್ರಮಾನ್ಯ ಅಂಪೈರ್ ಆಗಿದ್ದಾರೆ. ಇದೇ ತಿಂಗಳು ಅವರು ತಟಸ್ಥ ಅಂಪೈರ್ ಆಗಿ ಟೆಸ್ಟ್‌ಗೆ ಪದಾರ್ಪಣೆ ಮಾಡಲಿದ್ದಾರೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮೂಲಗಳು ತಿಳಿಸಿವೆ. 2020ರಲ್ಲಿ ಮೆನನ್ ಅವರನ್ನು ಎಲೀಟ್ ಪ್ಯಾನೆಲ್‌ಗೆ ಬಡ್ತಿ ನೀಡಲಾಗಿತ್ತು.

ಬ್ಯಾಸ್ಕೆಟ್‌ಬಾಲ್: ಭಾರತಕ್ಕೆ ಗೆಲುವು

ಬೆಂಗಳೂರು: ಭಾರತ ಬ್ಯಾಸ್ಕೆಟ್‌ಬಾಲ್ ತಂಡ ದೋಹಾದಲ್ಲಿ ನಡೆಯುತ್ತಿರುವ ಫಿಬಾ 16 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಭಾರತ 97–51 ರಲ್ಲಿ ಇಂಡೊನೇಷ್ಯಾ ತಂಡವನ್ನು ಮಣಿಸಿತು.

ಭದ್ರತಾ ಶುಲ್ಕ ಇಳಿಕೆಗೆ ಕೆಎಸ್‌ಸಿಎ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 19ರಂದು ಭಾರತ ಹಾಗೂ ದಕ್ಷಿಣ ಆಫ್ರಿಕಾ ಟಿ20 ಕ್ರಿಕೆಟ್ ಪಂದ್ಯ ನಡೆಯಲಿರುವ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬುಧವಾರ ಭೇಟಿ ನೀಡಿದ ಗೃಹ ಸಚಿವ ಆರಗ ಜ್ಞಾನೇಂದ್ರ, ಪೊಲೀಸರ ಭದ್ರತೆ ಪರಿಶೀಲಿಸಿದರು.

ಕ್ರೀಡಾಂಗಣ ಸಿದ್ಧವಾಗಿದ್ದು, ಹಲವು ದಿನಗಳಿಂದಲೂ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ. ಕ್ರೀಡಾಂಗಣದ ಸುತ್ತಮುತ್ತ 24 ಗಂಟೆಯೂ ಕಾವಲು ಕಾಯುತ್ತಿದ್ದಾರೆ. ಆರಗ ಜ್ಞಾನೇಂದ್ರ ಅವರು ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಅಧ್ಯಕ್ಷ ರೋಜರ್ ಬಿನ್ನಿ ಹಾಗೂ ಪದಾಧಿಕಾರಿಗಳು ಜೊತೆಗಿದ್ದರು.

ಶುಲ್ಕ ಇಳಿಕೆಗೆ ಮನವಿ: 'ಕ್ರೀಡಾಂಗಣಕ್ಕೆ ಭದ್ರತೆ ಕಲ್ಪಿಸಲು ಪಡೆಯುವ ಶುಲ್ಕವನ್ನು ನಾಲ್ಕು ಪಟ್ಟು ಹೆಚ್ಚಿಸಲಾಗಿದೆ. ಇದು ಸಂಸ್ಥೆಗೆ ಹೊರಯಾಗುತ್ತಿದೆ. ಶುಲ್ಕ ಇಳಿಕೆ ಮಾಡಲು ಕ್ರಮಕೈಗೊಳ್ಳಬೇಕು' ಎಂದು ಸಂಸ್ಥೆಯ ಪದಾಧಿಕಾರಿಗಳು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅರಗ ಜ್ಞಾನೇಂದ್ರ, 'ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ರಾಷ್ಟ್ರಪತಿ ಚುನಾವಣೆ: ವಿಶೇಷ ಪೆನ್ ಬಳಕೆ

ನವದೆಹಲಿ (ಪಿಟಿಐ): 'ರಾಷ್ಟ್ರಪತಿ ಚುನಾವಣೆಯಲ್ಲಿ ಮತದಾನದ ಗೋಪ್ಯತೆ ರಕ್ಷಿಸಲು ಮತದಾರರಿಗೆ ವಿಶೇಷವಾಗಿ ರೂಪಿಸಿರುವ, ನೇರಳೆ ಬಣ್ಣದ ಶಾಯಿಯುಳ್ಳ ಪೆನ್ ಒದಗಿಸಬೇಕು' ಎಂದು ಚುನಾವಣಾ ಆಯೋಗವು ಚುನಾವಣಾಧಿಕಾರಿಗಳಿಗೆ ಸೂಚಿಸಿದೆ.

ಗೋಪ್ಯತೆಯ ರಕ್ಷಣೆ ಮತ್ತು ಮತದಾರರ ಗುರುತು ಪತ್ತೆಯಾಗುವ ಸಾಧ್ಯತೆ ತಪ್ಪಿಸಲು ಪ್ರತಿಯೊಬ್ಬ ಮತದಾರರಿಗೆ ನೇರಳೆ ಶಾಯಿಯುಳ್ಳ ವಿಶೇಷ ಪೆನ್ ಒದಗಿಸಬೇಕು. ಅಗತ್ಯವಿರುವ ಸಂಖ್ಯೆಯಷ್ಟು ಪೆನ್‌ಗಳನ್ನು ಆಯೋಗವು ಚುನಾವಣಾಧಿಕಾರಿಗಳಿಗೆ ಒದಗಿಸಲಿದೆ. ಮತದಾರರು ಈ ಪೆನ್ ಬಳಸಿಯೇ ತಮ್ಮ ಪ್ರಾಶಸ್ತ್ಯದ ಅನುಸಾರ ಮತಚಲಾಯಿಸಬೇಕು ಎಂದು ಸೂಚಿಸಲಾಗಿದೆ.

ಉಲ್ಲೇಖಿತ ಪೆನ್ ಹೊರತುಪಡಿಸಿ, ಇತರೆ ಯಾವುದೇ ಪೆನ್ ಬಳಸಿ ಮತ ಚಲಾವಣೆ ಮಾಡಿದಲ್ಲಿ ಅದು ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣಾ ನಿಯಮಗಳು 1974ರ ಅನ್ವಯ ಅಸಿಂಧುಗೊಳ್ಳಲಿದೆ ಎಂದು ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿ ಅವರು ಈ ಸಂಬಂಧ ವಿವಿಧ ರಾಜ್ಯಗಳ ಚುನಾವಣಾಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಸಂಸತ್ತಿನ ಉಭಯ ಸದನಗಳ ಸದಸ್ಯರು, ರಾಜ್ಯಗಳ ವಿಧಾನಸಭೆ ಹಾಗೂ ದೆಹಲಿ, ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳ ಚುನಾಯಿತ ಸದಸ್ಯರು ಮತದಾರರಾಗಿರುತ್ತಾರೆ. ಸಂಸತ್ತಿನ ಉಭಯ ಸದನಗಳಿಗೆ ನಾಮಕರಣಗೊಂಡ ಹಾಗೂ ರಾಜ್ಯಗಳ ವಿಧಾನಪರಿಷತ್ತುಗಳ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.

ನೂತನ ರಾಷ್ಟ್ರಪತಿ ಆಯ್ಕೆಗೆ ಜುಲೈ 18ರಂದು ಚುನಾವಣೆ ನಡೆಯಲಿದ್ದು, ಮತಗಳ ಎಣಿಕೆ ಪ್ರಕ್ರಿಯೆ ರಾಷ್ಟ್ರ ರಾಜಧಾನಿಯಲ್ಲಿ ಜುಲೈ21 ರಂದು ನಡೆಯಲಿದೆ. ರಾಜಕೀಯ ಪಕ್ಷಗಳು ಈ ಚುನಾವಣೆಯಲ್ಲಿ ತನ್ನ ಸದಸ್ಯರಿಗೆ ವಿಪ್ ಜಾರಿ ಮಾಡಲು ಅವಕಾಶವಿರುವುದಿಲ್ಲ.

ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್

'ಶಾಂತಿ ಭಂಗ ಮಾಡಿದರೆ ತಕ್ಕ ಉತ್ತರ'

ಶ್ರೀನಗರ (ಪಿಟಿಐ): 'ಭಾರತದ ಸಾರ್ವಭೌಮತೆ ಮತ್ತು ಏಕತೆಗೆ ಭಂಗ ತರುವ ಯತ್ನಗಳು ನಡೆದಲ್ಲಿ ಅದಕ್ಕೆ ತಕ್ಕ ಪ್ರತ್ಯುತ್ತರ ನೀಡಲಾಗುತ್ತದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪಾಕಿಸ್ತಾನಕ್ಕೆ ಎಚ್ಚರಿಸಿದ್ದಾರೆ.

ಗಡಿಯಲ್ಲಿ ಒಳನುಸುಳುವಿಕೆ ಮತ್ತು ಭಯೋತ್ಪಾದಕ ಕೃತ್ಯಗಳ ಮೂಲಕ ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ಪರಿಸ್ಥಿತಿಯನ್ನು ಕದಡಲು ಪಾಕಿಸ್ತಾನವು ನಿರಂತರವಾಗಿ ಯತ್ನಿಸುತ್ತಿದೆ ಎಂದೂ ಇದೇ ಸಂದರ್ಭದಲ್ಲಿ ಅವರು ಆರೋಪಿಸಿದರು.

ಬಾರಾಮುಲ್ಲಾ ಜಿಲ್ಲೆಯಲ್ಲಿ ಸೇನಾ ಪಡೆಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ನೆರೆ ರಾಷ್ಟ್ರವು ನಿರಂತರವಾಗಿ ಭಾರತ ವಿರೋಧಿ ಕೃತ್ಯಗಳಲ್ಲಿ ತೊಡಗಿದೆ. ಆದರೆ, ಶಾಂತಿ ಕದಡುವ ಇಂಥ ಕೃತ್ಯಗಳಿಗೆ ಪ್ರತ್ಯುತ್ತರ ನೀಡಲು ಸೇನೆ ಸನ್ನದ್ಧವಾಗಿದೆ' ಎಂದು ಹೇಳಿದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಗುರುವಾರ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದು, ಭದ್ರತಾ ಪರಿಸ್ಥಿತಿಯನ್ನು ಪರಿಶೀಲಿಸಿದರು –ಪಿಟಿಐ ಚಿತ್ರ

ಇತ್ತೀಚಿನ ದಿನಗಳಲ್ಲಿ ಭಯೋತ್ಪಾದನಾ ಕೃತ್ಯಗಳು ತಗ್ಗಿವೆ. ಇದಕ್ಕೆ ಸೇನಾ ಪಡೆಗಳು, ಬಿಎಸ್‌ಎಫ್, ಸಿಆರ್‌ಪಿಎಫ್, ಜಮ್ಮು ಮತ್ತು ಕಾಶ್ಮೀರ ಪೊಲೀಸರ ಅವಿರತ ಶ್ರಮವು ಕಾರಣವಾಗಿದೆ ಎಂದು ಸಚಿವರು ಶ್ಲಾಘಿಸಿದರು.

ಭೂಸೇನೆಯ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ, ಸೇನಾ ಪ್ರಮುಖರಾದ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ, ಲೆಫ್ಟಿನೆಂಟ್ ಜನರಲ್ ಅಹುಜಾ, ಮೇಜರ್ ಜನರಲ್ ಅಜಯ್ ಚಾಂದ್‌ಪುರಿಯಾ ಅವರೂ ಸಚಿವರ ಜೊತೆಗಿದ್ದರು.

ವಿಶ್ವಕ್ಕೆ 'ವಸುದೈವ ಕುಟುಂಬಕಂ' ಸಂದೇಶ ನೀಡಿದ ಭಾರತ ಎಂದಿಗೂ ಶಾಂತಿಪ್ರಿಯ ರಾಷ್ಟ್ರ. ಯಾವುದೇ ರಾಷ್ಟ್ರಕ್ಕೆ ಯಾವುದೇ ರೀತಿ ನೋವುಂಟು ಮಾಡಲು ಭಾರತ ಯತ್ನಿಸಿಲ್ಲ ಅಥವಾ ಯಾವುದೇ ದೇಶದ ಒಂದಿಂಚೂ ಭೂಮಿ ಕಬಳಿಸಿಲ್ಲ ಎಂದು ಹೇಳಿದರು.

ಭವಿಷ್ಯದ ಸವಾಲುಗಳನ್ನು ಸೇನಾಪಡೆಗಳು ತನ್ನ ಪೂರ್ಣ ಸಾಮರ್ಥ್ಯದೊಂದಿಗೆ ಎದುರಿಸುವ ವಿಶ್ವಾಸವಿದೆ ಎಂದು ಆಶಿಸಿದರು.

ಅಮೆರಿಕ ರಕ್ಷಣಾ ಇಲಾಖೆಗೆ ರಾಧಾ ಅಯ್ಯಂಗಾರ್ ನೇಮಕ

ವಾಷಿಂಗ್ಟನ್ (ಪಿಟಿಐ): ಭಾರತೀಯ ಮೂಲದ ಭದ್ರತಾ ತಜ್ಞೆ ರಾಧಾ ಅಯ್ಯಂಗಾರ್ ಪ್ಲಂಬ್ ಅವರನ್ನು ಅಮೆರಿಕದ ರಕ್ಷಣಾ ಇಲಾಖೆಯ (ಪೆಂಟಗನ್) ಸ್ವಾಧೀನ ಮತ್ತು ಸುಸ್ಥಿರತೆಯ ರಕ್ಷಣಾ ಉಪ ಅಧೀನ ಕಾರ್ಯದರ್ಶಿ ಹುದ್ದೆಗೆ ಅಧ್ಯಕ್ಷ ಜೋ ಬೈಡನ್ ನೇಮಕ ಮಾಡಿದ್ದಾರೆ.

ರಾಧಾ

ರಾಧಾ ಅಯ್ಯಂಗಾರ್ ಪ್ಲಂಬ್ ಅವರು ಇದಕ್ಕೆ ಮೊದಲು ಗೂಗಲ್ ಕಂಪನಿಯಲ್ಲಿ ನಂಬಿಕೆ ಮತ್ತು ಸುರಕ್ಷತೆಯಲ್ಲಿನ ಸಂಶೋಧನೆ ವಿಭಾಗದ ನಿರ್ದೇಶಕಿಯಾಗಿದ್ದರು. ವ್ಯಾಪಾರ ವಿಶ್ಲೇಷಣೆ, ದತ್ತಾಂಶ ವಿಜ್ಞಾನ ಮತ್ತು ತಾಂತ್ರಿಕ ಸಂಶೋಧನೆಯಲ್ಲಿ ಕಾರ್ಯಕಾರಿ ತಂಡಗಳನ್ನು ಮುನ್ನಡೆಸುತ್ತಿದ್ದರು.

4 ಐರೋಪ್ಯ ರಾಷ್ಟ್ರ ನಾಯಕರಿಂದ ಉಕ್ರೇನ್ ಭೇಟಿ

ಕೀವ್ (ಎಪಿ): ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧ ಮುಂದುವರಿದಿರುವ ನಡುವೆಯೇ, ಉಕ್ರೇನ್‌ಗೆ ಬೆಂಬಲ ನೀಡುವ ಭಾಗವಾಗಿ ಫ್ರಾನ್ಸ್, ಜರ್ಮನಿ, ಇಟಲಿ ಮತ್ತು ರೊಮೇನಿಯಾದ ನಾಯಕರು ಗುರುವಾರ ಇಲ್ಲಿನ ಇರ್ಪಿನ್ ನಗರಕ್ಕೆ ಭೇಟಿ ನೀಡಿದರು. ಈ ವೇಳೆ ಉಕ್ರೇನ್‌ನಲ್ಲಿನ ರಷ್ಯಾದ ಅಕ್ರಮ ದಾಳಿಯು ಇಲ್ಲಿಗೇ ನಿಲ್ಲಬೇಕು ಎಂದು ಒತ್ತಾಯಿಸಿದರು.

ಸಂಕ್ಷಿಪ್ತ ಸುದ್ದಿ

ಅತ್ಯಾಚಾರ ದೂರು: 75 ವರ್ಷದ ಉದ್ಯಮಿ ಬಂಧನ

ಮುಂಬೈ (ಪಿಟಿಐ): ಸಂಬಂಧಿಯೂ ಆಗಿದ್ದ 35 ವರ್ಷದ ಮಹಿಳೆ ಮೇಲೆ ಅತ್ಯಾಚಾರ ಎಸಗಿ, ತನಗಿರುವ ಭೂಗತದೊರೆ ದಾವೂದ್ ಇಬ್ರಾಹಿಂ ಸಂಪರ್ಕ ಬಳಸಿ ಕೊಲೆ ಮಾಡುವುದಾಗಿ ಬೆದರಿಕೆ ಒಡ್ಡಿದ್ದ 75 ವರ್ಷದ ಉದ್ಯಮಿಯನ್ನು ಪೊಲೀಸರು ಬಂಧಿಸಿದ್ದಾರೆ.

ಸಂತ್ರಸ್ತ ಮಹಿಳೆ ಈ ಸಂಬಂಧ ಅಂಬೋಲಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. 2007ರಿಂದ ಉದ್ಯಮಿ ಹಲವು ಬಾರಿ ಮುಂಬೈನ ವಿವಿಧ ಸ್ಥಳಗಳಿಗೆ ಕರೆದೊಯ್ದು ತನ್ನ ಮೇಲೆ ಅತ್ಯಾಚಾರ ಎಸಗಿದ್ದಾನೆ. ಅತ್ಯಾಚಾರ ಕುರಿತಂತೆ ಯಾರಿಗಾದರೂ ಹೇಳಿದರೆ ನಿನ್ನನ್ನು ಕೊಲೆ ಮಾಡಿಸುತ್ತೇನೆ ಎಂದು ಬೆದರಿಸಿದ್ದ ಎಂದಿದ್ದಾರೆ.

ಪಾಕ್: ಇಬ್ಬರು ಹಿಂದೂ ಬಾಲಕಿಯರ ಮೇಲೆ ಅತ್ಯಾಚಾರ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಇಬ್ಬರು ಹಿಂದೂ ಬಾಲಕಿಯರ (ಸಹೋದರಿಯರ) ಮೇಲೆ ಇಬ್ಬರು ಪುರುಷರು ಅತ್ಯಾಚಾರವೆಸಗಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಲಾಹೋರ್‌ನಿಂದ 300 ಕಿ.ಮೀ ದೂರದ ಬಹವಾಲ್‌ನಗರ ನಿವಾಸಿಗಳಾದ 16 ಮತ್ತು 17 ವರ್ಷದ ಬಾಲಕಿಯರು ಜೂನ್ 5ರ ಬೆಳಿಗ್ಗೆ ಶೌಚಕ್ಕೆಂದು ಮನೆಯಿಂದ ಹೊರಗೆ ಹೋದಾಗ, ಬಂದೂಕು ಹಿಡಿದಿದ್ದ ಇಬ್ಬರು ಬಾಲಕಿಯರನ್ನು ಹೆದರಿಸಿ ಅತ್ಯಾಚಾರ ಎಸಗಿ, ಪರಾರಿಯಾಗಿದ್ದಾರೆ.

ಆರೋಪಿಗಳನ್ನು ಉಮೈರ್ ಅಷ್ಫಾಕ್ ಮತ್ತು ಕಾಶಿಫ್ ಅಲಿ ಎಂದು ಗುರುತಿಸಲಾಗಿದೆ.

ಸಕ್ರಿಯ ರಾಜಕಾರಣ ಸೇರ್ಪಡೆ ಯೋಜನೆ ಕೈಬಿಟ್ಟ ನರೇಶ್ ಪಟೇಲ್

ಅಹಮದಾಬಾದ್(ಪಿಟಿಐ): ಸಕ್ರಿಯ ರಾಜಕಾರಣಕ್ಕೆ ಮರಳುವ ಕುರಿತು ಕಳೆದ 6 ತಿಂಗಳಿಂದ ಗೋಪ್ಯತೆ ಕಾಪಾಡಿಕೊಂಡು ಬಂದಿದ್ದ ಗುಜರಾತ್ ಪಾಟಿದಾರ್ ಸಮುದಾಯದ ಪ್ರಭಾವಿ ನಾಯಕ ಹಾಗೂ ಶ್ರೀ ಖೋಡಲ್ಧಾಮ್ ಟ್ರಸ್ಟ್ ಮುಖ್ಯಸ್ಥ ನರೇಶ್ ಪಟೇಲ್ ಅವರು ತಾವು ಸದ್ಯಕ್ಕೆ ಸಕ್ರಿಯ ರಾಜಕಾರಣಕ್ಕೆ ಸೇರುವುದಿಲ್ಲ ಎಂದು ಘೋಷಣೆ ಮಾಡಿದ್ದಾರೆ.

ಇದೇ ವರ್ಷದ ಡಿಸೆಂಬರ್‌ನಲ್ಲಿ ವಿಧಾನಸಭೆ ಚುನಾವಣೆ ಎದುರಿಸಲಿರುವ ಗುಜರಾತ್‌ನಲ್ಲಿ ನರೇಶ್ ಪಟೇಲ್ ಅವರ ಪಕ್ಷ ಸೇರ್ಪಡೆಯಿಂದ ಪಕ್ಷಕ್ಕೆ ಬಲ ಬರಲಿದೆ ಎಂದು ಕಾಂಗ್ರೆಸ್ ಭರವಸೆಯಿಟ್ಟಿತ್ತು. ಈ ಕುರಿತಾಗಿ ದೆಹಲಿಯಲ್ಲಿ ಹಿರಿಯ ಕಾಂಗ್ರೆಸ್ ನಾಯಕರ ಜೊತೆ ಹಲವು ಸುತ್ತಿನ ಮಾತುಕತೆಗಳು ಸಹ ನಡೆದಿದ್ದವು.

ಅಮೆರಿಕ ನೆರವು

ವಾಷಿಂಗ್ಟನ್ (ಪಿಟಿಐ): ಸಾಂಕ್ರಾಮಿಕ ರೋಗಗಳ ಆರಂಭಿಕ ಪತ್ತೆ ಮತ್ತು ಅವುಗಳ ನಿಯಂತ್ರಣಕ್ಕೆ ತ್ವರಿತ, ಪರಿಣಾಮಕಾರಿ ಕಾರ್ಯಾಚರಣೆ ಕೈಗೊಳ್ಳಲು ಅಮೆರಿಕವು ಭಾರತದ ಮೂರು ವೈದ್ಯಕೀಯ ಸಂಶೋಧನಾ ಸಂಸ್ಥೆಗಳಿಗೆ ₹956 ಕೋಟಿ (12.24 ಕೋಟಿ ಡಾಲರ್) ಆರ್ಥಿಕ ನೆರವು ನೀಡುವುದಾಗಿ ಘೋಷಿಸಿದೆ.

ದೇಶದ ಮೂರು ಅತ್ಯುನ್ನತ ಆರೋಗ್ಯ ಸಂಶೋಧನಾ ಸಂಸ್ಥೆಗಳಾದ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್), ರಾಷ್ಟ್ರೀಯ ವೈರಾಲಜಿ ಸಂಸ್ಥೆ (ಎನ್‌ಐವಿ) ಮತ್ತು ರಾಷ್ಟ್ರೀಯ ಸಾಂಕ್ರಾಮಿಕ ರೋಗಗಳ ಸಂಸ್ಥೆಗಳಿಗೆ (ಎನ್‌ಐಇ) ಐದು ವರ್ಷಗಳ ಅವಧಿಯಲ್ಲಿ ಈ ನೆರವು ನೀಡುವುದಾಗಿ ಅಮೆರಿಕದ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರ (ಸಿಡಿಸಿ) ತಿಳಿಸಿದೆ.

ಭಾರತವನ್ನು ಸಾಂಕ್ರಾಮಿಕ ರೋಗಗಳ ಬೆದರಿಕೆಯಿಂದ ಸುರಕ್ಷಿತವಾಗಿಸಲು ಹಾಗೂ ಐಸಿಎಂಆರ್ ಸಂಸ್ಥೆಗಳ ಕಾರ್ಯ ಚಟುವಟಿಕೆಯನ್ನು ಮತ್ತಷ್ಟು ವೇಗಗೊಳಿಸಲು ಈ ಮೊತ್ತವು ನೆರವಾಗಲಿದೆ ಎಂದು ಸಿಡಿಸಿ ಹೇಳಿದೆ.

ಆಕ್ಷೇಪಾರ್ಹ ಹೇಳಿಕೆ: ಕಾಂಗ್ರೆಸ್ ಮುಖಂಡನ ಬಂಧನ

ನಾಗಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಆರೋಪದಡಿ ಕಾಂಗ್ರೆಸ್ ಮುಖಂಡ ಶೇಖ್ ಹುಸೇನ್ ಅವರನ್ನು ಗುರುವಾರ ಪೊಲೀಸರು ಬಂಧಿಸಿದ್ದು, ಬಳಿಕ ಜಾಮೀನು ಆಧರಿಸಿ ಬಿಡುಗಡೆ ಮಾಡಿದರು.

ನಾಗಪುರ ನಗರ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಹುಸೇನ್ ವಿರುದ್ಧ ಗಿಟ್ಟಿಖಾದನ್ ಠಾಣೆಗೆ ಬಿಜೆಪಿ ಮುಖಂಡರು ದೂರು ನೀಡಿದ್ದರು.

ಗಾಲ್ಫ್: ಜಂಟಿ ಮುನ್ನಡೆಯಲ್ಲಿ ಪ್ರಣವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಣವಿ ಅರಸ್ ಮತ್ತು ರಿಧಿಮಾ ದಿಲಾವರಿ ಅವರು ಇಲ್ಲಿ ನಡೆಯುತ್ತಿರುವ ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್‌ನ ಎಂಟನೇ ಲೆಗ್ ಟೂರ್ನಿಯಲ್ಲಿ ಎರಡನೇ ಸುತ್ತಿನ ಬಳಿಕ ಜಂಟಿ ಮುನ್ನಡೆಯಲ್ಲಿದ್ದಾರೆ.

ಮೊದಲ ಸುತ್ತಿನಲ್ಲಿ ನೀರಸ ಪ್ರದರ್ಶನ ನೀಡಿದ್ದ ಪ್ರಣವಿ, ಗುರುವಾರ ಲಯ ಕಂಡುಕೊಂಡರು. ಇದೀಗ ಅವರು 143 ಸ್ಕೋರ್‌ಗಳನ್ನು ಹೊಂದಿದ್ದಾರೆ. ಮೊದಲ ದಿನದ ಸ್ಪರ್ಧೆ ಕೊನೆಗೊಳಿಸಲು 74 ಅವಕಾಶಗಳನ್ನು ಬಳಸಿಕೊಂಡಿದ್ದ ಪ್ರಣವಿ, ಎರಡನೇ ದಿನ ನಿಖರ ಪ್ರದರ್ಶನ (69) ನೀಡಿದರು.

ರಿಧಿಮಾ ಅವರು ಮೊದಲ ದಿನದ ಪ್ರದರ್ಶನ (69) ಪುನರಾವರ್ತಿಸುವಲ್ಲಿ ವಿಫಲರಾಗಿ 74 ಅವಕಾಶಗಳನ್ನು ಬಳಸಿಕೊಂಡರು.

ಅಫ್ಶಾನ್ ಫಾತಿಮಾ (73–73) ಮೂರನೇ ಸ್ಥಾನದಲ್ಲಿದ್ದಾರೆ. ಸೆಹೆರ್ ಅತ್ವಾಲ್ (76–71), ಜಾಹ್ನವಿ ಬಕ್ಷಿ (73–74) ಮತ್ತು ತ್ರಿಮನ್ ಸುಲಜಾ (72–75) ಜಂಟಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ಸಿದ್ಧಿ ಕಪೂರ್ (76–72) ಮತ್ತು ಗೌರಿಕಾ ಬಿಷ್ಣೋಯ್ (75–73) ಅವರು ಜಂಟಿ ಏಳನೇ ಸ್ಥಾನದಲ್ಲಿದ್ದಾರೆ.

ಮೈಸೂರಿನ ಪ್ರಣವಿ ಅರಸ್ ಅವರು ಈ ಋತುವಿನ ನಾಲ್ಕನೇ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ.

ಪ್ರಣವಿ ಅರಸ್

ಯಂಗ್‌ಸ್ಟರ್ಸ್ ಜಯಭೇರಿ

ಬೆಂಗಳೂರು: ಯಂಗ್‌ಸ್ಟರ್ಸ್ ತಂಡದವರು ಇಲ್ಲಿ ಆರಂಭವಾದ ಕೆಎಸ್‌ಎಫ್‌ಎ ಮಹಿಳಾ 'ಬಿ' ಡಿವಿಷನ್ ಫುಟ್‌ಬಾಲ್ ಲೀಗ್‌ನಲ್ಲಿ ಶುಭಾರಂಭ ಮಾಡಿದರು.

ಗುರುವಾರ ನಡೆದ ಪಂದ್ಯದಲ್ಲಿ ಯಂಗ್‌ಸ್ಟರ್ಸ್ ತಂಡ 2–0 ಗೋಲುಗಳಿಂದ ಬೆಂಗಳೂರು ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು. ಎಸ್.ಮಿಶೆಲೆಸ್ (12ನೇ ನಿ.) ಮತ್ತು ನಂದಿತಾ ಬಾಲಾಜಿ (36) ಗೋಲು ಗಳಿಸಿದರು.

ಜಿಆರ್‌ಕೆ ಗ್ಲಿಟ್ಟರಿಂಗ್ ಸ್ಟಾರ್ಸ್–ಬಾಲ್ಡ್‌ವಿನ್ ಇಂಟರ್‌ನ್ಯಾಷನಲ್ ಎಫ್‌ಸಿ ತಂಡಗಳ ನಡುವಿನ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.

ಫುಟ್‌ಬಾಲ್: ಅದಿರಾ ನೇತೃತ್ವ

ಬೆಂಗಳೂರು: ಅದಿರಾ ಘೋಷ್ ಅವರು ಜೂನ್ 21 ರಿಂದ ಜುಲೈ 4ರ ವರೆಗೆ ಅಸ್ಸಾಂನ ಗುವಾಹಟಿಯಲ್ಲಿ ನಡೆಯಲಿರುವ ಹೀರೊ ಜೂನಿಯರ್ಸ್ (17 ವರ್ಷದೊಳಗಿನವರು) ರಾಷ್ಟ್ರೀಯ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿರುವ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಕರ್ನಾಟಕ ತಂಡ ಶುಕ್ರವಾರ ಗುವಾಹಟಿಗೆ ಪ್ರಯಾಣ ಬೆಳೆಸಲಿದೆ.

ತಂಡ ಹೀಗಿದೆ: ಅರುಣಿ ಸಿಂಗ್, ಶಿವಾನಿ ಸಾವಂತ್ (ಗೋಲ್‌ಕೀಪರ್‌ಗಳು), ಅದಿರಾ ಘೋಷ್ (ನಾಯಕಿ), ರಿಯಾ ಗ್ಲೈನ್ಸ್, ಚಾಂದ್‌ನೀ, ಸಿಮ್ರಾನ್ ಭಾರ್ಗವ, ಸಯಾಲಿ ದೇಸಾಯಿ, ಶ್ವೇತಾ ಇಳಂಗೋವನ್, ಅಹಾನಾ ಪುರೋಹಿತ್, ಲಿಪಿಕಾ ಗುಪ್ತಾ, ಮೆರಿಯೊನ್ ಜೋನ್ಸ್, ವರ್ಷಿತಾ ವಿಜಯ್, ರಿವ್ಕಾ ರಾಮ್ಜಿ, ಮೈಥಿಲಿ ಪಾರ್ವತಿ ವೈದ್ಯ, ತಾನ್ವಿ ವಿ. ಗಾವಡೆ, ಮೆಹರ್ ಕೌರ್ ಮೆಹ್ತಾ, ಆರುಷಿ ಸಂತೋಷ್, ತ್ರೆಯಾ ಮೆನನ್, ಜಿಯಾ ವೋರಾ, ರಚನಾ ಶೆಟ್ಟಿ, ಪಿ.ಶಿವಶಂಕರಿ (ಮ್ಯಾನೇಜರ್), ಅಶ್ವಿತಾ ಶೆಟ್ಟಿ (ಕೋಚ್)

ಪ್ಯಾರಾ ಕ್ಲೈಂಬಿಂಗ್: ಮಣಿಕಂಠನ್‌ಗೆ ಬೆಳ್ಳಿ ಪದಕ

ಬೆಂಗಳೂರು: ಮಣಿಕಂಠನ್ ಕುಮಾರ್ ಅವರು ಅಮೆರಿಕದ ಸಾಲ್ಟ್‌ಲೇಕ್ ಸಿಟಿಯಲ್ಲಿ ಇತ್ತೀಚೆಗೆ ನಡೆದ ಐಎಫ್‌ಎಸ್‌ಸಿ ಪ್ಯಾರಾ ಕ್ಲೈಂಬಿಂಗ್ ವಿಶ್ವಕಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದರು.

'ಮಣಿಕಂಠನ್ ಅವರು ಅಂತರರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಇದುವರೆಗೆ ಐದು ಚಿನ್ನ, 11 ಬೆಳ್ಳಿ ಮತ್ತು 3 ಕಂಚಿನ ಪದಕ ಜಯಿಸಿದ್ದಾರೆ. ಭಾರತದ ಬೇರೆ ಯಾವುದೇ ಸ್ಪರ್ಧಿ ಕೂಡಾ ಇಂತಹ ಸಾಧನೆ ಮಾಡಿಲ್ಲ' ಎಂದು 2015 ರಿಂದಲೂ ಮಣಿಕಂಠನ್ ಅವರಿಗೆ ಪ್ರಾಯೋಜಕತ್ವ ವಹಿಸಿರುವ ಎಸ್‌ಜೆಎಸ್ ಎಂಟರ್‌ಪ್ರೈಸಸ್ ಲಿಮಿಟೆಡ್ ಪ್ರಕಟಣೆಯಲ್ಲಿ ತಿಳಿಸಿದೆ.